ಸಂಪುಟ 15
ಸಂಚಿಕೆ 30

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
1 ಆಗಸ್ಟ್ 1993

ಕಾವೇರಿ ನೀರಿನ ವಿವಾದ

ಕಾಂಗ್ರೆ-ಅಣ್ಣಾ ಡಿಎಂಕೆ ಸಂದರ್ಭಸಾಧಕ ರಾಜಕೀಯ

ಇನ್ನೇನು ಲೋಕಸಭೆಯ ಮುಂಗಾರು ಅಧಿವೇಶನ ಆರಂಭವಾಗಲಿದೆ. ಪಿ.ವಿ. ನರಸಿಂಹರಾಯರಿಗೆ ಎದೆ ನಡುಕ ಆರಂಭವಾಗಿದೆ. ಒಂದಲ್ಲ, ಎರಡು ಅವಿಶ್ವಾಸ ನಿರ್ಣಯಗಳು ಅವರಿಗೆ ಸವಾಲಾಗಿವೆ. ಯಾವ ಪ್ರಧಾನಿಯೂ ಇಲ್ಲಿಯವರೆಗೆ ಎದುರಿಸದ ರೀತಿಯಲ್ಲಿ ತಾವೇ ಸ್ವತಃ ಭ್ರಷ್ಟ ಹಣ ಪಡೆದ ಆರೋಪ ಅವರ ಎದೆ ನಡುಕಕ್ಕೆ ಮತ್ತೊಂದು ಕಾರಣ. ಅದಕ್ಕಾಗಿ ತಮ್ಮ ಕುಕೃತ್ಯಗಳಿಗೆ ದೆಂಬಲ ಕೊಡಬಹುದಾದ ಎಲ್ಲರನ್ನೂ ಗೋಗರೆಯಲು ಆರಂಭಿಸಿದ್ದಾರೆ. ಅದರಲ್ಲಿ ಇಲ್ಲಿಯವರೆಗೆ ಅಲ್ಪಸಂಖ್ಯಾತ ಕಾಂಗ್ರೆ ಪಕ್ಷದ ಊರುಗೋಲಾಗಿದ್ದ ಅಣ್ಣಾ ಡಿಎಂಕೆ ಪಕ್ಷವೂ ಒಂದು. ಇತ್ತೀಚೆಗೆ ತಾನೇ ಅಣ್ಣಾ ಡಿಎಂಕೆ ಕಾಂಗ್ರೆಸ್ಸಿನೊಂದಿಗೆ ಸಂಬಂದ ಕಡಿದುಕೊಂಡು ದೂರವಾಗಿದ್ದರಿಂದ ಅವರನ್ನು ಒಲಿಸಿಕೊಳ್ಳಲು ತೀವ್ರ ಪ್ರಯತ್ನ ನಡೆದಿದೆ.

ಇತ್ತ ತಮಿಳುನಾಡಿನಲ್ಲಿ ಅಲ್ಲಿಯ ಮುಖ್ಯಮಂತ್ರಿ ಜಯಲಲಿತಾರವರ ದುರಾಡಳಿತ, ಬಸ್‌ದರ ಮೊದಲಾದವುಗಳ ಏರಿಕೆ ಕ್ರಮಗಳು, ಸ್ವಪ್ರದರ್ಶನ, ನಿರುದ್ಯೋಗ ಭತ್ತೆ ನಿಲ್ಲಿಸಿದ್ದು, ಅನೇಕ ಭ್ರಷ್ಟಾಚಾರದ ಹಗರಣಗಳು, ಇವೆಲ್ಲವುಗಳಿಂದ ಅವರ ಜನಪ್ರಿಯತೆ ಕುಗ್ಗಿದೆ. ಅದರ ಪಕ್ಷದ ಒಳಗೆ ಮುಖ್ಯವಾಗಿ ಮಂತ್ರಿ ಮಂಡಲದ ಒಳಗೆ ಗುಂಪುಗಾರಿಕೆ ಅದರ ಫಲವಾಗಿ ಮೂರು ಜನ ಮಂತ್ರಿಗಳ ವಜಾ ಇದರಿಂದ ಉಂಟಾಗಿರುವ ಬಿಕ್ಕಟ್ಟು. ಇವೆಲ್ಲಾ ಅಣ್ಣಾ ಡಿಎಂಕೆ ಪಕ್ಷವನ್ನು ಕಾಡುತ್ತಿದೆ.

ಈ ಎಲ್ಲಾ ಓನ್ನೆಲೆಯಲ್ಲಿ ಕಾವೇರಿಯಿಂದ ತಮಿಳುನಾಡಿಗೆ ಹೆಚ್ಚು ನೀರು ಬೇಕು ಎಂಬ ಬೇಡಿಕೆಯನ್ನೆತ್ತಿ ತಮಿಳುನಾಡಿನ ಮುಖ್ಯಮಂತ್ರಿಯೇ ಉಪವಾಸ ಕುಳಿತರು. ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿಯ ಮುಖ ಪತ್ರಿಕೆ 'ತೀಕ್ಕದೀರ್' ವರ್ಣಿಸಿದಂತೆ "ಧೀಡೀರ್" ಎಂದು ಉಪವಾಸ ಕುಳಿತರು.

ಜಿ.ಎನ್. ನಾಗರಾಜ್

ಈ ಓನ್ನೆಲೆಯಲ್ಲಿ ದೆಹಲಿಯಲ್ಲಿ ಅಬ್ಬರದ ಪ್ರಚಾರ ಪಡೆದ ಓಡಾಟಗಳು - ಕೇಂದ್ರ ನೀರಾವರಿ ಕಮಿಷನ್‌ನ ಅಧ್ಯಕ್ಷರಿಗೆ ಪ್ರಧಾನಿಯಿಂದ ನಿರೂಪ ಹೋಯಿತು. ಅವರು ಬೆಂಗಳೂರು ತಮಿಳುನಾಡುಗಳಿಗೆ ಭೇಟಿಯಿತ್ತರು. ನೀರಾವರಿ ಮಂತ್ರಿ ಪ್ರಧಾನಿಯೊಂದಿಗೆ ಮಾತುಕತೆ ನಡೆಸಿದರು. ಅವರೂ ಕರ್ನಾಟಕ, ತಮಿಳುನಾಡುಗಳಿಗೆ ಭೇಟಿಯಿತ್ತು ಉಭಯ ಮುಖ್ಯ ಮಂತ್ರಿಗಳೊಂದಿಗೆ ಮಾತುಕತೆ ನಡೆಸಿದರು. ತಮಿಳುನಾಡಿನ ರಾಜ್ಯಪಾಲ, ಕಾಂಗ್ರೆನ ಮಾಜಿ ಮುಖ್ಯಮಂತ್ರಿ ಚೆನ್ನಾರೆಡ್ಡಿಯವರು ದಿನಕ್ಕೆರಡು ಬಾರಿ ಎಂಬಂತೆ ಜಯಲಲಿತಾರವರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಅವರು ಉಪವಾಸ ಕುಳಿತಿದ್ದ ಮೂರು ದಿನಗಳಲ್ಲಿ ಎರಡು ದಿನ ತಮಿಳುನಾಡಿನಲ್ಲಿ ಬಸ್‌ಗಳನ್ನು ಸುಡುವ, ಜನಜೀವನವನ್ನು ಅಸ್ತವ್ಯಸ್ತಮಾಡುವ ಪ್ರಯತ್ನಗಳು ನಡೆದುವು.

ಅದಕ್ಕೆ ಪ್ರತಿಕ್ರಿಯೆಯಾಗಿ ಕರ್ನಾಟಕದಲ್ಲಿಯೂ ರಾಜ್ಯ ರೈತ ಸಂಘ ತುರ್ತಾಗಿ ಉಪವಾಸ ಸತ್ಯಾಗ್ರಹಕ್ಕೆ ಕೈ ಹಾಕಿತು. ವಾಟಾಳ್, ಚಿ.ಮೂ. ಇವರ ಚಟುವಟಿಕೆಗಳು ಆರಂಭವಾದವು.

ಕೊನೆಗೆ ಕಾವೇರಿ ವಿವಾದದ ಬಗೆಗಿನ ಆಯೋಗದ ಮಧ್ಯಂತರ ತೀರ್ಪಿನಂತೆ ನೀರು ಮೆಟ್ಟೂರು ಜಲಾಶಯಕ್ಕೆ ಈಗಾಗಲೇ ಹರಿಯಲಾರಂಭಿಸಿದೆ ಎಂಬ ವಿ.ಸಿ. ಶುಕ್ಲಾರವರ ಆಶ್ವಾಸನೆಯ ಮೇರೆಗೆ ಜಯಲಲಿತಾರವರ ಉಪವಾಸಕ್ಕೆ ಅಂತ್ಯ ಹಾಡಲಾಯಿತು.

ಈ ಮಧ್ಯೆ ಕರ್ನಾಟಕ ಸರಕಾರ ಕೇಂದ್ರ ಸರಕಾರದ ಅಧಿಕಾರಿ ಹಾಗೂ ಸಚಿವರೊಡನೆ ಇಷ್ಟೆಲ್ಲಾ ಮಾತುಕತೆ ನಡೆಸಿದರೂ, ಸ್ಫೋಟಕ ಪರಿಸ್ಥಿತಿಯೊಂದು ನಿರ್ಮಾಣವಾಗಿದ್ದರೂ ವಿರೋಧ ಪಕ್ಷಗಳೊಡನೆ ಸಮಾಲೋಚಿಸಲಿಲ್ಲ. ಜೊತೆಗೆ ತಮಿಳುನಾಡಿನ ಮುಖ್ಯಮಂತ್ರಿಯವರ ಕೇಳಿಕೆಯನ್ನು ಒಪ್ಪಲಾಗುವುದಿಲ್ಲವೆಂಬ ವೀರಪ್ಪ ಮೊಯಿಲಿಯವರ ಘೋಷಣೆಗಳೂ ದೆಹಲಿಗೆ ಮರಳಿದ ವಿ.ಸಿ. ಶುಕ್ಲಾ ಈಗಾಗಲೇ ನೀರನ್ನು ಬಿಡಲಾಗಿದೆ ಮತ್ತು ಕಾವೇರಿ ಜಲವಿವಾದ ಆಯೋಗದ ಮಧ್ಯಂತರ ತೀರ್ಪಿನ ಜಾರಿಯ ಬಗ್ಗೆ ಕೇಂದ್ರ ಸರಕಾರ ಉಸ್ತುವಾರಿ ಸಮಿತಿ ಹಾಗೂ ಜಾರಿ ಸಮಿತಿ ಎಂಬ ಎರಡು ಸಮಿತಿಗಳ ನೇಮಕ ಮಾಡುತ್ತದೆಂದೂ ಅದನ್ನು ವೀರಪ್ಪ ಮೊಯಿಲಿಯವರು ಒಪ್ಪಿ ಬರೆದುಕೊಟ್ಟದ್ದಾರೆಂದು ಹೇಳಿದ್ದಾರೆ.

ತಮಿಳುನಾಡಿನ ಅಧಿಕಾರಿಗಳು ಕಬಿನಿ ಜಲಾಶಯದಿಂದ ಹೆಚ್ಚು ನೀರು ಮೆಟ್ಟೂರಿಗೆ ಹರಿಯಲಾರಂಭಿಸಿದೆ ಎಂದು ಹೇಳಿದ್ದಾರೆಂದು ಪತ್ರಿಕೆಗಳು ವರದಿ ಮಾಡಿವೆ. ಕರ್ನಾಟಕದ ವಿರೋಧಪಕ್ಷಗಳ ನಿಯೋಗವೊಂದು ಕಾವೇರಿ ತಮಿಳುನಾಡನ್ನು ಪ್ರವೇಶಿಸುವುದಕ್ಕೆ ಸ್ವಲ್ಪ ದೂರದಲ್ಲಿರುವ ಸಂಗಮಕ್ಕೆ ಭೇಟಿ ನೀಡಿದ್ದಾರೆ(ಪ್ರತ್ಯೇಕವಾಗಿ ವರದಿ ನೀಡಿಲಾಗಿದೆ)

ಇದರಿಂದ ಒಟ್ಟಾರೆಯಾಗಿ ಕರ್ನಾಟಕದ ಮುಖ್ಯಮಂತ್ರಿಗಳು ಮೇಲೆ ಏನೇ ಹೇಳಿದರೂ ಕಬಿನಿಯಿಂದ ನೀರನ್ನು ಹರಿಯಬಿಟ್ಟು ಮಧ್ಯಂತರ ತೀರ್ಪನ್ನು ಜಾರಿ ಮಾಡಲು ಪ್ರಯತ್ನಿಸಿದ್ದಾರೆ. ಬರಗಾಲದಿಂದ ನರಳುತ್ತಿರುವ, ಮಳೆ ಅತ್ಯಂತ ಕಡಿಮೆಯಾಗಿರುವ ಕರ್ನಾಟಕದ ಹಿತಗಳಿಗೆ ಇದರಿಂದ ಧಕ್ಕೆಯಾಗಿದೆ ಎಂಬ ಬಲವಾದ ಅಭಿಪ್ರಾಯ ಮೂಡಿದೆ. ಕಾಂಗ್ರೆ ಹೈಕಮಾಂಡ್ ಕೇಂದ್ರ ಸರಕಾರದ ಮೇಲಿನ ಸವಾ

ಪುಟ 8ನೋಡಿ

ಒಳಪುಟಗಳಲ್ಲಿ

ಜಯಲಲಿತಾರ ಉಪವಾಸದ ಒತ್ತಡಕ್ಕೆ ಮಣಿಯದಿರಲು ಮನವಿ

ಸಿಪಿಐ(ಎಂ), ಸಿಪಿಐ, ಜನತಾದಳದವರೆಲ್ಲ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರಿಗೆ ಸಂಯುಕ್ತ ಮನವಿ ಅರ್ಪಿಸಿ ತಮಿಳು ನಾಡು ಮುಖ್ಯಮಂತ್ರಿ ಜಯಲಲಿತಾ ಅವರ ಪ್ರಜಾಪ್ರಭುತ್ವಕ್ಕೆ ವಿರೋಧವಾದ ನ್ಯಾಯಾಂಗ ವ್ಯವಸ್ಥೆಗೆ ಅಗೌರವ ತರುವಂತ ಕ್ರಮದ ಒತ್ತಡಕ್ಕೆ ಮಣಿಯಬಾರದು ಎಂದಿದ್ದಾರೆ. ಕಾವೇರಿ ಮಧ್ಯಂತರ ತೀರ್ಪಿನ ಜಾರಿ ಅಸಾಧ್ಯವೆಂದು ರಾಜ್ಯ ಸರಕಾರ ಈ ಹಿಂದೆ ವಾದಿಸಿದಾಗ ಮಳೆ ಹಾಗೂ ಜಲಾಶಯಗಳಲ್ಲಿರುವ ನೀರಿನ ಪರಿಸ್ಥಿತಿಯನ್ನು ಮನಗಂಡು ಈ ಬಗ್ಗೆ ನಿರ್ಣಯ ಕೈಗೊಳ್ಳಬಹುದೆಂದು ಮಂಡಳಿ ಸ್ಪಷ್ಟೀಕರಿಸಿದೆ.

1991-92, 92-93 ರಲ್ಲಿ ರಾಜ್ಯದಲ್ಲಿ ಉತ್ಮಮಳೆ ಆಗಿದ್ದರಿಂದಾಗಿ ಜಲಾಶಯಗಳು ತುಂಬಿ ಹರಿದಿದು ತಮಿಳುನಾಡಿನ ರೈತರಿಗೆ ಯಾವುದೇ ತೊಂದರೆಯಾಗದಂತೆ ನೀರು ಬಿಡಲಾಗಿತ್ತು. ಈ ವರ್ಷ ಮುಂಗಾರು ಮಳೆ ಕೈ ಕೊಟ್ಟಿದ್ದರಿಂದಾಗಿ ಬರಗಾಲ ಉಂಟಾಗಿದ್ದು, ಈ ಓನ್ನೆಲೆಯಲ್ಲಿ ಕರ್ನಾಟಕದ ರೈತರೇ ಸಂಕಷ್ಟದಲ್ಲಿರುವಾಗ ತಮಿಳುನಾಡಿಗೆ ನೀರು ಬಿಡುವುದು ಆಗದ ಕೆಲಸ. ಜಯಲಲಿತ ಕೈಗೊಂಡ ಉಪವಾಸ ಕರ್ನಾಟಕ ಸರಕಾರದ ಮೇಲೆ ಕೇಂದ್ರ ಸರಕಾರದ ಮೂಲಕ ಒತ್ತಡ ತರುವ ತಂತ್ರವಾಗಿದೆ.

ತಮಿಳು ನಾಡು ಎದುರಿಸುತ್ತಿರುವ ಸಮಸ್ಯೆ ಅವರ ಸೃಷ್ಟಿಯೇ ಆಗಿದೆ. ಯಾಕೆಂದರೆ ಅವರು ಕುರುವೈ ಬತ್ತದ ಬೆಳೆಯನ್ನು 3 ಲಕ್ಷ ಎಕ್ರೆಯಿಂದ 7 ಲಕ್ಷ ಎಕ್ರೆಗೆ ವಿಸ್ತರಿಸಿಕೊಂಡಿದ್ದಾರೆ.

ಕಾವೇರಿ ನೀರಿನ ಸಮಸ್ಯೆಯನ್ನು ಎರಡೂ ರಾಜ್ಯಗಳ ಹಿತದೃಷ್ಟಿಯಿಂದ ಚರ್ಚೆ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಿದೇಕು. ಯಾವುದೇ ಒತ್ತಡಕ್ಕೆ ಮಣಿಯಬಾರದು ಎಂದು ಮನವಿಯಲ್ಲಿ ಕೇಳಿಕೊಳ್ಳಲಾಗಿದೆ.

ಸಿಪಿಐ(ಎಂ) ಪರವಾಗಿ ಎಸ್. ಸೂರ್ಯನಾರಾಯಣ ರಾವ್ ಎನ್.ಕೆ. ಉಪಾಧ್ಯಾಯ, ಸಿಪಿಐಯಿಂದ ಜಗದೀಶ್ ವಿರೋಧ ಪಕ್ಷದ ನಾಯಕ ಆರ್. ವಿ. ದೇಶಪಾಂಡೆ, ಸಿಂಧ್ಯ ಚಂದ್ರೇಗೌಡ, ಪ್ರೋ ಚಂದ್ರಶೇಖರ್ ಕೋ. ಚನ್ನಬಸಪ್ಪ, ವಾಟಾಳ್ ನಾಗಾರಾಜ್ ಮೊದಲಾದ ಪ್ರಮುಖರು ಈ ಮನವಿಗೆ ಸಹಿ ಮಾಡಿದ್ದಾರೆ.

ಸಂಗಮ ಭೇಟಿ

ಕಾವೇರಿ ನದಿಯಿಂದ ನೀರು ಬಿಡಲಾಗುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲು ವಿರೋಧ ಪಕ್ಷದ ನಾಯಕ ಆರ್.ವಿ. ದೇಶಪಾಂಡೆ, ಪಿ.ಜಿ.ಆರ್. ಸಿಂಧ್ಯಾ ಶಿವಾನಂದ ಕೌಜಲಗಿ, ಸಿಪಿಐ(ಎಂ)ನ ಎಸ್. ಸೂರ್ಯನಾರಾಯಣ ರಾವ್, ಎನ್.ಕೆ. ಉಪಾಧ್ಯಾಯ, ಸಿಪಿಐಯ ಜಗದೀಶ್ ಅವರು ಜುಲೈ 21,1993 ರಂದು ತಮಿಳುನಾಡು ಗಡಿಯಲ್ಲಿರುವ ಕಾವೇರಿ ಅರ್ಕಾವತಿ ನದಿಗಳು ಕೂಡುವ ಸಂಗಮಕ್ಕೆ ಹೋಗಿದ್ದರು. ಈ ತಿಂಗಳಲ್ಲಿ ಯಾವಾಗಲೂ ಒಣಗಿರುವ ಕಾವೇರಿ ನದಿಯಲ್ಲಿ 10 ರಿಂದು 15 ಅಡಿಯಲ್ಲಿ ನೀರು ಹರಿಯುತ್ತಿದ್ದರುವುದನ್ನು ಕಂಡರು. ರಾಜ್ಯ ಸರಕಾರ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನೀರು ಬಿಡುತ್ತಿದೆ ಎಂಬ ಅಂಶ ಕಂಡುಬಂತು.

ರಾಷ್ಟ್ರೀಯ ಐಕ್ಯತಾ ವಾರಾಚರಣೆ :

ಆಗಸ್ಟ್ 9 - 15

ಆಗಸ್ಟ್ 9 :
ಯುವಜನ-ವಿದ್ಯಾರ್ಥಿ ಸಂಘಟನೆಗಳು

ಆಗಸ್ಟ್ 10 :
ಮಹಿಳಾ ಸಂಘಟನೆಗಳು.

ಆಗಸ್ಟ್ 11 :
ಕಾರ್ಮಿಕ ಸಂಘಟನೆಗಳು

ಆಗಸ್ಟ್ 12 :
ರೈತ - ಕೃಷಿ ಕೂಲಿಕಾರ ಸಂಘಟನೆಗಳು

ಆಗಸ್ಟ್ 13 :
ಸಾಂಸ್ಕೃತಿಕ ಸಂಘಟನೆಗಳು
- ಬುದ್ಧಿ ಜೀವಿಗಳು

ಆಗಸ್ಟ್ 14 :
ಜಾತ್ಯಾತೀತ ರಾಜಕೀಯ ಪಕ್ಷಗಳು ಮತ್ತು ಗುಂಪುಗಳು

ರಾಷ್ಟ್ರೀಯ ಐಕ್ಯತಾ ಆಂದೋಲನದ ಮನವಿ
ಪುಟ 8ನೋಡಿ

ಕ್ರಯೋಜನಿಕ್ ರಾಕೆಟ್:

"ಅಮೇರಿಕಾದ ಬ್ಲಾಕ್‌ಮೇಲನ್ನು ಪ್ರತಿಭಟಿಸಿ"

-- ಎಡಪಕ್ಷಗಳ ಆಗ್ರಹ

ರಶ್ಯಾ ಭಾರತಕ್ಕೆ ಕ್ರಯೋಜೆನಿಕ್ ರಾಕೆಟ್ ಇಂಜಿನುಗಳನ್ನು ಹಾಗೂ ಅವನ್ನು ಭಾರತದಲ್ಲೇ ಉತ್ಪಾದಿಸುವ ತಂತ್ರಜ್ಞಾನವನ್ನು ವರ್ಗಾವಣೆ ಮಾಡುವುದಕ್ಕೆ ಅಡ್ಡಗಾಲು ಹಾಕಲು ರಶ್ಯಾವನ್ನು ಬೆದರಿಸಿರುವ ಅಮೇರಿಕಾದ ವರ್ತನೆಯನ್ನು ಭಾರತದ ಎಡಪಕ್ಷಗಳು ಬಲವಾಗಿ ಖಂಡಿಸಿವೆ.

ಜುಲೈ 17ರ ಒಂದು ಜಂಟಿ ಸಭೆಯ ನಂತರ ಎಡಪಕ್ಷಗಳ ಮುಖಂಡರು ನೀಡಿರುವ ಜಂಟಿ ಹೇಳಿಕೆ ಭಾರತ ಮತ್ತು ರಶ್ಯಾ ಮಾಡಿಕೊಂಡಿರುವ ಒಪ್ಪಂದದ ಗಂಭೀರತೆಯನ್ನು ಮುರಿದು ರಶ್ಯಾ ಅಮೇರಿಕಾದ ಒತ್ತಡಕ್ಕೆ ಶರಣಾಗಿರುವುದು, ಈಗ ಅಮೇರಿಕಾ ಹಾಕಿರುವ ಮಿತಿಯೊಳಗೆ ಈ ಕಾಂಟ್ರಾಕ್ಟಿನ ಬಗ್ಗೆ ಮರು ಮಾತುಕತೆ ನಡೆಸಬೇಕೆನ್ನುತ್ತಿರುವುದು ಖೇದಕರ ಎಂದಿದೆ. ತಮ್ಮ ಸ್ವಭಾವಕ್ಕನುಗುಣವಾಗಿ ಅಮೇರಿಕಾದ ಆಳರಸರು ಇದು ಕ್ಷಿಪಣಿ ಪ್ರಸಾರ ತಡೆಯುವಲ್ಲಿ ಓಂಜರಿಕೆ, ಮತ್ತು ಅಮೇರಿಕಾ-ರಶ್ಯಾ ಸಂಬಂಧಗಳನ್ನು ಸರಿಯಾದ ಹೆಲಿಯಲ್ಲಿ ಇಡುವಲ್ಲಿ ಒಂದು 'ಅಗಾಧ ಸಾಧನೆ' ಎಂದು ವರ್ಣಿಸಿದ್ದಾರೆ.

"ಭಾರತ ಮೊದಲಿಂದಲೂ ತನ್ನ ಕ್ಷಿಪಣಿ ಕಾರ್ಯಕ್ರಮಕ್ಕೆ ಮಿಲಿಟರಿ ಉದ್ದೇಶಗಳಿಲ್ಲ ಎಂದು ಹೇಳುತ್ತಾ ಬಂದಿದೆ. ತಂತ್ರಜ್ಞಾನ-ವರ್ಗಾವಣೆ ಮಾರುಕಟ್ಟೆಯಲ್ಲಿ ಮತ್ತು ಕ್ಷಿಪಣಿ ರಾಕೆಟ್ ಕ್ಷೇತ್ರದಲ್ಲಿ ತನ್ನ ಗುತ್ತೇದಾರಿಕೆಯನ್ನು ಉಳಿಸಿಕೊಳ್ಳುವ ದುರುದ್ದೇಶದಿಂದಲೇ ಅಮೇರಿಕಾ ಈ ಬ್ಲಾಕ್‌ಮೇಲ್ ಮಾಡುತ್ತಿದೆ. ಇದರಿಂದಾಗಿ ಈಗ ಪಾಶ್ಚಿಮಾತ್ಯ ದೇಶಗಳೇ ಮೆರೆಯುತ್ತಿರುವ ವಿಶ್ವ ಬಾಹ್ಯಾಕಾಶ ಕ್ಷೇತ್ರವನ್ನು ಕಡಿಮೆ ಖರ್ಚಿನ ಉಪಗ್ರಹಗಳ ಉಡಾವಣೆಗಳ ಮೂಲಕ ಪ್ರವೇಶಿಸುವ ಭಾರತದ ಯೋಜನೆಯನ್ನು ವಿಳಂಬವಾಗುತ್ತದೆ" ಎಂದಿರುವ ಎಡಪಕ್ಷಗಳ ಈ ಹೇಳಿಕೆ ಈ ಬಗ್ಗೆ ಅಮೇರಿಕಾ ಸರಕಾರಕ್ಕೆ ಭಾರತ ಸರಕಾರ ಒಂದು ಬಲವಾದ ಪ್ರತಿಭಟನೆ ಸಲ್ಲಿಸಬೇಕು ಎಂದು ಆಗ್ರಹಪಡಿಸಿದೆ.

ಸಿಪಿಐ(ಎಂ)ನ ಪ್ರಕಾಶ್ ಕಾರಟ್ ಮತ್ತು ಸೀತಾರಾಂ ಯೆಚೂರಿ, ಸಿಪಿಐನ ಎಂ. ಫಾರೂಕಿ ಹಾಗೂ ಎ.ಬಿ.ಬರ್ದನ್, ಫಾರ್ವರ್ಡ್ ಬ್ಲಾಕಿನ ಚಿತ್ತ ಬಸು ಮತ್ತು ಡಿ. ಶಾಸ್ತ್ರಿ ಹಾಗೂ ಆರ್.ಎಸ್.ಪಿ.ಯ ಸುಚಿ ಭಟ್ಟಾಚಾರ್ಯ ಮತ್ತು ಅಬನಿ ರಾಯ್ ಎಡಪಕ್ಷಗಳ ಈ ಜಂಟಿ ಸಭೆಯಲ್ಲಿ ಭಾಗವಹಿಸಿದ್ದರು.

ಇದು ನಿಮಗೆ ತಿಳಿದಿತ್ತೇ?

ಎಲ್ಲಿ ಅನಕ್ಷರತೆಯೋ ಅಲ್ಲಿ ಬಿಜೆಪಿ

ಭಾರತದ ಭೂಪಟದಲ್ಲಿ ಅನಕ್ಷರತೆಯ ಕಪ್ಪು ಚುಕ್ಕಿಗಳು ಹಿಂದಿನ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲೇ ಇರಲು ಕಾರಣವೇನು? ಇದು 'ಫ್ರಂಟ್‌ಲೈನ್' ಪಾಕ್ಷಿಕ ರಾಷ್ಟ್ರೀಯ ಸಾಕ್ಷರತಾ ಮಿಶನ್‌ನ ಅಧ್ಯಕ್ಷ ಸುದೀಪ್ ಕುಮಾರ್ ಬ್ಯಾನರ್ಜಿಯವರಿಗೆ ಕೇಳಿದ ಪ್ರಶ್ನೆ.

ಭಾರತದ ಸಂಸತ್ತಿಗೆ ಅತೀ ಹೆಚ್ಚು ಎಂ.ಪಿ.ಗಳನ್ನು ಕಳಿಸುವ 9 ರಲ್ಲಿ 7 ಪ್ರಧಾನಮಂತ್ರಿಗಳನ್ನು ನೀಡಿರುವ ಉತ್ತರ ಪ್ರದೇಶ ಅತ್ಯಂತ ಹೆಚ್ಚು ಅನಕ್ಷರಸ್ಥರನ್ನು, ಅತ್ಯಂತ ಕಡಿಮೆ ಸಾಕ್ಷರತಾ ದರ ಹೊಂದಿರುವ ರಾಜ್ಯ. ಬಿಜೆಪಿಯ ಅಯೋಧ್ಯಾ ಕೇಂದ್ರಿತ "ನವರಾಷ್ಟ್ರೀಯವಾದಿ ಜಾಗೃತಿ"ಯಲ್ಲಿಯೂ ಈ ರಾಜ್ಯದಲ್ಲೇ ಅತೀ ಹೆಚ್ಚು ಪ್ರಭಾವಿಯಾಗಿರುವುದು ಕೇವಲ ಕಾಕತಾಳೀಯವೇ?

ಇಷ್ಟೇ ಅಲ್ಲ, ಭಾರತದ ರಾಷ್ಟ್ರೀಯ ಸರಾಸರಿಗಿಂತ ಸಾಕ್ಷರತೆಯ ದರಗಳಲ್ಲಿ ಅತೀ ಹಿಂದೆ ಬಿದ್ದಿರುವ ನಾಲ್ಕು ರಾಜ್ಯಗಳಲ್ಲಿ ಬಿಜೆಪಿಯ ಪ್ರಭಾವವೇ ಹೆಚ್ಚಿರುವುದು ಮೂರರಲ್ಲಿ ಅದು ಸರಕಾರಗಳನ್ನು ರಚಿಸಿರುವುದು ಕೇವಲ ಆಕಸ್ಮಿಕವೇ?

1991ರ ಜನಗಣತಿ ಅಂಕಿ-ಸಂಖ್ಯೆಗಳ ಪ್ರಕಾರ ದೇಶದ ಒಟ್ಟು ಅನಕ್ಷರಸ್ಥರಲ್ಲಿ 48 ಶೇ. ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಉತ್ತರ ಪ್ರದೇಶಗಳಲ್ಲೇ ಇದ್ದಾರೆ. ಮಹಿಳಾ ಸಾಕ್ಷರತಾ ದರವೂ ಕಮ್ಮಿ. ಅಖಿಲ ಭಾರತ ಮಟ್ಟದಲ್ಲಿ 40 ಶೇ. ಮಹಿಳೆಯರು ಸಾಕ್ಷರರಾಗಿದ್ದರೆ ಈ ನಾಲ್ಕು ರಾಜ್ಯಗಳಲ್ಲಿ ಈ ದರ ಕ್ರಮಕ್ರಮವಾಗಿ 22,29,21 ಮತ್ತು 26. ಒಂದನೇ ತರಗತಿಯಿಂದ 5 ನೇ ತರಗತಿಯವರೆಗೆ ದಾಖಲಾತಿ ಸಂಖ್ಯೆಯಲ್ಲೂ ಇದೇ ಕಥೆ.

'ಫ್ರಂಟ್‌ಲೈನ್' ಪಾಕ್ಷಿಕದ ಪ್ರಶ್ನೆಗೆ ಉತ್ತರವಾಗಿ ಶ್ರೀ ಬ್ಯಾನರ್ಜಿ "ಆ ಸರಕಾರ ಈ ಸರಕಾರ ಎಂದು ನಾನು ಹೇಳಲಾರೆ. ಆದರೆ ಈ ಕೆಲವು ಸ್ಥಳಗಳಲ್ಲಿ ಸಾಕ್ಷರತೆಗೆ ಕೊಡಬೇಕಾದ ಆದ್ಯತೆಯನ್ನು ಕೊಡಲಿಲ್ಲ ಎಂದು ಹೇಳಬಲ್ಲೆ" ಎಂದರು.

ಬಿಜೆಪಿ ಸರಕಾರಗಳ ಆದ್ಯತೆ ಏನು ಎಂದು ಎಲ್ಲರಿಗೂ ಗೊತ್ತಿದೆ. "ಭಾರತದ ರೈತ ಅಕ್ಷರ ಕಲಿತು ಪತ್ರವ್ಯವಹಾರ ಮಾಡಬೇಕಾಗಿದೆಯೇ" ಎಂದ ಆ ಪಕ್ಷದ ಉಪಾಧ್ಯಕ್ಷರೊಬ್ಬರ ಹೇಳಿಕೆ ಹಾಗೂ ಸಾಕ್ಷರತಾ ಆಂದೋಲನಕ್ಕೆ ವಿಶ್ವ ಪ್ರಸಿದ್ಧವಾದ ಕೇರಳದಲ್ಲಿ ಈ ಆಂದೋಲನವನ್ನು ವಿರೋಧಿಸುವಲ್ಲಿ ಕಾಂಗ್ರೆಸ್‌ನೊಡನೆ ಬಿಜೆಪಿ ನಡೆಸಿರುವ ಸ್ಪರ್ಧೆಯಿಂದಲೇ ಸಾಕ್ಷರತೆಯಂತೂ ಆ ಪಕ್ಷದ ಆದ್ಯತೆಯ ಪಟ್ಟಿಯಲಿಲ್ಲ ಎಂಬುದರಲ್ಲಿ ಸಂಶಯವುಳಿಯುತ್ತದೆಯೇ?

ಅಮೇರಿಕನ್ ಆಳರಸರ ಪರಂಪರೆ

ಏಪ್ರಿಲ್ 9,1914. ಅಮೇರಿಕಾ ಹಡಗಿನ ನಾವಿಕರನ್ನು ತಮ್ಮ ಬಂದರು ಟಾಂಪಿಕೋದಲ್ಲಿ ಮೆಕ್ಸಿಕೋದ ಅಧಿಕಾರಿಗಳು ಬಂಧಿಸಿದರು. ತಕ್ಷಣ ಅಮೇರಿಕಾದ ಆಳುವ ವಲಯಗಳಲ್ಲಿ ದೊಡ್ಡೆಯೇ ದೊಬ್ಬೆ- ಮೆಕ್ಸಿಕೋ ತಕ್ಷಣ ಕ್ಷಮೆ ಕೋರಬೇಕು, ನಾವಿಕರಿಗೆ 21 ತುಪಾಕಿಗಳ ಗೌರವ ರಕ್ಷೆ ನೀಡಬೇಕು ಎಂದು, ಮೆಕ್ಸಿಕೋ ಸಹಜವಾಗಿಯೇ ನಿರಾಕರಿಸಿತು. ಅಮೇರಿಕಾದ ಅಧ್ಯಕ್ಷ ವುಡ್ರೋ ವಿಲ್ಸನ್ ಮೆಕ್ಸಿಕೋದ ವಿರುದ್ಧ ಕ್ರಮ ಕೈಗೊಳ್ಳಲು ಅಮೇರಿಕಾ ಸೆಂಸತ್ತಿನ ಅನುಮತಿ ಕೇಳಿದರು. ಎಪ್ರಿಲ್ 20,1914 ರಂದು ಸಂಸತ್ತು ಒಂದು ಜಂಟಿ ನಿರ್ಣಯ ಅಂಗೀಕರಿಸಿತು- "ಅಮೇರಿಕಾ ಸಂಸ್ಥಾನಗಳ ವಿರುದ್ಧ ಯಾವುದೇ ಅಗೌರವ, ಅಪಮಾನವಾದರೆ ಅದನ್ನು ಸರಿಪಡಿಸಲು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸೇನೆಯನ್ನು ಬಳಸಲು ಅಧ್ಯಕ್ಷರಿಗೆ ಎಲ್ಲಾ ಹಕ್ಕಿದೆ."

ಬಿಲ್ ಕ್ಲಿಂಟನ್‌ರ ಇತ್ತೀಚಿನ ಇರಾಕ್ ಧಾಳಿಯನ್ನು ಟೀಕಿಸುತ್ತಾ ಪ್ರಸಿದ್ಧ ನ್ಯಾಯತಜ್ಞ ಎ.ಜಿ. ನೂರಾಣಿಯವರು ಅಮೇರಿಕಾದ ಇತಿಹಾಸದ ಈ ಘಟನೆಯನ್ನು ನೆನಪಿಸಿದ್ದಾರೆ. ನಿಜ ಕ್ಲಿಂಟನ್ ಅಮೇರಿಕನ್ ಆಳರಸರ ಈ 'ಪರಂಪರೆ'ಯನ್ನು ಬಿಟ್ಟುಕೊಡುವುದಾದರೂ ಹೇಗೆ?

ಅಮೆರಿಕಾಕ್ಕೇನಿದೆ ನೈತಿಕ ಹಕ್ಕು?

ಎಂದು ಕೇಳುತ್ತಾರೆ ಅಮೇರಿಕಾದ ಒಬ್ಬ ಪ್ರಸಿದ್ಧ ಎಡಪಂಥೀಯ ಬುದ್ಧಿಜೀವಿ ನೋಮ್ ಚೋಮ್ಸ್‌ಕಿ. ಕುವೈತ್‌ನಲ್ಲಿ ಅಮೇರಿಕಾದ ಅಧ್ಯಕ್ಷರ ಹತ್ಯೆಗೆ ಪ್ರಯತ್ನಿಸತೆಂಬ ಆಪಾದನೆಯ ಮೇಲೆ ಕ್ಲಿಂಟನ್ ಬಾಗ್ದಾದ್ ಮೇಲೆ ಬಾಂಬ್ ಧಾಳಿ ಮಾಡುವುದು ಸರಿಯಾದರೆ ಕ್ಯೂಬಾ ಮತ್ತು ಲಿಬ್ಯಾ ಅಮೇರಿಕಾ ಮೇಲೆಲ್ಲಾ ಬಾಂಬಿನ ಸುರಿಮಳೆಗರೆ ಏನೂ ತಪ್ಪಿಲ್ಲ ಎನ್ನುತ್ತಾರೆ ಅವರು. ಏಕೆ? ವಿದೇಶಗಳ ಮುಖಂಡರ ಕೊಲೆಯ ಪ್ರಯತ್ನದಲ್ಲೇ ಏಕೆ, ಕೊಲೆ ಮಾಡುವುದರಲ್ಲೇ ಅಮೇರಿಕಾದ ದಾಖಲೆಯನ್ನು ಯಾರೂ ಮೀರಿಸಲು ಸಾಧ್ಯವಿಲ್ಲ ಎಂದಿದ್ದಾರೆ ಅವರು. ಕ್ಯೂಬಾದ ಫಿಡೆಲ್ ಕಾಸ್ಟ್ರೋರವರ ಕೊಲೆಗೆ ಎಂಟು ಬಾರಿ ಯತ್ನಿಸಲಾಯಿತು ಎಂಬುದೀಗ ಬಹಿರಂಗ ಗುಟ್ಟು. ಅಮೇರಿಕಾದ ಅಧ್ಯಕ್ಷ ಕೆನೆಡಿಯ ಕೊಲೆಯಾದ ದಿನ ಪ್ಯಾರಿಸ್‌ನಲ್ಲಿ ಸಿಐಎ ಏಜೆಂಟನೊಬ್ಬ 9 ನೇ ಹತ್ಯೆಗೆ ಸಂಚು ತಯಾರಿಸುತ್ತಿದ್ದನಂತೆ. ಆಫ್ರಿಕನ್ ಮುಖಂಡ ಅಧ್ಯಕ್ಷ ಲುಮುಂಬಾರ ಕೊಲೆ ನಡೆಸಿರುವುದು ಯಾರು? ಅಮೇರಿಕನ್ನರು ವಿದೇಶಗಳ ತಮ್ಮ ಬೆಂಬಲಿಗ ಮುಖಂಡರು ಮುಳ್ಳಾಗುತ್ತಿದ್ದಾರೆ ಎಂದನಿಸಿದಾಗ ಅವರನ್ನೂ ಬಿಡಲಿಲ್ಲ ಎನ್ನುತ್ತಾರೆ ಚೋಮ್ಸ್‌ಕಿ. ಲಿಬ್ಯಾದ ಅಧ್ಯಕ್ಷ ಗಡ್ಡಾಫಿ ಯನ್ನು ಕೊಲೆಮಾಡಲೆಂದೇ ಬಾಂಬ್ ಧಾಳಿ ಮಾಡಲಿಲ್ಲವೇ ಎಂದು ಪ್ರಶ್ನಿಸುತ್ತಾರೆ ಅವರು. 17 ವರ್ಷಗಳ ಹಿಂದೆ ಅಮೇರಿಕಾ ಸಂಸತ್ತು ನೇಮಿಸಿದ ಒಂದು ಸಮಿತಿ ಈ ಬಗ್ಗೆ ತನಿಖೆ ನಡೆಸಿ ಅಮೇರಿಕಾ ನಡೆಸಿದ ವಿದೇಶಿ ಮುಖಂಡರ ಕೊಲೆ ಪ್ರಯತ್ನಗಳ ಬಗ್ಗೆ ಒಂದು ದಪ್ಪ ಪುಸ್ತಕವನ್ನೇ ಪ್ರಕಟಿಸಿದೆ ಎನ್ನುತ್ತಾರೆ ಪ್ರೊ. ನೋಮ್ ಚೋಮ್ಸ್‌ಕಿ.

ಲೋಕ ಪ್ರಳಯದ ಸಮಯ

ಅಂದು *
'ಕ್ಲಿಂಟಾನ್ ಸಾಹೇಬರು'
(ಎಂದಿಲ್ಲದೆ)
ಬಿಗುವಿನಿಂದ ಭಾಷಣ
ಮಾಡಿದರು;
(ವಿಶೇಷವಾಗಿ)
ಉಂಡರು ಗಡದ್ದಾಗಿ
ಹೆಂಡತಿ ಮಗಳೊಂದಿಗೆ
ಒಂದು
(ಖುಷಿಯಿಂದ)
ಸಿನಿಮಾ ನೋಡಿದರು;
ಮತ್ತೇ
ಮಲಗಿದರು ಸ್ವಸ್ಥ
(ಸೇವಿಸದೆ ನಿದ್ದೆ ಮದ್ದು)
ಎಂಟು ಘಂಟೆ'

ಅಯ್ಯ ಮೂರ್ಖ
ಯಾಕಿಂತಹ ತರ್ಕ!
ಪ್ರೆಸಿಡೆಂಟರಾದರೇನು 'ಯು.ಎಸ್.ಆಫ್ ಎ'ಗೆ
ಬೇಡವೆ ಸಹಜ ವಿರಾಮ
ಕಳೆಯಲು ಒಂದಿಷ್ಟು ವೇಗ!

ಅಹ! ಜಗವೇ- *
ಹೆಚ್ಚುತ್ತಿರುವಾಗ ಪಾಪ ಕೂಪ
ಕವಿಯದಿರಲಿ
ಕಣ್ಣುಗಳಿಗೆ 'ಸಹಜತೆ'ಯ ಧೂಪ!

(ಅವರ)
ಭಾಷಣದ ಬಿಗುವು
(ಇರಾಕಿನ)
ಕಲೆಗಾರನ ಸಾವು
(ಭಲೇ!)

ಎಂತಹ ಊಟ!
ತಾಯಂದಿರ ಕಳಕೊಂಡ ಮಕ್ಕಳ
ಚೀರಾಟ
(ಆಹಾ!)
ಎಂತಹ ನಿದ್ದೆ!
ಜಗತ್ತೇ ನರಳಿದ ಸದ್ದೆ

ಕೇಳು ಕೇಳಯ್ಯ
ಜನರ ನೋವಿನ ಕಡಲಲ್ಲಿ
ಹಾಯಾಗಿ ಮಿಂದಿತು
ಕ್ಲಿಂಟನ್‌ರ ಹೃದಯ!

ಸಹಜವಲ್ಲವೇ ಅಲ್ಲ
ಇದು
ಲೋಕ ಪ್ರಳಯದ ಸಮಯ

-- ಫರಾಜ್

* ಇರಾಕಿನ ನಾಗರಿಕ ಪ್ರದೇಶದ ಮೇಲೆ ದಾಳಿ ಮಾಡಿದ ದಿನ

ವೃತ್ತಿ ಶಿಕ್ಷಣ: ಕೋರ್ಟ್ ಆಜ್ಞೆ ಜಾರಿಗೆ ಕೇಂದ್ರ ಸೂಚನೆ

ಬೆಂಗಳೂರು : ಕ್ಯಾಪಿಟೇಷನ್ ಶುಲ್ಕ ಕುರಿತ ಸುಪ್ರೀಂ ಕೋರ್ಟ್ ತೀರ್ಪನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಲು ನಿರ್ದೇಶಿಸಿ ಕೇಂದ್ರ ಮಾನವ ಸಂಪನ್ಮೂಲ ಸಚಿವ ಅರ್ಜುನ್ ಸಿಂಗ್ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಎಸ್.ಎಂ. ಯಾಹ್ಯ ಇಂದು ಇಲ್ಲಿ ತಿಳಿಸಿದರು.

ಸಮಕಾಲೀನ ಅಧ್ಯಯನ ಸಂಸ್ಥೆ ಏರ್ಪಡಿಸಿದ್ದ ಕ್ಯಾಪಿಟೇಷನ್ ಶುಲ್ಕ ಕುರಿತ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದ ಅವರು ತೀರ್ಪಿನ ವಿರುದ್ಧ ಅಪಸ್ವರವನ್ನು ತಾವು ಸಹಿಸುವುದಿಲ್ಲ ಎಂದು ಅರ್ಜುನ್ ಸಿಂಗ್ ಎಚ್ಚರಿಕೆ ನೀಡಿದ್ದಾರೆ ಎಂದರು.

ಪ್ರಜಾವಾಣಿ ಜು.19

ಸರ್ಕಾರ ಏಜೆಂಟ್ ಅಲ್ಲ: ಖಾಸಗಿ ಆಡಳಿತ ಮಂಡಳಿಗಳ ವಿರುದ್ಧ ತೀರ್ಪು ಬಂದಿದೆ ಎಂದು ಸರ್ಕಾರ ಏಕೆ ಪುನಃ ಸುಪ್ರಿಂಕೋರ್ಟ್‌ನಲ್ಲಿ ಮರು ಅರ್ಜಿ ಸಲ್ಲಿಸಬೇಕು. ಸಾರ್ವಜನಿಕರು, ವಿರೋಧ ಪಕ್ಷಗಳು ಹಾಗೂ ಪೋಷಕರೂ ಸೇರಿದಂತೆ ಎಲ್ಲರೂ ಕ್ಯಾಪಿಟೇಷನ್ ವಿರೋಧಿಸುತ್ತಿರುವಾಗ ಸರ್ಕಾರ ಖಾಸಗಿ ಸಂಸ್ಥೆಗಳ ಏಜೆಂಟರಂತೆ ಸುಪ್ರಿಂಕೋರ್ಟಿನಲ್ಲಿ ಮರು ಅರ್ಜಿ ಸಲ್ಲಿಸಬೇಕೆ ಎಂದು ಎಸ್.ಎಂ. ಯಾಹ್ಯಾ ಏರಿದ ದನಿಯಲ್ಲಿ ಕೇಳಿದರು.

ಸಂಯುಕ್ತ ಕರ್ನಾಟಕ, ಜು. 19

ರೇಷ್ಮೆಗೂಡಿಗೆ ನೂರು ರೂ. ಕೇಂದ್ರ ಸರ್ಕಾರದೊಡನೆ ಚರ್ಚೆ

ಬೆಂಗಳೂರು: ರಾಜ್ಯದಲ್ಲಿ ಸುಮಾರು 40 ಲಕ್ಷಕ್ಕೂ ಹೆಚ್ಚು ಕುಟುಂಬಗಳು ರೇಷ್ಮೆ ಕೃಷಿಯನ್ನು ಅವಲಂಬಿಸಿದ್ದು ಇತ್ತೀಚಿನ ಬೆಲೆ ಏರುಪೇರಿನಿಂದ ಕಂಗಾಲಾಗಿರುವ ರೈತರಿಗೆ ಸ್ಫೂರ್ತಿ ನೀಡಲು ರೇಷ್ಮೆಗೂಡಿಗೆ ಕನಿಷ್ಟ ನೂರು ರೂ. ಬೆಂಬಲ ಬೆಲೆ ನೀಡುವ ಪ್ರಯತ್ನವಾಗಿ ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಲಾಗಿದೆಯೆಂದು ರೇಷ್ಮೆ ಖಾತೆ ರಾಜ್ಯ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ಉದಯವಾಣಿ, ಜು. 19

ಮೊಯಿಲಿ ಜತೆ ಸಖ್ಯ: ದೇಶಪಾಂಡೆ ನಿರಾಕರಣೆ

ಕಾರಾವಾರ : ನಾನು ವಿರೋಧಿ ಪಕ್ಷದ ಧುರೀಣನಾಗಿ ವರ್ತಿಸದೆ ಮುಖ್ಯಮಂತ್ರಿಗಳ ಜೊತೆ ಸಖ್ಯ ಬೆಳೆಸಿರುವುದಾಗಿ ಬಿಜೆಪಿ ಧುರೀಣರು ಚಿಲ್ಲರೆ ಆಪಾದನೆ ಮಾಡಿದ್ದಾರೆ. ಅವರ ಹಾಗೆ ನಾನು ಗೋಮುಖ ವ್ಯಾಘ್ರನಲ್ಲ. ಅವರ ಆರೋಪ ಸಿದ್ಧಪಡಿಸಿದರೆ ನನ್ನ ಸ್ಥಾನ ಬಿಟ್ಟುಕೊಡುವೆ ಎಂದು ವಿಧಾನ ಸಭೆಯ ವಿರೋಧಿ ನಾಯಕ ಆರ್. ವಿ. ದೇಶಪಾಂಡೆ ಅವರು ಮಂಗಳವಾರ ಶಿರಸಿಯಲ್ಲಿ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾನು ಮೂವರು ಸಚಿವರ ಹಗರಣಗಳನ್ನು ಹೊರಗೆ ಹಾಕಿದ್ದೇನೆ. ರಾಜ್ಯಪಾಲರನ್ನು ಬೇಟಿಯಾಗಿ ಸರ್ಕಾರದ ಕಾರ್ಯವೈಖರಿಯನ್ನು ವಿವರಿಸಿ ವಿಧಾನಸಭೆ ವಿಸರ್ಜಿಸಲು ಮನವಿ ಮಾಡಿದ್ದೇನೆ. ಆದರೆ ನಂಬರ್ ಒನ್ ಹಿಪಾಕ್ರಟ್ಸ್ ಆಗಿರುವ ಯಡಿಯೂರಪ್ಪ ಮತ್ತು ಈಶ್ವರಪ್ಪ ಶಾಸನಸಭೆ ನಡೆದಾಗ ಮುಖ್ಯಮಂತ್ರಿಗಳ ಪಕ್ಕ ಕುಳಿತು ಕೆಲಸ ಮಾಡಿಸಿಕೊಳ್ಳುವುದರಲ್ಲಿ ತಲ್ಲೀನರಾಗಿರುತ್ತಾರೆ.

ಪ್ರಜಾವಾಣಿ, ಜು. 15

ಜನತಾದಳದಿಂದ ಹೊಸ ಪಾತ್ರ ನಿರ್ವಹಣೆ: ಹೆಗಡೆ ಆಶಯ

ಶಿರಸಿ : ಆರ್ಥಿಕ ಸ್ವಾವಲಂಬನೆ, ಧರ್ಮ ನಿರಪೇಕ್ಷಾ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯ- ಈ ಮೂರು ಸಿದ್ಧಾಂತಗಳ ಭದ್ರ ತಳಹದಿಯ ಮೇಲೆ ಮರು ಹುಟ್ಟು ಪಡೆಯಲಿರುವ ಜನತಾದಳ ಇನ್ನು ಮುಂದೆ ರಾಜಕೀಯ ರಂಗದಲ್ಲಿ ಹೊಸ ಪಾತ್ರ ನಿರ್ವಹಿಸಲಿದೆ ಎಂದು ಮಾಜಿ ಮುಖ್ಯಮಂತ್ರಿ ಜನತಾದಳದ ನಾಯಕ ರಾಮಕೃಷ್ಣ ಹೆಗಡೆ ಹೇಳಿದ್ದಾರೆ.

ಉದಯವಾಣಿ, ಜು.19

ಗ್ರಾನೈಟ್ ಉದ್ದಿಮೆ ರಾಷ್ಟ್ರೀಕರಣ ಇಲ್ಲ

ಬೆಂಗಳೂರು : ಗ್ರಾನೈಟ್ ನೀತಿ ಸಂಬಂಧದಲ್ಲಿ ಶಿಫಾರಸು ಮಾಡಲು ರಚಿಸಲಾಗಿರುವ ಜಂಟಿ ಸದನ ಸಮಿತಿಯು ಈ ತಿಂಗಳ 17 ರಂದು ಸಭೆ ಸೇರಲಿದ್ದು, ಅಂದು ತನ್ನ ವರದಿಗೆ ಅಂತಿಮ ಸ್ವರೂಪ ನೀಡಲಿದೆ ಎಂದು ಗಣಿ ಖಾತೆ ರಾಜ್ಯ ಸಚಿವ ಡಿ.ಎ. ಚಿಣ್ಣಪ್ಪ ಅವರು ಇಂದು ಇಲ್ಲಿ ಹೇಳಿದರು.

ಗ್ರಾನೈಟ್ ವ್ಯವಹಾರ ರಾಷ್ಟ್ರೀಕರಿಸುವ ಪ್ರಶ್ನೆಯೇ ಇಲ್ಲ, ಉದ್ಯಮ ವಲಯದಲ್ಲಿ ಖಾಸಗಿ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಬೇಕೆಂದು ಕೇಂದ್ರದ ನೀತಿಯಾಗಿರುವಾಗ ಈ ವ್ಯವಹಾರ ರಾಷ್ಟ್ರೀಕರಿಸುವುದಿಲ್ಲ ಎಂದು ಅವರು ಪತ್ರಕರ್ತರಿಗೆ ತಿಳಿಸಿದರು.

ಪ್ರಜಾವಾಣಿ, ಜು. 13

ಈ ರೀತಿ ದೂರುಗಳ ಬಾಣಗಳನ್ನು ಸಾರ್ವಜನಿಕರು ಗುಟ್ಟಳ್ಳಿ ಪ್ಯಾಲೆಸ್ ಸರ್ಕಲ್ ಪ್ರದೇಶದ ಸರಕಾರಿ ಹೆರಿಗೆ ಆಸ್ಪತ್ರೆಯಲ್ಲಿ ಉನ್ನತ ಶಿಕ್ಷಣ ಸಚಿವ ಶ್ರೀ ಎಸ್.ಎಂ. ಯಾಹ್ಯರಿಗೆ ಎಸೆದರು.

ಸಂದರ್ಭ: ಸ್ವವಿಧಾನಸಭಾ ಕ್ಷೇತ್ರವಾದ ಜಯಮಹಲ್‌ಗೆ ಇಂದು ಭೇಟಿ ಇತ್ತಾಗ.

ಉದಯವಾಣಿ, ಜು.18

ಕುರಿದೊಡ್ಡಿಯಾದ ಶಾಲಾ ಕೊಠಡಿ

ಹೊಳೆನರಸೀಪುರ : ಎಷ್ಟೋ ಹಳ್ಳಿಗಳಲ್ಲಿ ಶಾಲೆಗೆ ಒಳ್ಳೆಯ ಕಟ್ಟಡ ಇಲ್ಲದಿರುವಾಗ, ಶಾಲ ಕೊಠಡಿಯೊಂದು ಕುರಿ ಸಾಕಣೆ ಕೇಂದ್ರವಾಗಿ ಪರಿವರ್ತಿತವಾಗಿದೆ ಎಂದರೆ ಆಶ್ಚರ್ಯವಾಗುವುದೇ?

ಹೌದು, ಇದು ಅಕ್ಷರಶಃನಿಜ. ಬೇಕಿದ್ದರೆ ಹೊಳೆನರಸೀಪುರ ತಾಲೂಕಿನ ಅಂಕವಳ್ಳಿಗೆ ಹೋಗಿ ನೋಡಿ. ಜವಾಹಾರ್ ರೋಜ್‌ಗಾರ್ ಯೋಜನೆಯಂತೆ ನಿರ್ಮಿಸಲಾದ ಶಾಲಾ ಕೊಠಡಿ ಇಲ್ಲಿ ಕುರಿದೊಡ್ಡಿಯಾಗಿ ಮಾರ್ಪಟ್ಟಿದೆ.

ಕಡ್ಡಾಯ ಪ್ರಥಾಮಿಕ ಶಿಕ್ಷಣ, ಸಂಪೂರ್ಣ ಸಾಕ್ಷರತೆಯ ಬಗ್ಗೆ ದೊಡ್ಡೆ ಹೊಡೆಯುವ ಸರಕಾರ ಇತ್ತ ಗಮನ ಹರಿಸದಿರುವುದೇ ಇಲ್ಲಿ ವೈಶಿಷ್ಟ್ಯ


ಕನ್ನಡಪ್ರಭ, ಜು. 16

ಶಿಕ್ಷಕರ ಕೊರತೆ: ಪೋಷಕರ ಆತಂಕ

ಹೊಸಕೋಟೆ : ಶಾಲೆಗಳು ಆರಂಭವಾಗಿ ಒಂದು ತಿಂಗಳು ಕಳೆದರೂ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗದೆ ಅನೇಕ ಶಾಲೆಗಳು ಹೆಸರಿಗಷ್ಟೇ ಬಾಗಿಲು ತೆರೆದಿದ್ದು ಪೋಷಕರು ಆತಂಕಗೊಂಡಿದ್ದಾರೆ.

ಜೂನ್ ಒಂದರಂದು ಶಾಲೆಗಳು ಆರಂಭಗೊಂಡರೂ ಅನೇಕ ಶಾಲೆಗಳು ಶಿಕ್ಷಕರಿಲ್ಲದೆ ಎಷ್ಟೋ ದಿನದ ನಂತರ ಬಾಗಿಲು ತೆರೆದರೆ ಹಲವು ಶಾಲೆಗಳು ಇದುವರೆಗೂ ಬಾಗಿಲು ತೆರೆದಿಲ್ಲ. ಈ ಶಾಲೆಗಳು ಬಾಗಿಲು ತೆರೆಯದಿರುವುದನ್ನು ಕಂಡು ಕೆಲವು ಪೋಷಕರು ಮಕ್ಕಳನ್ನು ದೂರದ ಬೇರೆ ಶಾಲೆಗಳಿಗೆ ಕಳುಹಿಸುತ್ತಿದ್ದರೆ ಇನ್ನೂ ಕೆಲವರು ಇಂದಲ್ಲ ನಾಳೆ ಶಾಲೆ ತೆರೆಯುವುದೆಂಬ ಆಶಾಭಾವನೆ ಇನ್ನು ಕೊಂಡಿದ್ದಾರೆ!.

ಪ್ರಜಾವಾಣಿ, ಜು. 18



ಗಿರಿಜನ ಬಾಲಕಿಯರ ಮಾರಾಟ

ಮೈಸೂರು : ಹೆಗ್ಗಡದೇವನ ಕೋಟೆಯ ಬಾಲಕಿಯರನ್ನು ಇಲ್ಲಿಯ ಕೆಲವರು ಮನೆಗೆಲಸಕ್ಕಾಗಿ ಮಂಗಳೂರು, ಹಾಸನ ಇತರೆಡೆಗಳಿಗೆ ಕಳಿಸುವುದಾಗಿ ಹೇಳಿ ಮುಂಬಯಿಗೆ ರವಾನಿಸಿರುವ ಪ್ರಕರಣಗಳು ಇದೀಗ ಬೆಳಕಿಗೆ ಬಂದಿವೆ.

ಇಂಥ ಬಾಲಕಿಯರು ಕೇವಲ 10 ರಿಂದ 12 ವರ್ಷ ವಯಸ್ಸಿನವರು ಮಾತ್ರ ಎನ್ನಲಾಗಿದೆ.

ಕಡು ಬಡತನದಿಂದ ಬಳಲುತ್ತಿರುವ ಗಿರಿಜನರು ತಮ್ಮ ಮಕ್ಕಳನ್ನ ಸಾಕಿ ಸಲಹುವ ಸ್ಥಿತಿಯಲ್ಲೇನೂ ಇಲ್ಲ. ಹಸಿವಿನಿಂದಲೇ ಸಾಯುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ.

ಇದರಿಂದಾಗಿ ತಂದೆ-ತಾಯಿಗಳು ತಮ್ಮ ಮಕ್ಕಳನ್ನು 200-300 ರೂ. ಗಳಿಗೆ ಮಾರಿಕೊಳ್ಳುವ ಅತಿ ದಯನೀಯ ಪರಿಸ್ಥಿತಿಯುಂಟಾಗಿದೆ.

ಕನ್ನಡ ಪ್ರಭ, ಜು. 14

'ಮಗು ಹೆತ್ತರೂ ಲಂಚ ಕೇಳ್ತಾರೆ'

ಬೆಂಗಳೂರು : "ಇಲ್ಲಿ ಹೆತ್ತರೂ 200 ರೂ. ಲಂಚ ಕೊಡಬೇಕು ಟೈಮಿಗೆ ಸರಿಯಾಗಿ ವೈದ್ಯರು ಬರೋದಿಲ್ಲ. ರಾತ್ರಿ ಹತ್ತರ ನಂತರ ಪ್ರಾಣ ಹೋಗತ್ತೇ ಅಂದ್ರೂ ಯಾರು ಇರಲ್ಲ"

ಬರಗಾಲದ ದವಡೆಯಲ್ಲಿ ಸಿಲುಕಿದ ರಾಜ್ಯ

-- ಕಾಂ. ಎನ್.ಕೆ. ಉಪಾಧ್ಯಾಯ

ಕರ್ನಾಟಕ ರಾಜ್ಯದ ಇಪ್ಪತ್ತು ಜಿಲ್ಲೆಗಳ ಪೈಕಿ ಮುಕ್ಕಾಲು ಭಾಗ ಪ್ರತಿ ವರ್ಷ ಒಂದಲ್ಲೊಂದು ರೀತಿಯಲ್ಲಿ ಅಭಾವ ಪರಿಸ್ಥಿತಿಯನ್ನಾಗಲೀ ಬರಪರಿಸ್ಥಿತಿಯನ್ನಾಗಲೀ ಎದುರಿಸುತ್ತಲೇ ಬಂದಿದೆ. ಹಾಗೆಯೇ ಮೂರು ನಾಲ್ಕು ಜಿಲ್ಲೆಗಳು ಮಳೆಗಾಲದ ನೆರೆಹಾವಳಿಯನ್ನು ಹಾಗೆಯೇ ಡಿಸೆಂಬರ್-ಜನವರಿ ತಿಂಗಳುಗಳಲ್ಲಿ ಅಕಾಲಿಕ ಉತ್ತರ-ದಕ್ಷಿಣ ಬಿರುಗಾಳಿಯಿಂದಾಗುವ ಅತಿವೃಷ್ಟಿಯನ್ನು ಎದುರಿಸುತ್ತಲೇ ಬರಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ನೀರಾವರಿಗೊಳಪಟ್ಟ ಶೇ. 18 ರಿಂದ 20 ರಷ್ಟರ ಪ್ರದೇಶ ಬಿಟ್ಟರೆ ಉಳಿದ ಭೂಮಿ ಹಿಂಗಾರು ಮುಂಗಾರು ಮಳೆಯ ಆಶ್ರಯ ಪಡೆದೇ ಬೆಳೆ-ಬೆಳೆಯ ಬೇಕಾಗುತ್ತದೆ.

ಭರಣಿ-ರೋಹಿಣಿ ಮಳೆಗಳು ರೈತರನ್ನು ಭೂಮಿ ಗಟ್ಟಿ ಭೂಮಿ ಹಸನುಗೊಳಿಸುವ ಕಾರ್ಯದಲ್ಲಿ ತೊಡಗಿಸುತ್ತವೆ ಜೂನ್ 7 ರಂದು ಮೃಗಶಿರ ಮಳೆಯಾದ ಕೂಡಲೇ ಮುಂಗಾರು ಬೆಳೆಯನ್ನವಲಂಬಿಸಿರುವ ರೈತ ತನ್ನ ಭೂಮಿಯಲ್ಲಿ ಬಿತ್ತನೆ ಮಾಡುತ್ತಾನೆ. ರಾಗಿ, ಕೆಂಪು ಜೋಳ, ಮೆಕ್ಕೆ ಜೋಳ ಶಜ್ಜೆ (ಬಾಜ) ರಾಗಿ ಶೈಗ್ಗಾ, ಹೆಸರು, ಮೊದಲಾದ ಮುಂಗಾರು ಬೆಳೆಗಳ ಬೀಜ ಬಿತ್ತನೆಯ ಕಾರ್ಯ ಪ್ರಾರಂಭವಾಗುತ್ತದೆ. ಮಳೆ ತಡವಾದರೆ ಜೂನ್ ಕೊನೆ, ಜುಲೈ ಮೊದಲನೇವಾರದವರೆಗೂ ರೈತ ಮಳೆರಾಯನ ದಾರಿ ನೋಡುತ್ತಾನೆ. ತಡವಾಗಿ ಮಳೆಯಾದರೂ ಬಿತ್ತುತ್ತಾನೆ. ಅಕ್ಟೋಬರ್‌ನಲ್ಲಿ ಬರುವ ಉತ್ತರಿ ಮಳೆ ಆದಾಗ ಹಿಂಗಾರಿ ಬಿತ್ತನೆ ಪ್ರಾರಂಭವಾಗುತ್ತದೆ. ಬಿಳಿ ಜೋಳ, ಗೋದಿ, ತೊಗರಿ, ಹತ್ತಿ ಮೊದಲಾದ ಬೆಳೆಗಳ ಕೆಲಸ ಪ್ರಾರಂಭವಾಗುತ್ತದೆ.

ನಾನು ಬಿಜಾಪುರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಿಗೆ ಹೋಗಿದ್ದೆ. ಬಳ್ಳಾರಿಯ ಬೀದರಿನ ಪರಿಸ್ಥಿತಿಯನ್ನು ಅಭ್ಯಾಸ ಮಾಡಿದೆ.

ಹೋದ ವರ್ಷ ಮೇ, ಜೂನ್ ತಿಂಗಳಲ್ಲಿ ಮಳೆಯಾದ ಕೂಡಲೇ ಮುಂಗಾರು ಬಿತ್ತನೆ ಮಾಡಲಾಗಿತ್ತು. ಆದರೆ ಮುಂದೆ ಮಳೆ ಆಗಲಿಲ್ಲ. ಮುಂಗಾರು ಪೂರ್ಣ ನಾಶವಾಗಿತ್ತು. ಹಿಂಗಾರು ಮಳೆ ರಾಜ್ಯದ ಹೆಚ್ಚಿನ ಭಾಗಗಳಲ್ಲಾಗಲಿಲ್ಲ. ಆದರೆ ಡಿಸೆಂಬರ್-ಜನವರಿ ತಿಂಗಳಲ್ಲಿ ಉತ್ತರ-ಪೂರ್ವ ಬಿರುಗಾಳಿ ಪೂರ್ವದಿಂದ ಮೋಡ ಹೊತ್ತು ತಂದ ಪರಿಣಾಮವಾಗಿ ಬಿಜಾಪುರ ಕೋಲಾರ, ತುಮಕೂರು ಹೀಗೆ ಕೆಲವು ಜಿಲ್ಲೆಗಳಿಗೆ ಲಾಭವಾಗಿತು. ಗುಲ್ಬರ್ಗಾ ಬಳ್ಳಾರಿ ಜಿಲ್ಲೆಗಳಿಗೆ ಹಾನಿಯಾಗಿತು. ಗುಲ್ಬರ್ಗಾದ ತೊಗರಿ ಬೆಳೆಗೆ ಪೂರ್ಣ ಹಾನಿಯಾಗಿತ್ತು. ಈ ವರ್ಷವಂತೂ ರಾಜ್ಯದ ಹೆಚ್ಚಿನ ಭಾಗ ಭೀಕರ ಪರಿಸ್ಥಿತಿಯನ್ನೆದುರಿಸುವಂತಾಗಿದೆ. ಬಿಜಾಪುರ, ಗುಲ್ಬರ್ಗಾ, ಬೀದರ, ರಾಯಚೂರು, ಚಿತ್ರದುರ್ಗ, ಬಳ್ಳಾರಿ, ತುಮಕೂರು, ಕೋಲಾರ ಹಾಗೆಯೇ ಬೆಳಗಾವಿ ಜಿಲ್ಲೆಯ ಅಥಣಿ ಪ್ರದೇಶ, ಧಾರವಾಡ ಜಿಲ್ಲೆಯ ನರಗುಂದ, ನವಲಗುಂದ ರೋಣ, ಗದಗ್ ಪ್ರದೇಶಗಳಲ್ಲಿ ಭೀಕರ ಬರಗಾಲದ ಛಾಯೆ ಆವರಿಸಿದೆ. ಎಂಥ ಗಂಭೀರ ಪರಿಸ್ಥಿತಿ ಉಂಟಾದರೂ ಕೂಡಾ ಬಿಜಾಪುರ ಮೊದಲಾದ ಜಿಲ್ಲೆಗಳ ಜನ ಜೂನ್ ತಿಂಗಳಲ್ಲಿ ಹೊಟ್ಟೆಪಾಡಿಗಾಗಿ ಊರುಬಿಟ್ಟು ಪರ ಊರಿಗೆ ಹೋಗುತ್ತಿರಲಿಲ್ಲ. ಆದರೆ ಕಳೆದ ಎರಡು ವರ್ಷಗಳ ಅನುಭವ ಹಾಗೆಯೇ ಈ ವರ್ಷ ಮಳೆಯು ಪೂರ್ಣ ಕೈಕೊಟ್ಟಿರುವ ಪರಿಸ್ಥಿತಿಯಿಂದಾಗಿ ಈ ಜಿಲ್ಲೆಗಳಿಂದ ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಗುಳೇ ಹೋಗುವ ಜನರ ಮಹಾಪೂರವೇ ಪ್ರಾರಂಭವಾಗಿದೆ. ಗೋವಾ, ಮಹಾರಾಷ್ಟ್ರದ ಕೊಲ್ಹಾಪುರ, ಸಾಂಗ್ಲಿಗಳಿಗೆ ಮಾತ್ರವಲ್ಲದೆ, ಬೆಂಗಳೂರು ಮಂಗಳೂರುಗಳಿಗೂ ವಲಸೆ ಹೋಗುತ್ತಿರುವ ದೃಶ್ಯ ನೋಡಬಹುದಾಗಿದೆ. ಕೃಷಿ ಕೂಲಿಗಾರರೇ ಹೆಚ್ಚಾಗಿರುವ ಜಿಲ್ಲೆಗಳಲ್ಲಿ, ಮಳೆಯ ಅಭಾವದಿಂದ ಜಿಲ್ಲೆಯ ಯಾವ ಭಾಗದಲ್ಲೂ ಕೃಷಿ ಚಟುವಟಿಕೆಗಳೇ ಇಲ್ಲದ್ದರಿಂದ ಈ ಕೂಲಿಗಾರರ ಸ್ಥಿತಿ ಚಿಂತಾಜನಕವಾಗಿದೆ. ಬಿಜಾಪುರ, ಧಾರಾವಾಡ, ಗುಲ್ಬರ್ಗದ ಗ್ರಾಮಾಂತರ ಪ್ರದೇಶದ ಜನ ತಮ್ಮ ನೆಲೆ-ಮನೆಗಳನ್ನು ಬಿಟ್ಟು ಪರವೂರಿಗೆ ಸಂಸಾರ ಸಮೇತ ಕೆಲವು ತಿಂಗಳು ಹೋಗುವ ಪರಿಪಾಠವಿದೆ. ಆದರೆ ರಾಯಚೂರ, ಮೊದಲ ಜಿಲ್ಲೆಗಳ ಕೃಷಿ ಕೂಲಿಗಾರರಿಗೆ ಬದುಕುಳಿಯಲಿಕ್ಕೆ ಏನೂ ಆಶ್ರಯವಿಲ್ಲದಿದ್ದರೂ ಕೂಡಾ ಊರು ಬಿಟ್ಟು ಗುಳೇ ಹೋಗುವ ಪದ್ಧತಿಯನ್ನು ಅಳವಡಿಸಿಕೊಳ್ಳದಿರುವುದರಿಂದ ಅತ್ಯಂತ ಗಂಭೀರ ಪರಿಸ್ಥಿತಿಯನ್ನೇ ಎದುರಿಸಬೇಕಾಗಿದೆ. ಆ ಕಾರಣದಿಂದಾಗಿ ತುಂಗಭದ್ರಾ, ಕೃಷ್ಣಾ, ಭದ್ರಾ, ಮೊದಲಾದ ನೀರಾವರಿ ಪ್ರದೇಶಗಳಲ್ಲಿ ಕೃಷಿಕಾರ್ಮಿಕರಿಗಾಗಿ ಪೈಪೋಟಿ ನಡೆದು ಕೃಷಿ ಕಾರ್ಮಿಕರು ಕಡಿಮೆ ಮಜೂರಿಯಲ್ಲಿ ದುಡಿಯುವಂತಾಗಿದೆ. ಭೂಮಾಲಕರು ಲಾಭ ಗಿಟ್ಟಿಸಿ ಹೆಚ್ಚಿನ ಶೋಷಣೆಗೆ ಅವಕಾಶ ಮಾಡಿಕೊಟ್ಟಂತಾಗಿದೆ.

ಜಲಕ್ಷಾಮ ಭೀತಿ

ಪಶ್ಚಿಮಘಟ್ಟದಲ್ಲಿ ಮಳೆಯಾಗಿ ಈಗಾಗಲೇ ಮೈತುಂಬಿ ಹರಿಯಬೇಕಾಗಿದ್ದ ಕಾವೇರಿ, ಶರಾವತಿ, ತುಂಗ-ಭದ್ರಾ, ಮಲಪ್ರಭಾ, ಘಟಪ್ರಭಾ ನದಿಗಳು ಬಿಕೋ ಅನ್ನುತ್ತಿವೆ. ಶರಾವತಿ ಮತ್ತು ಕೃಷ್ಣ ಸ್ವಲ್ಪ ಮೈತುಂಬಿವೆ ಜೂನ್ ಮಧ್ಯದ ಮಳೆಯಿಂದಾಗಿ ಆದರೆ ಈಗ ಮತ್ತೆ ತುಂಬಿದ ನೀರನ್ನು ಹರಿಯಬಿಟ್ಟು ಮತ್ತೆ ಬರಿದಾಗಿ ಕಾಣುತ್ತಿವೆ.

ಕೆಲಸಕ್ಕಾಗಿ ಮಾತ್ರವಲ್ಲ ಕುಡಿಯುವ ನೀರಿಗಾಗಿಯೂ ಭೀಕರ ಪರಿಸ್ಥಿತಿ ಉಂಟಾಗಿದೆ. ಪ್ರಕೃತಿ ವಿಕೋಪದಿಂದಾಗಿ ಕುಡಿಯುವ ನೀರಿಗೂ ಗತಿಕಾಣದಂಥ ಅತಿ ಭೀಕರ ದೃಶ್ಯವನ್ನು ನೋಡಬೇಕಾಗಬಹುದೇನೋ? ನಗರ ಪ್ರದೇಶದ ಬಾವಿಗಳು ಸಂಪೂರ್ಣ ಬತ್ತಿಹೋಗಿವೆ. ಗ್ರಾಮಾಂತರ ಪ್ರದೇಶದಲ್ಲಿಯೂ ಬಾವಿ, ಕೆರೆಗಳೆಲ್ಲಾ ಒಣಗಿ ತಳತೋರಿಸುತ್ತಿವೆ. ಮಲೆನಾಡು ಪ್ರದೇಶಗಳಲ್ಲಿ ಮಳೆಯಾಗದೆ ನದಿಗಳು ಸೊರಗುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ಜಲಕ್ಷಾಮ ಭೀತಿ ಹೆಚ್ಚಿನ ಜಿಲ್ಲೆಗಳನ್ನು ಆವರಿಸಿದೆ.

ಮಳೆಯಾಗುತ್ತಿಲ್ಲ, ಮಳೆಯಾದರೂ ಕೂಡ, ಆ ನೀರನ್ನು ಕೂಡಿ ಹಿಡಿದಿಡುವ ಯೋಜನೆಗಳಿಲ್ಲ. ಉದಾಹರಣೆಗೆ ಶರಾವತಿ, ಕೃಷ್ಣಾಗಳಲ್ಲಿ ಇದೇ ತಿಂಗಳು ನೆರೆ ನೀರು ಹರಿದು ಸಮುದ್ರ ಸೇರಿವೆ. ಈಗ ಕೃಷ್ಣ ಮತ್ತೆ ಬರಿದಾಗಿದೆ. ನೆರೆ ನೀರನ್ನು ಹಿಡಿದಿಡಲಿಕ್ಕೆ ಯೋಜನೆ ರೂಪಿಸುವಲ್ಲಿ ಸರಕಾರ ವಿಫಲವಾಗಿದೆ. ಕೃಷ್ಣಾ ಮೊದಲಾದ ನೀರಾವರಿಯೊಜನೆಗಳನ್ನು ಪೂರ್ತಿಗೊಳಿಸುವತ್ತ ಸರಕಾರ ತೀವ್ರ ಗಮನಹರಿಸುತ್ತಿಲ್ಲ. ಆಶ್ವಾಸನೆಗಳ ಸುರಿಮಳೆ ನೀರು ಸುರಿಸುತ್ತಿಲ್ಲ. ನದಿಗಳೂ, ಕೆರೆಗಳೂ ಹೂಳು ತುಂಬಿ ಬಿಟ್ಟಿವೆ. ಆ ಕಾರಣದಿಂದಾಗಿ ಕೆಲವು ಸಲ ದೊಡ್ಡ ಮಳೆಯಾದರೂ ಹೆಚ್ಚು ನೀರು ಸಂಗ್ರಹಿಸಲಿಕ್ಕಾಗುತ್ತಿಲ್ಲ. ಅಣೆಕಟ್ಟು, ನದಿ, ಕೆರೆಗಳಲ್ಲಿ ನೀರು ತುಂಬಿದ್ದರೆ ಮಾತ್ರ ಕೊಳವೆ ಬಾವಿಗಳಿಂದ ನೀರು ಲಭ್ಯವಾಗಬಹುದು. ಮೇಲಿನಿಂದ ಮಳೆಯಲ್ಲಿ, ಕೊಳವೆ ಬಾವಿಗಳ ಮೂಲಕ ಅಂತರ್ಜಲ ಸಂಪತ್ತು ಲಭ್ಯವಾಗಲು ಸಾಧ್ಯವೇ?

ಈಗಾಗಲೇ ಪಟ್ಟಣ ಹಾಗೂ ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ನಡೆದಿದೆ. ಇದರ ಪರಿಹಾರಕ್ಕೆ ಸರಕಾರದಿಂದ ಉಪಾಯ ಕೊಳವೆ ಬಾವಿ ತೋಡುವುದೊಂದೇ ಆಗಿದೆ. ಸತತ ದುರುಪಯೋಗ ಹಾಗೆಯೇ ಮಳೆಯ ಅಭಾವದಿಂದಾಗಿ ಅಂತರ್ಜಲ ಪೂರ್ಣ ಬತ್ತಿ ಹೋಗುತ್ತಿದೆ ಎಂಬ ಅಂಶ ಈ ಕುರುಡು ಸರಕಾರಕ್ಕೆ ಅರಿವಾಗುತ್ತಿಲ್ಲವಲ್ಲ.

ಮೇವಿನ ಅಭಾವ

ಒಂದು ಕಡೆ ಜನ ಕೆಲಸಕ್ಕಾಗಿ ಊರು ಬಿಡುತ್ತಿದ್ದಾರೆ. ಮತ್ತೊಂದು ಕಡೆ ಕುಡಿಯುವ ನೀರಿಗಾಗಿ ಹಾಹಾಕಾರ ಎದ್ದಿದೆ. ಇವುಗಳ ಜೊತೆಯಲ್ಲಿಯೇ ದನಗಳ ಮೇವಿನ ಸಮಸ್ಯೆ ಕೂಡ ಗಂಭೀರವಾಗಿದೆ. ಹೋದ ವರ್ಷದ ಅಲ್ಪ ಸ್ವಲ್ಪ ಮೇವು ಉಳಿದಿರುವುದರಿಂದ ತುರ್ತಾಗಿ ಮೇವಿನ ಅಭಾವ ಕಂಡುಬರಲಿಕ್ಕಿಲ್ಲ. ಆದರೆ ಇದೇ ಪರಿಸ್ಥಿತಿ ಮುಂದುವರಿದರೆ ಇನ್ನೆರೆಡು ತಿಂಗಳಲ್ಲಿ ದನಕರುಗಳು ಮೇವಿಲ್ಲದೆ ಸಾವನ್ನಪ್ಪುವ ಅಥವಾ ಕಟುಕರ ಕತ್ತಿಗೆ ಕತ್ತು ಕೊಡುವ ಗಂಭೀರ ಪರಿಸ್ಥಿತಿ ಉಂಟಾಗುವುದರಲ್ಲಿ ಸಂಶಯವಿಲ್ಲ.

ಅಭಾವ ಪರಿಸ್ಥಿತಿ ನೀಗಿಸಲು ಕ್ರಮ

ಕರ್ನಾಟಕದ ಬಹುಭಾಗ ಎದುರಿಸುತ್ತಿರುವ ಅಭಾವ ಪರಿಸ್ಥಿತಿಯನ್ನು ನೀಗಿಸಲು, ಹಾಗೆಯೇ ಮಲೆನಾಡು ಪ್ರದೇಶಗಳಲ್ಲಿ ಕಡಿಮೆ ಮಳೆಯಾಗುತ್ತಿರುವುದನ್ನು ಸರಿಪಡಿಸಲು ಮುಖ್ಯವಾಗಿ ಸರಕಾರ ಅರಣ್ಯನೀತಿಯಲ್ಲಿ ಬದಲಾವಣೆ ಮಾಡಿ ಮರಕಡಿದಂತೆಯೇ ಹೊಸ ಸಸಿನೆಟ್ಟು ದಟ್ಟ ಅರಣ್ಯ ರಕ್ಷಿಸುವ, ಅರಣ್ಯ ವಿಸ್ತಾರಗೊಳಿಸುವ, ಜಿಲ್ಲೆಗಳಲ್ಲಿ ಅರಣ್ಯ ಬೆಳೆಸುವ ಕಾರ್ಯವನ್ನು ನಿಷ್ಠೆಯಿಂದ ಕೈಗೊಳ್ಳಬೇಕು. ಕೋಟ್ಯಾವಧಿ ರೂಪಾಯಿ ಈ ಕೆಲಸಕ್ಕಾಗಿ ಖರ್ಚಾಗುತ್ತಿದ್ದು, ಅದು ದುರುಪಯೋಗವಾಗುತ್ತಿದೆ. ಅದು ನಿಲ್ಲಬೇಕು.

ಎರಡನೆಯದಾಗಿ ಮಳೆನೀರನ್ನು ಸರಿಯಾಗಿ ಸಂಗ್ರಹಿಸಿಡಲು ನೀರಾವರಿಯೋಜನೆಗಳನ್ನು ಯುದ್ಧದೋಪಾದಿಯಲ್ಲಿ ಪೂರ್ಣಗೊಳಿಸಬೇಕು. ನದಿಗಳ ಹಾಗೆಯೇ ಕೆರೆಬಾವಿಗಳ ಹೂಳು ತೆಗೆಯಬೇಕು.

ಬರಗಾಲ ಕಾಮಗಾರಿಗಳಿಗಾಗಿ ಕೋಟ್ಯಾಂತರ

ಪುಟ 8ನೋಡಿ

ಆಗಸ್ಟ್ 5 - ವಿದ್ಯಾರ್ಥಿ-ಪೋಷಕರ 'ವಿಧಾನಸೌಧ ಚಲೋ'

ವೃತ್ತಿಪರ ಶಿಕ್ಷಣಕ್ಕೆಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿರುವ ಐತಿಹಾಸಿಕ ತೀರ್ಪು ಜಾರಿಗಾಗಿ, ಪ್ರೌಢ ಶಿಕ್ಷಣದಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸುವುದರ ವಿರುದ್ಧ ಹಾಗೂ ಏರಿಸಿರುವ ಪಿ.ಯು.ಸಿ. ಶುಲ್ಕ ರದ್ದತಿಗೆ ಆಗ್ರಹಿಸಿ ಆಗಸ್ಟ್ 5,1993 ರಂದು ಬೃಹತ್ ವಿದ್ಯಾರ್ಥಿ ಪೋಷಕರ "ವಿಧಾನ ಸೌಧ ಚಲೋ" ಸಂಘಟಿಸಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ದಲಿತ ವಿದ್ಯಾರ್ಥಿ ಒಕ್ಕೂಟ (ಡಿ.ಎಸ್.ಎಫ್) ಹಾಗೂ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎ.ಐ.ಎಸ್.ಎಫ್) ರಾಜ್ಯ ಸಮಿತಿಗಳು ಜಂಟಿಯಾಗಿ ನಿರ್ಧರಿಸಿವೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ ಪೋಷಕರು ಭಾಗವಹಿಸುವವರು ಎಂದು ಈ ಮೂರು ಸಂಘಟನೆಗಳ ರಾಜ್ಯ ಮುಖಂಡರು ಹೇಳಿದ್ದಾರೆ.

ರಾಜ್ಯದ ವಿದ್ಯಾರ್ಥಿ ಚಳುವಳಿಯಲ್ಲಿ ಮೈಲಿಗಲ್ಲಾಗಲಿರುವ ಈ ಆಂದೋಲನವನ್ನು ಯಶಸ್ವಿಗೊಳಿಸಲು ವಿವಿಧ ಹಂತಗಳಲ್ಲಿ ಹೋರಾಟಗಳನ್ನು ರೂಪಿಸಲಾಗಿದೆಯೆಂದು ಅವರು ಹೇಳಿದ್ದಾರೆ.

ವಿದ್ಯಾರ್ಥಿ ಪೋಷಕರ ಸಮಾವೇಶಗಳು: ಈ ಮೇಲಿನ ಪ್ರಮುಖ ಬೇಡಿಕೆಗಳ ಬಗ್ಗೆ ಜನಾಭಿಪ್ರಾಯ ರೂಪಿಸಿ ಆಗಸ್ಟ್ 5 ರ ರ‍್ಯಾಲಿಗೆ ಬೃಹತ್ ಸಂಖ್ಯೆಯಲ್ಲಿ ವಿದ್ಯಾರ್ಥಿ-ಪೋಷಕರನ್ನು ಪಾಲ್ಗೊಳಿಸಲು ರಾಜ್ಯದ ಪ್ರಮುಖ 25 ಕೇಂದ್ರಗಳಲ್ಲಿ ಈಗಾಗಲೇ ವಿದ್ಯಾರ್ಥಿ-ಪೋಷಕರ ಸಮಾವೇಶಗಳನ್ನು ನಡೆಸಲಾಗಿದೆ. ಈ ಸಮಾವೇಶಗಳು ಜುಲೈ 13 ರಂದು ಆರಂಭವಾಗಿ ಜುಲೈ 20 ರ ವರೆಗೆ ನಡೆದವು. ಎಲ್ಲಾ ಕೇಂದ್ರಗಳಲ್ಲಿ ವಿದ್ಯಾರ್ಥಿ- ಪೋಷಕರು ಸಮಾವೇಶದಲ್ಲಿ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಮೂರು ಸಂಘಟನೆಗಳ ರಾಜ್ಯ ಮುಖಂಡರುಗಳು ಹಾಗೂ ಸ್ಥಳೀಯ ಶೈಕ್ಷಣಿಕ ಕ್ಷೇತ್ರದ ಗಣ್ಯರು ಭಾಗವಹಿಸಿದ್ದರು.

ಜುಲೈ 22 ರಂದು ಪ್ರತಿಭಟನಾ ದಿನಾಚರಣೆ

ಮೇಲಿನ ಮೂರು ಬೇಡಿಕೆಗಳ ಜೊತೆಗೆ ಹಾಸ್ಟೆಲ್ ಸಮಸ್ಯೆ ಶಿಕ್ಷಕರ ಕೊರತೆ, ವಿಪರೀತ ವಂತಿಗೆ ವಸೂಲಿ ಹಾವಳಿ ಇತ್ಯಾದಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿ ದಿನಾಚರಣೆ ನಡೆಸಲು ಕರೆ ನೀಡಲಾಗಿದೆ.

ಸರ್ಕಾರದ ಶಿಕ್ಷಣ ವ್ಯಾಪಾರಿಗಳನ್ನು ಸಂತೃಪ್ತಿಗೊಳಿಸುವ ಪ್ರವೃತ್ತಿ ನಿಲ್ಲಬೇಕು. ಯಾವುದೇ ಕಾರಣಕ್ಕೂ ಶುಲ್ಕ ಏರಿಕೆಯಾಗಬಾರದು, ಬದಲಿಗೆ ಶುಲ್ಕ ಕಡಿಮೆಯಾಗಬೇಕು ಮತ್ತು ಸಂಪೂರ್ಣವಾಗಿ ಸುಪ್ರೀಂಕೋರ್ಟಿನ ತೀರ್ಪನ್ನು ಜಾರಿಮಾಡಬೇಕೆಂದು, ಪ್ರಾಥಮಿಕ ಶಿಕ್ಷಣದ ಮೂಲಭೂತ ಹಕ್ಕು ಎನ್ನುವ ಹಿನ್ನೆಲೆಯಲ್ಲಿ ಎಲ್ಲ ಹಂತದಲ್ಲಿಯೂ ಡೊನೇಶನ್ ಹಾವಳಿ ತಡೆಯನ್ನು ಹಾಕಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸುತ್ತಿದ್ದಾರೆ.

"ಹಿಂದಿ ಅಂಕ ಏರಿಕೆ ರದ್ದಾಗಲಿ"

ಪ್ರೌಢ ಶಿಕ್ಷಣದಲ್ಲಿ ಹಿಂದಿ ಭಾಷೆಯ ಅಂಕಗಳನ್ನು 50 ರಿಂದ 100 ಕ್ಕೆ ಏರಿಸಿ, ಕಡ್ಡಾಯಗೊಳಿಸಿರುವ ರಾಜ್ಯ ಸರ್ಕಾರದ ಕ್ರಮ ಅತ್ಯಂತ ಅವೈಜ್ಞಾನಿಕ, ಅಪ್ರಜಾಸತ್ತಾತ್ಮಕ ಹಾಗೂ ಅತೀ ಹೊರೆಯಾಗಿರುವುದರಿಂದ ಈ ಕ್ರಮವನ್ನು ಕೂಡಲೇ ವಾಪಸ್ ಪಡೆಯಬೇಕು. ಕರ್ನಾಟಕದಲ್ಲಿ ಈಗಾಗಲೇ ವಿದ್ಯಾರ್ಥಿಗಳು ಕಲಿಯುತ್ತಿರುವ 2-3 ಭಾಷೆಗಳ ಜೊತೆಗೆ ಇನ್ನೊಂದು ಭಾಷೆಯ ಕಡ್ಡಾಯ ಸರಿಯಲ್ಲ. ಮಾತೃಭಾಷೆ, ಪ್ರಾದೇಶಿಕ ಭಾಷೆ ಬಿಟ್ಟು ಉಳಿದೆಲ್ಲಾ ಭಾಷೆಗಳು ಹಿಂದಿ, ಇಂಗ್ಲೀಷ್ ಸೇರಿ ವಿದ್ಯಾರ್ಥಿಗಳಿಗೆ ಐಚ್ಛಿಕವಾಗಿರಬೇಕೇ ಹೊರತು ಹಿಂದಿ, ಇಂಗ್ಲೀಷ್ ಕಲಿಯಲು ಅಥವಾ ಕಲಿಸಲು ತಮ್ಮ ವಿರೋಧವಿಲ್ಲ. ಆದರೆ ಇವುಗಳನ್ನು ಕಡ್ಡಾಯ ಮಾಡುವುದರಿಂದ ಶೈಕ್ಷಣಿಕ ರಂಗದಲ್ಲಿ ಹಲವು ಗಂಭೀರ ಪರಿಣಾಮಗಳುಂಟಾಗುತ್ತವೆ ಎಂದು ಈ ಸಂಘಟನೆಗಳ ರಾಜ್ಯ ಮುಖಂಡರು ಹೇಳಿದ್ದಾರೆ.

ಪಿ.ಯು.ಸಿ. ಶುಲ್ಕ ಏರಿಕೆ ಹಿಂತೆಗೆದುಕೊಳ್ಳಲು ಒತ್ತಾಯ

ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯ "ಸ್ವತಃ ಖರ್ಚಿನಲ್ಲಿ ಶಿಕ್ಷಣ" ಎನ್ನುವ ತತ್ವ ಪಾಲಿಸಲು ಪಿ.ಯು.ಸಿ. ಶುಲ್ಕ ಏರಿಸಿರುವುದನ್ನು ವಿರೋಧಿಸುತ್ತಾ, ಇದು ಬಡವರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುವ ಸನ್ನಾಹವಾಗಿದ್ದು, ಶುಲ್ಕ ಏರಿಕೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಲಾಗಿದೆ.. ಈ ಶುಲ್ಕ ಏರಿಕೆಯ ಪ್ರಕ್ರಿಯೆ ಇನ್ನು ಮುಂಬರುವ ದಿನಗಳಲ್ಲಿ ವ್ಯಾಪಕವಾಗಲಿದ್ದು, ಬಹುಜನರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುವ ತಂತ್ರವಾಗಿದೆ. ಆದ್ದರಿಂದ ಈ ಶಿಕ್ಷಣ ನೀತಿಯ ವಿರುದ್ಧ ವಿದ್ಯಾರ್ಥಿಗಳು ಹೋರಾಟಕ್ಕೆ ಸಿದ್ಧರಾಗಬೇಕೆಂದು ಎಂದು ಅವರು ಕರೆ ನೀಡಿದ್ದಾರೆ.

"ಶಿಕ್ಷಣದ ಸಂಸ್ಥೆಗಳು ಮಾರಾಟದ ಅಂಗಡಿಗಳಂತೆ ಇದೆ"

-- ಮಂಗಳೂರು ವಿ.ವಿ. ಪ್ರಧ್ಯಾಪಕ

"ಕ್ಯಾಪಿಟೇಷನ್ ಶುಲ್ಕ ಗುಣವಾಗದ ಕ್ಯಾನ್ಸರ್" ಎಂದು ಮಂಗಳೂರು ವಿಶ್ವವಿದ್ಯಾಲಯದ ಇಂಗ್ಲೀಷ್ ವಿಭಾಗದ ಮುಖಸ್ಥ ಪ್ರೊ. ಸಿ.ಎನ್. ರಾಮಚಂದ್ರನ್ ಬಣ್ಣಿಸಿದರು.

ಎಸ್.ಎಫ್.ಐ., ಎ.ಐ.ಎಸ್.ಎಫ್., ಡಿ.ಎಸ್.ಎಫ್., ಜಂಟಿಯಾಗಿ ಮಂಗಳೂರಿನಲ್ಲಿ ಕ್ಯಾಪಿಟೇಷನ್ ಶುಲ್ಕ ಮತ್ತು ಹಿಂದಿ ಭಾಷೆ ಹೇರಿಕೆಯ ವಿರುದ್ಧ ಏರ್ಪಡಿಸಿದ್ದ ಜಿಲ್ಲಾ ಸಮಾವೇಶವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಖಾಸಗಿ ಶಿಕ್ಷಣ ಸಂಸ್ಥೆಗಳು , ಮಠಾಧಿಪತಿಗಳು ತಮಗೆ ಬೇಕಾದಂತೆ ಶುಲ್ಕ ವಸೂಲಿ ಮಾಡಲು ಅವಕಾಶ ಮಾಡಿಕೊಡದಿದ್ದರೆ ಕಾಲೇಜುಗಳನ್ನು ಮುಚ್ಚುತ್ತೇವೆ ಎಂದು ಬೆದರಿಸುವ ಉದ್ಧಟತನ ತೋರಿಸುತ್ತಿದ್ದಾರೆ. ನ್ಯಾಯಾಲಯದ ಆದೇಶವನ್ನು ಪಾಲಿಸದೆ ಶಿಕ್ಷಣ ಕ್ಷೇತ್ರದಲ್ಲಿ ಭಯಾನಕ ವಾತಾವರಣವನ್ನು ಸೃಷ್ಟಿ ಮಾಡಿದೆ ಎಂದಿದ್ದಾರೆ. ಶಿಕ್ಷಣ ಸಂಸ್ಥೆಗಳು ಮಾರಾಟದ ಅಂಗಡಿಗಳಂತೆ ಇದೆ ಎಂಬುದನ್ನು ಇದು ಎತ್ತಿ ತೋರಿಸಿದೆ ಎಂದರು.

ತರಳಬಾಳು ಶಿವಮೂರ್ತಿ ಸ್ವಾಮಿಗಳು ಸರ್ಕಾರ ನಿಗದಿಪಡಿಸಿದ ಶುಲ್ಕ ಸಂರಚನೆಯ ವಿರುದ್ಧ ಹೋರಾಟ ನ್ಯಾಯಬದ್ಧ ಹಾಗೂ ಕಾನೂನುಬದ್ಧ ಎಂದು ಹೇಳಿರುವ ಮಾತನ್ನು ಖಂಡಿಸಿದ ಅವರು ಈ ನ್ಯಾಯಬದ್ಧ ಹಕ್ಕನ್ನು ಅವರಿಗೆ ನೀಡಿದವರು ಯಾರು? ಎಂದರು.

ರಾಜ್ಯ ಸರ್ಕಾರವೂ ಕ್ಯಾಪಿಟೇಷನ್ ಬಗ್ಗೆ ತಂತ್ರಗಾರಿಕೆ ಮಾಡುತ್ತಿದೆ. ಇದು ಕೋರ್ಟ್ ಆದೇಶದ ಅವಗಣನೆ. ಸರ್ಕಾರಕ್ಕೆ ಈಗ ಸರ್ಜರಿ ನಡೆಸಬೇಕಾದವರು ವಿದ್ಯಾರ್ಥಿಗಳು ಮತ್ತು ಪೋಷಕರು ಎಂದರು.

ವಿಚಾರವಾದಿ ಸಂಘದ ನರೇಂದ್ರ ನಾಯಕ್ ಅವರು ಮಾತನಾಡಿ ಸ್ಥಳೀಯ ಜನರ ಅವಶ್ಯಕತೆಗಾಗಿ ವೈದ್ಯಕೀಯ ಎಂಜಿನೀಯರಿಂಗ್ ಕಾಲೇಜ್ ಎಂದು ಹೇಳಿ ಪರರಾಷ್ಟ್ರ, ರಾಜ್ಯಗಳ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಹಣ ದೋಚಲಾಗುತ್ತಿದೆ ಎಂದರು.

ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಶಾಂತಾರಾಂ ನಾಯಕ್ ಮಾತನಾಡಿ ಹಿಂದಿ ಭಾಷೆ ವಿದ್ಯಾರ್ಥಿಗಳಿಗೆ ನುಂಗಲಾರದ ತುತ್ತಾಗಿದೆ. ಹಿಂದಿ ಭಾಷೆಯಲ್ಲಿ ಕಳೆದ ವರ್ಷ 14 ಸಾವಿರ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಹಿಂದಿ ಭಾಷೆ ಕಡ್ಡಾಯವಾಗಬಾರದು ಎಂದರು.

ಡಾ. ಸತೀಶ್ ರೈ ಎ.ಐ.ಎಸ್.ಎಫ್ ರಾಜ್ಯ ಕಾರ್ಯದರ್ಶಿ ಅಷ್ಟುಬ್ ಅವರೂ ಮಾತನಾಡಿದರು.

ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟದಿಂದ ಈ ದೇಶಕ್ಕಾದ ಹಾನಿ ಎಷ್ಟು ಗೊತ್ತೆ? ಇತ್ತೀಚೆಗೆ ಪ್ಯಾರಿಸಿನಲ್ಲಿ 'ಭಾರತ ನೆರವು ಕೂಟ' ಘೋಷಿಸಿದ ವಿದೇಶೀ ನೆರವಿನ ಇಮ್ಮಡಿ. ಅತ್ಯಂತ ಕಠಿಣ ಶರತ್ತಿಗೆ ಒಪ್ಪಿ ಐ.ಎಂ.ಎಫ್.ನ 'ವಿಶೇಷ ಸೌಲಭ್ಯ' ಯೋಜನೆಯಲ್ಲಿ ಪಡೆಯಬೇಕೆಂದಿರುವ ಸಾಲದ ಎರಡು ಪಟ್ಟು. ಈ ವರ್ಷ ಐ.ಎಂ.ಎಫ್.ನಿಂದ ಪಡೆದಿರುವ ಸಾಲದ ಹತ್ತುಪಟ್ಟು! ಇಂತಹ ಅಭೂತಪೂರ್ವ ಮೋಸ ನಡೆಸಿರುವ ಸರಕಾರವನ್ನು ಮುಂದುವರಿಯಲು ಜನ ಬಿಡಬೇಕೇ ಎಂದು ಪ್ರಶ್ನಿಸಿದ್ದಾರೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಕಾಂ. ಸೀತಾರಾಂ ಯೆಚೂರಿ.

ಆರಕ್ಕೆ ಮೂರಾಗಿ ಮಾರಾಟವಾಗುತ್ತಿರುವ ಸರಕಾರಿ ಕಾರಖಾನೆಗಳು

ಜನರ ಆಸ್ತಿ 12,000 ಕೋಟಿ ರೂ. ಲೂಟಿ

-- ಕಾಂ. ಸೀತಾರಾಂ ಯೆಚೂರಿ

ಸಾರ್ವಜನಿಕ ವಲಯ ಒಂದು ಬಿಳಿಯಾನೆ. ದೇಶದ ಅಮೂಲ್ಯ ಸಂಪನ್ಮೂಲವನ್ನು ವ್ಯರ್ಥ, ಬರಿದು ಮಾಡುವ ತಿಂದು ತೇಗುವ ಬಿಳಿಯಾನೆ ಎಂಬ ಮಾತು ಇತ್ತೀಚಿನ ವರ್ಷಗಳಲ್ಲಿ ನಮ್ಮದೇಶದ ಜನ ಬಹಳ ಸಲ ಕೇಳಿದ್ದಾರೆ. ಆದ್ದರಿಂದ ದೇಶದ ಆರ್ಥಿಕವನ್ನು ಪುನಶ್ಚೇತನಗೊಳಿಸಬೇಕಾದರೆ ಖಾಸಗೀಕರಣವೊಂದೇ ರಾಮಬಾಣ ಎಂಬ ಮಾತು ಮತ್ತೆ-ಮತ್ತೆ ನಮ್ಮ ಕಿವಿಗೆ ಹಾಕುತ್ತಿದೆ. ನಿಜ, ಜನಗಳ ಕಲ್ಯಾಣಕ್ಕಾಗಿಯೇ ಇದು ಎಂದು ಹೇಳಲಂತೂ ಆಳುವ ವರ್ಗಗಳ ವಕ್ತಾರರು ಎಂದೂ ಮರೆಯುವುದಿಲ್ಲ.

ನರಸಿಂಹರಾಯರ ಸರಕಾರ ಅಧಿಕಾರ ವಹಿಸಿಕೊಂಡಮೇಲೆ ಈ ಖಾಸಗೀಕರಣದ ಕೆಲಸ ಆರಂಭಿಸಿಯೇ ಬಿಟ್ಟತು. ಅದನ್ನು ಅವರು 'ಖಾಸಗೀಕರಣ' ಎಂದು ಕರೆಯಲಿಲ್ಲ. ಸಾರ್ವಜನಿಕ ವಲಯದಲ್ಲಿ ತೊಡಗಿಸಿದ ಶೇರು ಬಂಡವಾಳವನ್ನು ಒಂದೆ ಪಡೆಯುವುದು ಅಥವಾ ಶೇರುಗಳ ಮಾರಾಟ ಎಂದು ಕರೆದರು ಸರಕಾರೀ ಚಟುವಟಿಕೆಗಳಿಗೆ ಹಣದುಬ್ಬರ ಉಂಟಾಗದಂತೆ ಹಣ ಸಂಗ್ರಹಿಸಲು, ಈ ಉದ್ದಿಮೆಗಳಲ್ಲಿ ಚೈತನ್ಯ ತುಂಬಲು ಅವುಗಳ ತಂತ್ರಜ್ಞಾನ ಮಟ್ಟದ ಉದ್ಧಾರಕ್ಕೆ ಇದು ಅತ್ಯಗತ್ಯ ಎನ್ನಲಾಯಿತು. ಎರಡು ಘಟ್ಟಗಳಲ್ಲಿ ಡಿಸೆಂಬರ್ 1991 ಹಾಗೂ ಫೆಬ್ರವರಿ 1992 ರಲ್ಲಿ ಈ 'ಶೇರು ಮಾರಾಟ' ನಡೆಯಿತು.

ಆಳುವ ವರ್ಗಗಳು ಪರ್ವಾನುಗಟ್ಟಲೆಯಿಂದ ಸಾರ್ವಜನಿಕ ವಲಯದ ಬಗ್ಗೆ ಮಾಡಿಕೊಂಡ ದೂಷಣೆ ನಿಜವೆಂದು ಸಾಬೀತಾಯಿತೇ? ಸರಕಾರ ಹೇಳಿಕೊಂಡ ಉದ್ದೇಶ ಈಡೇರಿತೇ?

ನಮ್ಮ ಸಂಸದೀಯ ವ್ಯವಸ್ಥೆಯ ಅತ್ಯುಚ್ಚ ಲೆಕ್ಕಪಾಸಕರ ಸಂಸ್ಥೆ, ಸರಕಾರದ ಆದಾಯ-ಖರ್ಚಿನ ಲೆಕ್ಕಗಳ ಪರಿಶೋಧನೆ ನಡೆಸಿ ಸಂಸತ್ತಿಗೆ ವರದಿ ನೀಡುವ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ವರದಿ ಅಥವಾ ಸಂಕ್ಷಿಪ್ತವಾಗಿ ಸಿ.ಎ.ಜಿ. ವರದಿ ಭಾರತ ಸರಕಾರ 30 ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಅತ್ಯಂತ ಅಗ್ಗದರದಲ್ಲಿ ಮಾರಿಕೊಂಡು ಖಾಸಗೀ ವಲಯಕ್ಕೆ ಕೋಟ್ಯಂತರ ರೂಪಾಯಿಗಳನ್ನು ಕೂಡ ಮಾಡಿದೆಯೆಂಬ ಅಂಶವನ್ನು ಈಗ ಬಯಲಿಗೆಳೆದಿದೆ. ಈ 'ಕೊಡುಗೆ'ಯೊಂದಿಗೆ ಸತತವಾಗಿ ಬಂಡವಾಳಶಾಹಿಗಳು ತೆರಬೇಕಾದ ಕಂಪೆನಿ ತೆರಿಗೆಯಲ್ಲಿ ಸತತ ಕಡಿತ ಈ ಸರಕಾರದ ನೀತಿ ಯಾವ ವರ್ಗಕ್ಕಾಗಿ ಎಂದು ತೋರಿಸುತ್ತದೆಯಲ್ಲವೇ?

ಕೇವಲ ಐ.ಎಂ.ಎಫ್ ಕೃಪೆಗಾಗಿ!

ರಾವ್ ಸರಕಾರದ ಹೊಸ ಆರ್ಥಿಕ ವಿಧಿ-ವಿಧಾನಗಳು ದೇಶದ ಆರ್ಥಿಕ ಸಾರ್ವಭೌಮತ್ವಕ್ಕೆ ದೊಡ್ಡ ಕುತ್ತು ತರುತ್ತಿವೆಯಷ್ಟೇ ಅಲ್ಲ, ಅದಕ್ಕಿಂತಲೂ ಮುಖ್ಯವಾಗಿ ಆಳುವ ವರ್ಗಗಳು ಯಾವ ನಾಚಿಕೆಯೂ ಇಲ್ಲದೆ ಸಾರ್ವಜನಿಕ ಸಂಪನ್ಮೂಲಗಳನ್ನು ಲೂಟಿ ಹೊಡೆಯಲು ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ಸಂಸತ್ತಿನಲ್ಲಿ ಮಂಡಿಸಿದ ಸಿ.ಎ.ಜಿ. ವರದಿಯಿಂದ ಸ್ಪಷ್ಟವಾಗುತ್ತದೆ. ಈ ಶೇರು ಮಾರಾಟಗಳ ಮೂಲಕ ಭಾರತ ಸರಕಾರ ಹೇಳಿಕೊಂಡ ಉದ್ದೇಶಗಳು ಈಡೇರಿಲ್ಲ, ಅದರ ಬಜೆಟ್ಟಿನ ಹಣಕಾಸು ಕೊರತೆಯನ್ನು ಕಡಿಮೆ ಮಾಡಲು ನೆರವಾಯಿತಷ್ಟೇ ಎಂದಿದೆ ಈ ವರದಿ.

ನಿಜವಾಗಿ ಸರಕಾರದ ಉದ್ದೇಶವಿದ್ದದ್ದು ಇದೊಂದೇ. ಹಣದುಬ್ಬರವಿಲ್ಲದೆ ಸಂಪನ್ಮೂಲ ಸಂಗ್ರಹಿಸುವುದು, ಸಾರ್ವಜನಿಕ ಉದ್ದಿಮೆಗಳ ಹೊಸ ಚೈತನ್ಯ ಮೂಡಿಸುವುದು, ತಂತ್ರಜ್ಞಾನ ಮಟ್ಟ ಏರಿಕೆ ಇತ್ಯಾದಿಯೆಲ್ಲಾ ಬರೀ ಬೊಗಳೆಗಳು. ಐ.ಎಂ.ಎಫ್ ಮತ್ತು ದೇಶದೊಳಗಿನ ಬಂಡವಾಳಶಾಹಿಗಳನ್ನು ತೃಪ್ತಿಪಡಿಸಲಷ್ಟೇ ಸರಕಾರ ಈ ಮಾರಾಟಕ್ಕಿಳಿಯಿತು ಎಂದು ಬೇರೆ ಹೇಳಬೇಕಾಗಿಲ್ಲ.

ಐ.ಎಂ.ಎಫ್ ಆಣತಿಯಂತೆ ಸಂಪನ್ಮೂಲ ಎತ್ತಿ ಹಣಕಾಸು ಕೊರತೆ ತಗ್ಗಿಸಲು ರಾವ್ ಸರಕಾರ 1991-92 ರ ಬಜೆಟ್ಟಿನಲ್ಲಿ ಕೆಲವು ಸಾರ್ವಜನಿಕ ಉದ್ದಿಮೆಗಳ ಶೇರುಗಳ ಮಾರಾಟದ ನಿರ್ಧಾರ ಪ್ರಕಟಿಸಿತ್ತು. ಈ ಮಾರಾಟ ಹೇಗೆ ನಡೆಯುತ್ತದೆ ಎಂದು ಹಣಕಾಸು ಮಂತ್ರಿಗಳ 1991 ರ ಬಜೆಟ್ ಭಾಷಣ ಮತ್ತು ಅದೇ ವರ್ಷ ಸರಕಾರದ ಕೈಗಾರಿಕಾ ನೀತಿ ಹೇಳಿಕೆ ತಿಳಿಸಿತ್ತು.

ಮಾರಾಟದ ವಿಧಾನವನ್ನು ಪರಿಶೀಲಿಸಿ ಶಿಫಾರಾಸು ಮಾಡುವ ಕೆಲಸವನ್ನು ಸಾರ್ವಜನಿಕ ಉದ್ದಿಮೆಗಳ ಇಲಾಖೆ (ಡಿ.ಪಿ.ಇ)ಗೆ ವಹಿಸಲಾಗಿತ್ತು. ಅದು 244 ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ 41 ಉದ್ದಿಮೆಗಳ ಶೇರುಗಳನ್ನು ಮಾತ್ರ ಮಾರಾಟ ನಡೆಸಬೇಕು ಎಂದು ಶಿಫಾರಸು ಮಾಡಿತು. ಕೆಲವು ಉದ್ದಿಮೆಗಳ ಶೇರುಗಳನ್ನು ಮಾರಬಾರದು ಎಂದೂ ಅದು ಹೇಳಿತ್ತು. ಉದಾ: ಮುಖ್ಯವಾಗಿ ವಿದ್ಯುತ್ ಉತ್ಪಾದನೆ ಹಾಗೂ ಸರಬರಾಜಿನ ಕೆಲಸದಲ್ಲಿ ತೊಡಗಿರುವ, ರಕ್ಷಣೆಗೆ ಸಂಬಂಧಪಟ್ಟ, ಉದ್ದಿಮೆಗಳ, ಸರಕಾರದ ಪಾಲು 60 ಶೇಕಡಾ ಕ್ಕಿಂತಲೂ ಕಡಿಮೆಯಿರುವ ಉದ್ದಿಮೆಗಳ ಶೇರು ಮಾರಾಟಮಾಡಬಾರದು ಎಂದಿತ್ತು. ಡಿ.ಪಿ.ಇ. ನ ಕಾರ್ಯದರ್ಶಿ ಯ ಅಧ್ಯಕ್ಷತೆಯಲ್ಲಿ ನೇಮಿಸಿದ ಸಮಿತಿ ಯಾವುದೇ ಸಾರ್ವಜನಿಕ ಉದ್ದಿಮೆಯ 20 ಶೇ. ಕ್ಕಿಂತ ಹೆಚ್ಚು ಶೇರುಗಳ ಮಾರಾಟ ನಡೆಸಬಾರದು. , ಯಾವುದೇ ಸಂದರ್ಭದಲ್ಲೂ ಸರಕಾರದ ಪಾಲು 51 ಕ್ಕಿಂತ ಕಡಿಮೆಯಾಗಬಾರದು, ಸಾರ್ವಜನಿಕ ಹಣಕಾಸು ಸಂಸ್ಥೆಗಳಿಗೆ ಮಾತ್ರ ಮಾರಬೇಕು, ಅವು ಅದನ್ನು ಸಾರ್ವಜನಿಕ ಹಣಕಾಸು ಸಂಸ್ಥೆಗಳಿಗೆ ಮಾತ್ರ ಮಾರಬೇಕು, ನೀತಿ- ಅವು ಅದನ್ನು ಸಾರ್ವಜನಿಕರಿಗೆ ಮಾರುವ ಬಗ್ಗೆ ನೀತಿ-ನಿಯಮಾಳಿ ಹಾಕಬೇಕು ಎಂದು ಹೇಳಿತ್ತು. ಈ ಎಲ್ಲಾವನ್ನು ಯಾವುದೇ ಭಯ- ನಾಚಿಕೆಯಿಲ್ಲದೆ ಉಲ್ಲಂಘಿಸಿಲಾಯಿತು ಎಂದು ಸಿಎಜಿ ವರದಿಯಿಂದ ಬಯಲಿಗೆ ಬಂದಿದೆ.

ಯಾರಿಗುಂಟು? ಯಾರಿಗಿಲ್ಲ?

ಸಿ.ಎ.ಜಿ. 'ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ' ಅಥವಾ ಭಾರತ ಉಕ್ಕು ಪ್ರಾಧಿಕಾರದ ಶೇರುಗಳ ಮಾರಾಟದ ಬಗ್ಗೆ ಒಂದು ವಿಶೇಷ ಅಧ್ಯಯನ ನಡೆಸಿತು. ಈ ಒಂದು ಸಾರ್ವಜನಿಕ ಉದ್ದಿಮೆಯ ಶೇರುಗಳ ಮಾರಾಟದಲ್ಲಿಯೇ ಸರಕಾರದ ಖಜಾನೆಗೆ 3,700 ಕೋಟಿ ರೂ ನಷ್ಟವಾಗಿದೆ ಎಂದು ಅಂದಾಜು ಮಾಡಿದೆ. ಈ ಉದ್ದಿಮೆಯ ಶೇರುಗಳನ್ನು ಮಾರಾಟ ಮಾಡಬಾರದು, ಏಕೆಂದರೆ ಈ ಶೇರುಗಳ ಸರಿಯಾದ ಮೌಲ್ಯಮಾಪನ ಆಗಲಿಕ್ಕಿಲ್ಲ, '994-95 ರವರೆಗೆ ಇದಕ್ಕೆ ನ್ಯಾಯೋಚಿತ ಬೆಲೆ ಸಿಗಲಿಕ್ಕಿಲ್ಲ, ಅಲ್ಲದೆ ಉಕ್ಕಿನ ಮೇಲಿನ ಹತೋಟಿ ತೆಗೆದು, ಬೆಲೆ ಹೆಚ್ಚಿಸಿ ಆಧುನಿಕರಣ ಮಾಡಿ ಈ ಉದ್ದಿಮೆಯ ಲಾಭವನ್ನು ಹೆಚ್ಚಿಸಲು ಸಾಧ್ಯವಾದ್ದರಿಂದ ಅದರ ಶೇರುಗಳ ಮಾರಾಟ ಮಾಡಬಾರದು ಎಂದು ಸರಕಾರವೇ ನೇಮಿಸಿದ ಸಮಿತಿ ನಿರ್ಧರಿಸಿತ್ತು ಆದರೂ ಮಾರಾಟ ನಡೆಯಿತು.

ಒಬ್ಬ ಖಾಸಗೀ ಸಲಹೆಗಾರ ಈ ಉದ್ದಿಮೆಯ ಶೇರಿನ 'ರಿಝರ್ವ್ ಬೆಲೆ'35 ರೂ ಆಗುತ್ತದೆ ಎಂದು ಸರಕಾರಕ್ಕೆ ಅಭಿಪ್ರಾಯ ನೀಡಿದ. ಆದರೆ ಸರಕಾರ 10 ರೂ ನಿಗದಿ ಮಾಡಿತು. ಶೇರು ಮಾರಾಟದಿಂದ ಸಿಕ್ಕ ಹಣ 13.24 ರೂ ಎರಡು ತಿಂಗಳ ನಂತರ ದಿಲ್ಲಿ ಶೇರು ಮಾರುಕಟ್ಟೆಯಲ್ಲಿ ಈ ಶೇರು ಮಾರಾಟಕ್ಕೆ ಬಂತು. ಆಗ ಅದರ ಬೆಲೆ 200 ರೂ.! ಈ ಬೆಲೆಯಲ್ಲಿ 19.91 ಕೋಟಿ ಶೇರುಗಳ ಮಾರಾಟವಾಯಿತು. ಅಂದರೆ ಭಾರತದ ಜನತೆಗೆ ಈ ಆಸ್ತಿ ಮಾರಾಟದಿಂದ ಸುಮಾರು 3,980 ಕೋಟಿ ರೂ. ಬರಬೇಕಿತ್ತು. ದಕ್ಕಿದ್ದು ಕೇವಲ 260 ಕೋಟಿ ರೂ. ಉಳಿದ ಹಣ ಯಾರ ಜೇಬಿಗ ಹೋಯಿತು? ದೇಶವನ್ನು ಲೂಟಿ ಹೊಡೆಯುತ್ತಿರುವವರ ಲೂಟಿ ಹೀಗೆಯೇ ಸಾಗಿದೆ.

ಸರಕಾರ ಉತ್ತರ ನೀಡಿಲ್ಲ!

ಲಾಭ ಮಾಡುತ್ತಿದ್ದ ಉದ್ದಿಮೆಗಳು ಹಾಗೂ ಲಾಭವಿಲ್ಲದ ಉದ್ದಿಮೆಗಳ ಶೇರುಗಳನ್ನು ಬಂಡಲ್‌ಗಳಾಗಿ ಮಾಡಿ ಮಾರಾಟಮಾಡಲಾಯಿತು. ಆದರೆ ಈ ರೀತಿ ಬಂಡಲ್‌ಗಳಾಗಿ ಮಾಡುವ ಕೆಲಸದಲ್ಲಿ ಯಾವುದೇ ವಿಧಿ-ವಿಧಾನ ಇರಲಿಲ್ಲ. ಮನಬಂದಂತೆ ಮಾಡಲಾಯಿತು ಎಂದಿದೆ ಸಿ.ಎ.ಜಿ ವರದಿ. ಮೊದಲ ಮಾರಾಟದಲ್ಲಿ ಸರಕಾರ ಒಟ್ಟು 8,000 ಕೋಟಿರೂಗಳಷ್ಟು ಬೆಲೆಯ ಶೇರುಗಳನ್ನು ಮಾರಾಟಕ್ಕಿಟ್ಟಿತು. ಆದರೆ ಆಗ ಸಾರ್ವಜನಿಕ ಹಣಕಾಸು ಸಂಸ್ಥೆಗಳಲ್ಲಿ ತೊಡಗಿಸಲು ಇದ್ದ ಒಟ್ಟು ಹಣ 2,000-2,500 ಕೋಟಿ ರೂಗಳಷ್ಟೇ. ಆದ್ದರಿಂದ ಈ ಶೇರುಗಳನ್ನು ಕೊಳ್ಳಲು "ಸ್ಪರ್ಧೆ"ಯೆಂಬುದೇ ಇಲ್ಲದಂತೆ ಮಾಡಲಾಯಿತು ಎಂದು ಸಿ.ಎ.ಜಿ. ವರದಿಯಿಂದ ಕಂಡುಬರುತ್ತದೆ. ಮೊದಲ ಸುತ್ತಿನಲ್ಲಿ 72.61 ಬಂಡಲ್‌ಗಳಿಗೆ ಕೇವಲ ಒಂದೊಂದೇ ಹಣಕಾಸು ಸಂಸ್ಥೆ 'ಸವಾಲ್ ಕೂಗಿತು'(ಬಿಡ್‌ಕೂಗಿತು) ಕೇವಲ 4.1 ಶೇ ಬಂಡಲ್‌ಗಳಿಗಷ್ಟೇ 3 ಕ್ಕಿಂತ ಹೆಚ್ಚು 'ಸವಾಲ್' ಗಳು ಬಂದವು ಎರಡನೇ ಸುತ್ತಿನಲ್ಲಿ ಪರಿಸ್ಥಿತಿ ತುಸು ಸುಧಾರಿಸಿತಷ್ಟೆ, 35 ಶೇ. ಬಂಡಲ್‌ಗಳಿಗೆ ಒಂದೊಂದೇ 'ಸವಾಲ್' ಗಳು ಬಂದವು ಎಂದಿದೆ ಸಿ.ಎ.ಜಿ. ವರದಿ. ಅಂದರೆ ಉದ್ದೇಶಪೂರ್ವಕವಾಗಿಯೇ ಈ ಶೇರುಗಳನ್ನು ಕೊಳ್ಳುವಲ್ಲಿ ಸ್ಪರ್ಧೆಯಿಲ್ಲದಂತೆ ಮಾಡಿ ಅಗ್ಗದರದಲ್ಲಿ ಮಾರಲಾಯಿತು.

ಈ ಶೇರುಗಳ ನಿರೀಕ್ಷಿತ ಮಾರಾಟ ಬೆಲೆಯೆಷ್ಟಿರಬೇಕು ಎಂದು ಸರಕಾರವೇ ಒಂದು 'ರಿಝರ್ವ್ ಬೆಲೆ' ನಿಗದಿ ಪಡಿಸಿತ್ತು. ಆದರೆ ಇದಕ್ಕಿಂತಲೂ 64 ಶೇ. ಕಡಿಮೆ ಅಂದರೆ ಮೂರನೇ ಒಂದರಷ್ಟು ಬೆಲೆಯನ್ನು ಒಪ್ಪಿಕೊಂಡು ಅವನ್ನು ಕೊಳ್ಳುವವರಿಗೆ ಭಾರೀ ಲಾಭಗಿಟ್ಟಿಸಲು ಸರಕಾರ ಅವಕಾಶ ಮಾಡಿಕೊಟ್ಟಿತು. ಡಿ.ಪಿ.ಇ. ಈ ರೀತಿ ಇಷ್ಟೊಂದು ಬೆಲೆ ಕಡಿಮೆ ಮಾಡಿದ್ದನ್ನು ಸರಕಾರದ ಗಮನಕ್ಕೆ ಏಕೆ ತರಲಿಲ್ಲ. ಈ ರೀತಿ ಸರಕಾರವೇ ನಿಗದಿಪಡಿಸಿದ ಬೆಲೆಗಳನ್ನು ಕಡಿಮೆ ಮಾಡಲು ಆಧಾರವೇನು ಎಂಬ ಪ್ರಶ್ನೆಗೆ ಸರಕಾರ ಉತ್ತರ ನೀಡಿಲ್ಲ ಎಂದು ಸಿಎಜಿ ವರದಿ ಹೇಳಿದೆ. ಸರಕಾರ ನಿಗದಿಪಡಿಸಿದ ಬೆಲೆಯ ಮೂರನೇ ಒಂದಂಶ ಬೆಲೆಗೆ ಸಾರ್ವಜನಿಕ ವಲಯವನ್ನು ಮಾರಿ ತಿನ್ನಲು ಕೆಲವೇ ಜನರಿಗೆ ಹಕ್ಕು ನೀಡಲಾಗಿತ್ತು ಎಂಬುದು ಸ್ಪಷ್ಟ. ಇದರಿಂದ ಈ ಶೇರುಗಳನ್ನು ಖರೀದಿಸಿದವರು 126.62 ಶೇ. ದಿಂದ 615-53 ಶೇ. (ಅಂದರೆ 6 ಪಟ್ಟಿಗಿಂತಲೂ ಹೆಚ್ಚು) ಲಾಭ ಗಿಟ್ಟಿಸಿದ್ದಾರೆ ಎಂದು ಸಿಎಜಿ ವರದಿ ಲೆಕ್ಕ ಹಾಕಿದೆ. (ಒಂದು ಉದಾಹರಣೆಗೆ ಬಾಕ್ಸ್ ನೋಡಿ) ಈ ಶೇರುಗಳನ್ನು ಸರಕಾರದಿಂದ ಖರೀದಿಸಿದ ಹಣಕಾಸು ಸಂಸ್ಥೆಗಳು ಅವನ್ನು ಮಾರಲು ನೀಡಿದ ಪರವಾನಿಗಿಗೆ ಸರಕಾರ ಈ ಬಗ್ಗೆ ಕೈಗೊಂಡಿದ್ದ ನಿರ್ಧಾರಗಳಿಗೆ, ಭಾರತ ಶೇರು ವಿನಿಮಯ ಮಂಡಳಿ ನೀಡಿದ್ದ ನಿರ್ದೇಶನಗಳಿಗೆ ಏಕ್‌ದಂ ವಿರುದ್ಧವಾದದ್ದು ಎಂದೂ ಸಿಎಜಿ ವರದಿ ಹೇಳಿದೆ.

ಸಾಲವೇ ಬೇಕಿರಲಿಲ್ಲ!


ಸಾರ್ವಜನಿಕ ವಲಯದ ಶೇರುಗಳ ಈ ಮಾರಾಟ ಭಾರತದ ಜನಗಳಿಗೆ ಮಾಡಿರುವ ಅತೀ ದೊಡ್ಡ ಮೋಸ. ಸರಕಾರ ನಿಗದಿ ಪಡಿಸಿದ 'ರಿಝರ್ವ್ ಬೆಲೆ'ಗೆ ಹೋಲಿಸಿದಾಗ ಈ ಮಾರಾಟದಿಂದ ಸರಕಾರದ ಖಜಾನೆಗೆ ಎಷ್ಟು ನಷ್ಟವಾಗಿದೆ ಎಂದು ತಪಾಸಣೆ ಮಾಡುವ ಅಧಿಕಾರ ಮಾತ್ರವೇ ಈ ಸಿ.ಎ.ಜಿ.ಗೆ ಅಂದರೆ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್‌ಗಿದೆ. ಆದರೆ ಈ 'ರಿಝರ್ವ್ ಬೆಲೆ'ಯೇ ಆಗಿನ ಮಾರುಕಟ್ಟೆ ಬೆಲೆಗಿಂದ 100 ಶೇ. ದಿಂದ 300 ಶೇ. ದವರೆಗೂ ಕಮ್ಮಿ ಇತ್ತು. (ಬಾಕ್ಸ್‌ನಲ್ಲಿರುವ ಉದಾಹರಣೆಯಲ್ಲಿ ಇದನ್ನು ಕಾಣಬಹುದು) ಸರಕಾರ ನಿಗದಿಪಡಿಸಿದ 'ರಿಝರ್ವ್ ಬೆಲೆ' ಗೆ ಹೋಲಿಸಿದರೆ ಈ ಶೇರು ಮಾರಾಟದಿಂದಾದ ಹಾನಿ 3,442 ಕೋಟಿ. ರೂ. ಆದರೆ ಮಾರುಕಟ್ಟೆ ಬೆಲೆಗಳ ಆಧಾರದ ಮೇಲೆ

ಅಭೂತಪೂರ್ವ ಮೋಸ- ಒಂದು ಉದಾಹರಣೆ

ಲಾಭದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಬ್ಯಾಂಕುಗಳು ಖರೀದಿಸಿದ, ನಂತರ ದಲ್ಲಾಳರ್‌ಗಳಿಗೆ ಮಾರಿದ, ಅಲ್ಲಿಂದ ಅದು ವಿದೇಶೀ ಬ್ಯಾಂಕುಗಳ ಕೈ ಸೇರಿದ ವಿಧಾನ ಕುತೂಹಲಕಾರಿ. ಕೆಲವು ಸಂದರ್ಭಗಳಲ್ಲಿ ಲಾಭ ಪಡೆದಾತ ಒಬ್ಬ ಅನಾಮಧೇಯ ಗಿರಾಕಿ. ಈ ಒಂದು ಉದಾಹರಣೆ ನೋಡಿ.

10 ಫೆಬ್ರವರಿ 1992 ರಲ್ಲಿ ರಾಷ್ಟ್ರೀಕೃತ ಅಲಹಾಬಾದ್ ಬ್ಯಾಂಕ್ 8 ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳಿದ್ದ ಒಂದು 'ಬಂಡಲ್' ಅನ್ನು (ಬಂಡಲ್ ಸಂಖ್ಯೆ 6 6) ಖರೀದಿಸಿತು. ಮಾರ್ಚ್, 31,1992 ರಂದು ಅದನ್ನು ವೈ.ಎಸ್.ಎನ್ ಸೆಕ್ಯೂರಿಟೀಸ್ ಎಂಬ ಸಂಸ್ಥೆಗೆ ಮಾರಿತು. ಇದು ಅಜಯ್ ಕಲ್ಯಾಣ್ ಎಂಬ ಬಂಡವಾಳಶಾಹಿಯ ಕಂಪೆನಿ. ಅಲಹಾಬಾದ್ ಬ್ಯಾಂಕ್ ತೆತ್ತಹಣ 13.12 ಕೋಟಿ ರೂ. ಮಾರಿದ್ದು 20.06 ಕೋಟಿ ರೂ.ಗೆ ಎರಡು ದಿನಗಳ ನಂತರ ವೈ.ಎಸ್.ಎನ್. ಸೆಕ್ಯೂರಿಟೀಸ್ ಅಮೇರಿಕಾದ ಸಿಟಿ ಬ್ಯಾಂಕ್‌ಗೆ ಅದನ್ನು 20.25 ಕೋಟಿ ರೂಗೆ ಮಾರಿತು. ಅಕ್ಟೋಬರ್ 1992 ರಲ್ಲಿ ಆ ಶೇರುಗಳ ಮಾರುಕಟ್ಟೆ ಬೆಲೆ 44.39 ಕೋಟಿ ರೂಗಳು!

ಸಿಟಿಬ್ಯಾಂಕ್ ಒಬ್ಬ 'ನಂಬಿಕಸ್ಥ ಗಿರಾಕಿ' ಯ ಪರವಾಗಿ ಇದನ್ನು ಖರೀದಿಸಿದಂತೆ. ಆ ಗಿರಾಕಿ ಯಾರು ದೇಶಕ್ಕೆ ತಿಳಿದಿಲ್ಲ. ಆದರೆ ಈ ವ್ಯವಹಾರ ಪೂರ್ವಯೋಜಿತವಾಗಿ ನಡೆದಿದೆ ಎಂಬುದು ಮಾತ್ರ ಇದರಿಂದ ಗೊತ್ತಾಗುತ್ತದೆ. 44.39 ಕೋಟಿ ರೂ. ಬೆಲೆ ಪಡೆಯಬಹುದಾದ ದೇಶದ ಆಸ್ತಿ ಈ ವಿದೇಶೀ ಬ್ಯಾಂಕಿನ 'ನಂಬಿಕಸ್ಥ ಗಿರಾಕಿ'ಗೆ 20.25 ಕೋಟಿ ರೂ. ಗೆ ದಕ್ಕಿತು. ಅದರಿಂದ ನಮ್ಮ ಸರಕಾರದ ಖಜಾನೆಗ ಸಿಕ್ಕಿದ್ದು ಕೇವಲ 13.12 ಕೋಟಿ ರೂ ಹೇಗಿದೆ ರಾವ್ ಸರಕಾರ ಕಲ್ಪಿಸಿ ಕೊಟ್ಟ ವಂಚನೆಯ ವಿಧಾನ!



ೕರು ಹಗರಣದ ಬಾಣಲೆಯಿಂದ ಸಾರ್ವಜನಿಕ ಉದ್ದಿಮೆಗಳ ಶೇರುಗಳ ಮಾರಾಟದ ಮಹಾಹಗರಣದ ಬೆಂಕಿಗೆ ಯನ್ ಎಕ್ಸ್‌ಪ್ರೆಸ್"ನಲ್ಲಿ ನೈನಾನ್‌ರವರ ವ್ಯಂಗ್ಯಚಿತ್ರ.

ಜವಾದ ಸ್ಪರ್ಧೆಯಿರುವ ಮಾರುಕಟ್ಟೆಯಲ್ಲಿ ಗಳನ್ನು ಮಾರಿದ್ದರೆ ಸರಕಾರೀ ಖಜಾನೆಗೆ ಬರ ದ್ದ ಹಣವನ್ನು ಲೆಕ್ಕಹಾಕಿದರೆ ಈ ಮಾರಾಟ ಹಾನಿ ಸುಮಾರು 12 ಸಾವಿರ ಕೋಟಿ ರೂ. ಇದು ಪ್ಯಾರಿಸ್‌ನಲ್ಲಿ ಇತ್ತೀಚೆಗೆ 'ಬಾರತಕ್ಕೆ ಟಿ'ದವರು ಕೊಡುತ್ತೇವೆಂದು ಹೇಳಿದ ನೆರ ಡಿಯಷ್ಟು ಐ.ಎಂ.ಎಫ್‌ನಿಂದ ಭಾರೀ ಕಠಿಣ ಗೆ ಒಪ್ಪಿ ಸದ್ಯದಲ್ಲೇ ಪಡೆಯಬೇಕೆಂದಿರುವ ಾಲಬ್ಧ' ಸಾಲದ ಎರಡು ಪಟ್ಟಿನಷ್ಟು ಅಥವಾ ಐ .ಎಫ್ ನಿಂದ ಪಡೆದ ಸಾಲದ ಹತ್ತು ಂತಹ ಅಗಾಧ ಮೋಸದ ಕೃತ್ಯ ಮುಂದುವ ಭಾರತದ ಜನ ಬಿಡಬೇಕೇ?

ಮಂದಿಯ ಕಿತಾಪತಿ -ಕುತರ್ಕ

.ಜಿ. ವರದಿಯಿಂದ ಇನ್ನೊಂದು ಅಂಶವೂ ಂದಿದೆ. ಸಾರ್ವಜನಿಕ ವಲಯದ ಶೇರುಗಳ ದ ಕೆಲಸದ ಉಸ್ತುವಾರಿಗೆ 15 ಸದಸ್ಯರ ಸಮಿ ನೇಮಕಮಾಡಲಾಗಿತ್ತು. ಆದರೆ ಈ ಸಮಿತಿ ವಿವಿಧ ನಿರ್ಣಯಗಳಿಗೆ ಸಹಿ ಮಾಡಿರು ರಲ ನಾಲ್ಕೇ ಮಂದಿ ಈ ನಾಲ್ವರಲ್ಲಿ ಒಬ್ಬ ಹಣ ಾಖೆಯ ಕಾರ್ಯದರ್ಶಿ ಷಿಂ.ಎಸ್. ಆಹ್ಲು ರಾಜೀವ್‌ಗಾಂಧಿ ಕಾಲದಿಂದಲೇ ಐ.ಎಂ. ಶ್ವಬ್ಯಾಂಕ್ ಭಾರತದ ಹಣಕಾಸು ಇಲಾಖೆ ಮ್ಮ ಏಜೆಂಟ್‌ನಾಗಿ ಇರಿಸಿದ ವ್ಯಕ್ತಿಯಿತ ಎಲ್ಲರಿಗೂ ತಿಳಿದ ಸಂಗತಿ.

ಸ್ನೂ ಸೋಜಿಗದ ಸಂಗತಿ ಗಮನಿಸಿ. ಈ ಯಲಾದ ಮೇಲೆ ಇದರ ಫಲಾನುಭವಿಗಳು ಂಡ ುರುತಿಸಿ ಅವರ ವಿರುದ್ಧ ಕ್ರಮಕ್ಕೈಗೊ ನೇ ಸಿದ್ದ ರಂಗರಾಜನ್ ಸಮಿತಿ ಈ ಮಹಾ ವಂಚನೆಯ ಬಗ್ಗೆ ಕ್ರೋಧ ವ್ಯಕ್ತಪಡಿಸುವ ಬದಲು ಅದ ನ್ನೆಲ್ಲಾ ಚಾಪೆಯ ಕೆಳಗೆ ಸಾರಿಸಿ ಬಿಡುವ ಕೆಲಸ ಮಾಡಿದೆ ಈ ಎಲ್ಲಾ ಕೆಲಸವನ್ನು ಸಮರ್ಥಿಸಿಕೊಳ್ಳುತ್ತಾ 'ನಮ್ಮ ಸಾಲ ತೀರಿಸಲು ನಮ್ಮ ಆಸ್ತಿಗಳನ್ನು ಮಾರಿಕೊಳ್ಳುವು ದಿಲ್ಲವೇ?' ಎಂಬ ತರ್ಕ ಹೂಡಿದೆ! ಹೌದು ಲ್ಯಾಟಿನ್ ಅಮೆರಿಕಾದ ದೇಶಗಳು ಸಾಲದ ಬಲೆಯೊಳಗೆ ಸಿಲು ಕಿದ್ದು ಹೀಗೆಯೇ. ಸಾಲ ತೀರಿಸಲು ರಾಷ್ಟ್ರದ ಆಸ್ತಿಗ ಳನ್ನು ಮಾರಿಕೊಂಡರು. ಅವು ನಂತರ ಖಾಸಗೀ ಕೈಗ ಳಿಗೆ ಹಸ್ತಾಂತರಗೊಂಡವು. ಅಲ್ಲಿಂದ ಕೊನೆಗೆ ಬಹು ರಾಷ್ಟ್ರೀಯ ಕಂಪೆನಿಗಳ ಪಾಲಾದವು.

ಈ ಸರಕಾರ ತನ್ನ ದುಂದುವೆಚ್ಚ ಪೂರೈಸಲು ರಾಷ್ಟ್ರೀಯ ಆಸ್ತಿಗಳನ್ನು ಮಾರಿಕೊಂಡು ಅವನ್ನು ಖಾಸಗೀ ಬಂಡವಾಳಶಾಹಿಗಳಿಗೆ ಕೊಡ ಮಾಡುವ ಹಾದಿಯಲ್ಲೇ ಸಾಗಲು ದೃಢ ನಿರ್ಧಾರ ಮಾಡಿದಂತಿದೆ. ಎರಡು ವರ್ಷಗಳ 'ಸುಧಾರಣೆ'ಯ ಬಗ್ಗೆ ಆ ಸರಕಾರ ಪ್ರಕಟಿಸಿರುವ ಪರಿಶೀಲನೆಯಿಂದ ಇದು ಇನ್ನಷ್ಟು ಸ್ಪಷ್ಟ ವಾಗುತ್ತದೆ. ಜನಗಳ ಮೇಲೆ, ಇನ್ನಷ್ಟು ಸಂಕಟಗಳ ಹೊರೆ ಹಾಕುವ ಸನ್ನಾಹ ಸಾಗಿದೆ.

ದೇಶದ ಜನರಿಗೆ ಮಾಡಿರುವ ಈ ಮಹಾವಂ ಚನೆಗೆ ನೇರ ಹೊಣೆಗಾರರೆಂದರೆ ನರಸಿಂಹರಾವ್ ಸರಕಾರ ಮತ್ತು ಹಣಕಾಸು ಮಂತ್ರಿ ಮನಮೋಹನ್ ಸಿಂಗ್. ಈ ಸರಕಾರ ಮುಂದುವರಿಯಲು ಬಿಡ ಬಾರದು ಎನ್ನುವುದಕ್ಕೆ ಹಲವು ಬಲವಾದ ಕಾರಣಗ ಳಿವೆ. ದೇಶದ ಆಸ್ತಿಯನ್ನು ಮಾರಿತಿನ್ನುವ ಈ ಒಂದೇ ಕಾರಣ ಸಾಕು - ಅದು ಇನ್ನು ಅಧಿಕಾರದಲ್ಲಿ ಮುಂದು ವರಿಯಲು ಬಿಡಬಾರದು ಎಂದು ಘೋಷಿಸಲು.

ಎಂತಹಾ ಬೃಹತ್ ಲೂಟಿ!

ಐ.ಎಂ.ಎಫ್ ಸಾಲದ ಹತ್ತುಪಟ್ಟು!

ರಸಿಂಹರಾವ್ ಸರಕಾರ 30 ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟಮಾ ಅವುಗಳಲ್ಲಿ 10ರ ಬಗ್ಗೆ ಮಾತ್ರ ಸಿ.ಎ.ಜಿ. ಮಾಹಿತಿ ನೀಡಿದೆ. ಶೇರು ಮಾರಾಟದಿಂದ ನಡೆದ ಬೃಹತ್ ಯ ಒಂದು ಚಿತ್ರ ನೀಡುವ ಅಂಕಿ- ಅಂಶಗಳು.

ಯ ಹೆಸರು	ಸರಕಾರ ನಿಗದಿಪಡಿಸಿದ 'ರಿಝರ್ವ್ ಬೆಲೆ'ಯ ಆಧಾರದಲ್ಲಿ ಆದ ನಷ್ಟ, ಕೋಟಿ ರೂಗಳಲ್ಲಿ	ಮಾರುಕಟ್ಟೆಬೆಲೆಗಳ ಆಧಾರದಲ್ಲಿ ಆದ ನಷ್ಟ, ಕೋಟಿ ರೂ.ಗಳಲ್ಲಿ
.ಸಿ.ಎಲ್.	106.11	1031.11
ಚ್.ಇ.ಎಲ್.	136.82	792.78
.ಸಿ.ಎಲ್.	7.48	7.48
.ಒ.ಸಿ.ಎಲ್	74.10	160.96
.ಪಿ.ಸಿ.ಎಲ್.	79.54	1222.28
.ಝುಡ್.ಎಲ್.	511.53	511.53
.ಎಂ.ಟಿ.	11.90	28.55
.ಎ.ಐ.ಎಲ್. (ಪ್ರಾಧಿಕಾರ)	433.19	1329.02
.ಸಿ.ಎಫ್.ಎಲ್.	168.54	168.54
.ಎಲ್.ಸಿ.	326.94	506.41
	1856.15	5758.66

ರಕಾರವೇ ನಿಗದಿಪಡಿಸಿದ ಬೆಲೆಗಳಲ್ಲಿಯೇ 1,856 ಕೋಟಿ ರೂಗಳ ನಷ್ಟವಾಗಿದೆ. ನಿಜವಾದ ದರ ಮೂರು ಪಟ್ಟು-5759 ಕೋಟಿ ರೂ. ಇದರ ಆಧಾರದ ಮೇಲೆ ಉಳಿದ 20 ಉದ್ದಿಮೆಗಳ ಮಾರಾಟದಲ್ಲಿ ಆಗಿರಬಹುದಾದ ನಷ್ಟವನ್ನು ಲೆಕ್ಕಹಾಕಿದರೆ ಅದು 10 ರಿಂದ 12 ಸಾವಿರ ಕೋಟಿ ಷ್ಟಾಗುತ್ತದೆ. ಇದು ಈ ವರ್ಷ ಐ.ಎಂ.ಎಫ್‌ನಿಂದ ಪಡೆದ ಸಾಲದ ಹತ್ತುಪಟ್ಟು!

ಸುಳ್ಳಿನ ಅಬ್ಬರಕ್ಕೆ ಕುಗ್ಗಿಹೋದ ಹಣದುಬ್ಬರ

ಜುಲೈ 3ನೇ ತಾರೀಖಿಗೆ ಕೊನೆಯಾದ ವಾರಕ್ಕೆ ಹಣದುಬ್ಬರದ ಪ್ರಮಾಣ ಶೇ. 5.8 ರಷ್ಟಿತ್ತಂತೆ ಸರ್ಕಾರ ಇದನ್ನು ಹೆಗ್ಗಳಿಕೆಯೆಂಬಂತೆ ಹೇಳಿಕೊಳ್ಳುತ್ತಿದೆ. ಈ ವರ್ಷ ದಲ್ಲಿ ಎರಡನೇ ಸಾರಿ ಹಣದುಬ್ಬರ ಕಡಿತದ ಗುರಿಯನ್ನು ಸಾಧಿಸಲಾಗಿದೆಯಂತೆ.

ಹಣದುಬ್ಬರ ಎಲ್ಲ ವಸ್ತುಗಳ ಬೆಲೆಗಳು ಯಾವ ಪ್ರಮಾಣದಲ್ಲಿ ಏರುತ್ತಿವೆ ಎಂಬುದನ್ನು ಹೇಳುತ್ತದೆ. ಕೆಲವು ಪ್ರಾತಿನಿಧಿಕ ವಸ್ತುಗಳನ್ನು ಆಯ್ದುಕೊಂಡು ಅವುಗಳ ಮಾರುಕಟ್ಟೆ ಬೆಲೆ ನೋಡಿ ಈ ಹಣದುಬ್ಬರ ಪ್ರಮಾಣ ವನ್ನು ಅಳೆಯಲಾಗುತ್ತದೆ.

ಆದರೆ ಮಾರುಕಟ್ಟೆಗೆ ಹೋಗಿ ನೋಡಿ. ಎಲ್ಲ ಅವಶ್ಯ ವಸ್ತುಗಳ ಬೆಲೆಗಳೂ ಏರುತ್ತಿವೆ. ಆದರೆ ಸರ್ಕಾರೀ ಹಣ ದುಬ್ಬರ ಇಳಿಯುತ್ತಿದೆ. ಇದು ಸರ್ಕಾರೀ ಸುಳ್ಳುಗಳಿಂದ ಸಾಧ್ಯವಾಗಿರಬಹುದು ಅಲ್ಲವೆ?

ಖಾಸಗೀ ವಲಯವೆಲ್ಲ ಚೆನ್ನವೆ?

ಉದಾರೀಕರಣದ ಮುಖ್ಯಹಾಡೇ ಖಾಸಗೀಕರಣ. ಸಾರ್ವಜನಿಕ ವಲಯದ ಬಗೆಗೆ ತೀವ್ರ ಟೀಕೆ ಒಂದೆ ಮಾತಿ ನಲ್ಲಿ ಹೇಳುವುದಾದರೆ ಖಾಸಗೀ ವಲಯ ಚೆನ್ನ. ಸಾರ್ವಜ ನಿಕ ವಲಯ ಅನಿಷ್ಟಗಳ ಗೂಡು ಇದು ನಿಜವೆ?

ಔದ್ಯಮಿಕ ರೋಗಪೀಡನೆಯ ಬಗೆಗೆ ನೇಮಕ ವಾದ ಗೋಸ್ವಾಮಿ ಸಮಿತಿಯ ವರದಿ ನೀಡುವ ಅಂಕಿ ಅಂಶಗಳ ಪ್ರಕಾರ 1982 ರಲ್ಲಿ 60,173 ಖಾಸಗಿ ವಲ ಯದ ಘಟಕಗಳು ರೋಗಪೀಡಿತವಾಗಿದ್ದವು. ಈ ರೋಗದ ಬೆಳವಣಿಗೆ ಶೇ. 18.6 ದರದಲ್ಲಿ ಆಗುತ್ತಿದೆ.

ಸಮಿತಿಯ ಪ್ರಕಾರ ದೀರ್ಘಕಾಲದ ರೋಗಪೀಡನೆ ಭಾರತದಲ್ಲಿ ಹೆಚ್ಚಾಗಿದ್ದು ಇದು ದೇಶದ ಆರ್ಥಿಕವನ್ನೇ ಹಾಳುಗೆಡವುತ್ತಿದೆ. ಮೊದಲನೇಯದಾಗಿ ಒಂದು ಬಡ ರಾಷ್ಟ್ರವಾಗಿ ತನ್ನ ಸೀಮಿತ ಹಣಕಾಸನ್ನು ರೋಗಪಿಡೀತ ಘಟಕಗಳಲ್ಲಿ ತೊಡಗಿಸುವುದು ಹಾನಿಕಾರಕ. ಎರಡನೇ ಯದಾಗಿ ಬೇರೆ ರಾಷ್ಟ್ರಗಳಲ್ಲೂ ಸಹ ಇಂತಹ ಘಟಕಗಳು ಬಹಳ ದಿನ ಉಳಿಯುವುದು ಸಾಧ್ಯವಾಗಿಲ್ಲ.



ನರಸಿಂಹರಾವ್ ಸರಕಾರದ 25ನೇ ತಿಂಗಳಲ್ಲಿ

ಆದರೆ ಖಾಸಗೀ ವಲಯದ ಘಟಕಗಳೂ ಏಕೆ ರೋಗಪೀಡಿತವಾಗುತ್ತವೆ. ಚೆನ್ನಕ್ಕೂ ತುಕ್ಕು ಹಿಡಿಯುತ್ತ ದೆಯೇ?

ಉದ್ಯಮಕ್ಕೆ ರೋಗಪೀಡನೆಯೇ? ಕಾರ್ಮಿಕರಿಗೆ ಬರೆ ನೀಡಿ

ಒಂಕಾರ ಗೋಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೇಮಕವಾದ ವರದಿ ರೋಗಪೀಡಿತ ಉದ್ಯಮಗ ಳನ್ನು ತ್ವರಿತವಾಗಿ ಮುಚ್ಚಲು ಶಿಫಾರಸ್ಸು ಮಾಡಿದೆ. ಹೀಗೆ ಮುಚ್ಚುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಅದು ಮುಂಬಯಿ, ಕಲ್ಕತ್ತಾ, ಮದ್ರಾಸ್, ದೆಹಲಿ, ಬೆಂಗಳೂರು ಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ತೆರೆಯಬೇಕೆಂದು ಅದು ಹೇಳಿದೆ. ಇನ್ನೂ ಮುಂದುವರಿದು ಅದು ವಿದೇಶೀ ಕಂಪನಿಗಳು ರೋಗ ಪೀಡತ ಕಂಪನಿಗಳನ್ನು ಕೊಳ್ಳಲು ಪ್ರೋತ್ಸಾಹಿಸಬೇಕೆಂದು ಹೇಳಿದೆ.

ವರದಿಯ ಅಂಶಗಳನ್ನು ಗಮನಿಸಿದರೆ ಇದು ವಿಶ್ವ ಬ್ಯಾಂಕ್-ಐ.ಎಂ.ಎಫ್ ನಿರ್ದೇಶಿತ ವರದಿ ಎಂಬುದು ಸ್ಪಷ್ಟವಾಗುತ್ತದೆ. ಹಣಕಾಸು ವಲಯದ ಸುಧಾರಣೆಗಳಿ ಗಿಂತ ಉದಾರೀಕರಣದ ಕ್ರಮಗಳ ಬಗ್ಗೆ ಒತ್ತು ನೀಡುವ ಈ ವರದಿ ರೋಗ ಪೀಡಿತ ಉದ್ಯಮಗಳನ್ನು ಮುಚ್ಚುವು ದರಿಂದ ಉಂಟಾಗುವ ನಿರುದ್ಯೋಗ, ಕಾರ್ಮಿಕರ ಬವಣೆ ಇತ್ಯಾದಿಗಳ ಬಗ್ಗೆ ಉಸಿರೆತ್ತುವುದೂ ಇಲ್ಲ.

ಬಂಡವಾಳಿಗರ ಉದ್ಯಮಪತಿಗಳು ಬದುಕಿನ ಬಂಗಾರಕ್ಕೆ ಪುಟವಿಡುತ್ತದೆ ಈ ವರದಿ.

-- ಜೆ.ಎಸ್.ಮಣಿ

ನರಸಿಂಹರಾಯರ ಸಮರ್ಥನೆಯಲ್ಲಿ ತೂತುಗಳು!!

ಹರ್ಷದ್ ಮೆಹ್ತ ನರಸಿಂಹರಾಯರನ್ನು 1991ರ ನವೆಂಬರ್ 4 ರಂದು ಭೇಟಿ ಮಾಡಿದ್ದೇನೆಂದು ಹೇಳಿದ ಸಮಯದಲ್ಲಿ ಅವರು ಅವರ ನಿವಾಸದಲ್ಲಿ ಇರಲಿಲ್ಲ ಎಂದು ಕಾಂಗ್ರೆಸ್(ಐ) ಮತ್ತು ಸರ್ಕಾರದ ವಕ್ತಾರರುಗಳು ಹೇಳುತ್ತಿದ್ದಾರೆ. ಅವರು ನಿವಾಸದಲ್ಲಿ ಇಲ್ಲದೇ ಇದ್ದು ದರಿಂದ ಹರ್ಷದ್ ಮೆಹ್ತ ಭೇಟಿ ಆಗಲೇ ಇಲ್ಲ ಮತ್ತು ಆತ ನೀಡಿದ ಹಣ ಸ್ವಿಕರಿಸಲಿಲ್ಲ ಎಂಬುದು ಒಳಾರ್ಥ. ಆತ ಹೇಳಿದಂತಹ ಅವಧಿಯಲ್ಲಿ ಪ್ರಧಾನಿಗಳು ಪಾಕಿಸ್ತಾನಿ ನಿಯೋಗದೊಂದಿಗೆ ಇದ್ದರು ಎಂದು ಹೇಳಿಕೆ ನೀಡಿ ಪಾಕಿ ಸ್ತಾನದ ವಿದೇಶೀ ಕಾರ್ಯದರ್ಶಿ ಆಗಾಶಾಹಿ ಅವರೊಂದಿಗೆ ಇದ್ದ ಫೋಟೋವನ್ನು ಸಹ ನೀಡಲಾಗಿತ್ತು. ಆಗಾಶಾಹಿ ತಾವು ಭೇಟಿಯಾದ ಸಮಯ ಮುಂಜಾನೆ 10-15 ರಿಂದ 10-45 ಗಂಟೆಯಲ್ಲ ಎಂದು ಹೇಳಿಕೆ ನೀಡಿದ್ದರು.

ಈಗ 'ಇಂಡಿಯಾ ಟುಡೇ' ಪತ್ರಿಕೆ ಈ ಫೋಟೋ ವನ್ನು ಕಂಪ್ಯೂಟರ್‌ಗಳ ಮೂಲಕ ವಿಶ್ಲೇಷಿಸಿ ಈ ಭೇಟಿ ಬೆಳಗಿನ 11.18 ಗಂಟೆಗೆ ಆಗಿದೆ ಎಂದಿದೆ.

ಅಂದರೆ ನರಸಿಂಹರಾಯರ ಸುಳ್ಳುಗಳ ಸೌಧ ಉರುಳತೊಡಗಿದೆ ಅಲ್ಲವೆ?

ಇನ್ನೊಬ್ಬ ಮುಖ್ಯ ಅಪರಾಧಿಯ ಬಂಧನ

ಶೇರು ಹಗರಣಕ್ಕೆ ಸಂಬಂಧಪಟ್ಟಂತೆ ಬೇಕಾಗಿದ್ದ ನಿರಂಜನ ಶಹಾ ಎಂಬಾತ ಯುನೈಟೆಡ್ ಅರಬ್ ಎಮಿ ರೆಟ್ಸ್‌ನಲ್ಲಿ ಆಶ್ರಯ ಪಡೆದಿದ್ದ. ಭಾರತ ಸರ್ಕಾರದ ಕೋರಿ ಕೆಯ ಮೇರೆಗೆ ಅಲ್ಲಿನ ಸರ್ಕಾರ ಆತನನ್ನು ಭಾರತಕ್ಕೆ ಒಪ್ಪಿ ಸಿದೆ. ಶೇರು ಹಗರಣದ ಮೊಕದ್ದಮೆಗಳ ವಿಚಾರಣೆ ನಡೆ ಸುತ್ತಿರುವ ಸಿಬಿಐ ಈತನನ್ನು ಪ್ರಶ್ನಿಸಲಿದೆ. ಈತ ಭಾರತಕ್ಕೆ ಹವಳ ವ್ಯಾಪಾರಿಯಾಗಿದ್ದ.

ಕಂತುಗಳಲ್ಲಿ ವರದಿ ಸಲ್ಲಿಸುವ ವಿಚಾರ

ಶೇರು ಹಗರಣಕ್ಕೆ ಹೊಸ ಹೊಸ ತಿರುವುಗಳು ಬರು ತ್ತಿರುವುದರಿಂದ ತನಿಖೆ ನಡೆಯುತ್ತಲೇ ಇದೆ. ಸಂಯುಕ್ತ ಸಂಸದೀಯ ಸಮಿತಿ ಈಗ ಹಲವರ ಸೂಚನೆಯಂತೆ ಕಂತುಗಳಲ್ಲಿ ಶೇರು ಹಗರಣದ ವರದಿಗಳನ್ನು ಸಲ್ಲಿಸುವ ವಿಚಾರ ಮಾಡುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕ್ ನೇಮಿಸಿದ ಜಾನಕೀರಾಮನ್ ಸಮಿತಿ ಹಲವು ಕಂತುಗ ಳಲ್ಲಿ ತನ್ನ ವರದಿಗಳನ್ನು ನೀಡಿದೆ. ಸಂಸದೀಯ ಸಮಿತಿ ಹಗರಣದ ಎಲ್ಲ ವಿಷಯಗಳನ್ನೊಳಗೊಂಡ ಒಂದೇ ವರದಿ ನೀಡುವ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ.

ಶೇರು ಹಗರಣ



ಸರ್ಕಾರಿ ವಿವರಣೆಗಳ ತನಿಖೆ ಮಾಡಲಿರುವ ಸಂಸದೀಯ ಸಮಿತಿ

ಹರ್ಷದ್ ಮೆಹ್ತ ನರಸಿಂಹರಾಯರಿಗೆ ಹಣ ನೀಡಿ ರುವ ವಿಷಯವನ್ನು ಸಂಸದೀಯ ಸಮಿತಿ ತನಿಖೆ ಮಾಡ ಲಿದೆ. ಸರ್ಕಾರ ಇಂತಹ ಭೇಟಿ ನಡೆದೇ ಇಲ್ಲ ಎಂಬ ವಿವ ರಣೆ ನೀಡಿದರೂ ಸಹ ಸಂಸದೀಯ ಸಮಿತಿ ತನಿಖೆಯನ್ನು ಕೈಗೆತ್ತಿಕೊಂಡಿದೆ.

ಕೇಂದ್ರಮಂತ್ರಿಮಂಡಳದ ಕಾರ್ಯದರ್ಶಿ, ವಿದೇಶಾಂಗ ಕಾರ್ಯದರ್ಶಿ ಮತ್ತು ಗೃಹ ಕಾರ್ಯದರ್ಶಿಗಳಿಗೆ ವಿವರವಾದ ಮಾಹಿತಿ ನೀಡುವಂತೆ ಸಂಸದೀಯ ಸಮಿತಿ ಕೇಳಿದೆ. ಪ್ರಧಾನ ಮಂತ್ರಿಗಳು 1991 ರ ನವೆಂಬರ್ 4 ರಂದು ಪಾಕಿ ಸ್ತಾನೀ ನಿಯೋಗದ ಭೇಟಿ ಮಾಡಿದ್ದರೇ ಎಂಬುದನ್ನು ತನಿಖೆ ಮಾಡಲು ವಿದೇಶಾಂಗ ಕಾರ್ಯದರ್ಶಿ ಜೆ.ಎನ್. ದೀಕ್ಷಿತ್ ಅವರಿಗೆ ಪ್ರಶ್ನಾವಳಿ ಕಳುಹಿಸಲಾಗಿದೆ.

ಮಂತ್ರಿ ಮಂಡಳ ಕಾರ್ಯದರ್ಶಿ ಎಸ್. ರಾಜಗೋ ಪಾಲ್ ಅವರನ್ನು 1991 ರ ನವೆಂಬರ್ 4ರಂದು 'ರಾಜ ಕೀಯ ವಿಷಯಗಳ ಮೇಲಿನ ಮಂತ್ರಿ ಮಂಡಳದ ಸಮಿ ತಿಯ ಸಭೆ ನಡೆಯಿತೆ ಎಂಬುದರ ಬಗೆಗೆ ವಿವರಣೆ ಕೇಳ ಲಾಗಿದೆ.'

ಗೃಹ ಕಾರ್ಯದರ್ಶಿ ಎಂ.ಎಂ. ವೊಹ್ರಾ ಅವರನ್ನು ವಿವಿಧ ಗಣ್ಯರ ಬಗೆಗಿನ ಚಲನವಲನಗಳ ಬಗೆಗಿನ ವೈರ ಲೆಸ್ ಲಾಗ್ ಪುಸ್ತಗಳ ವಿವರಣೆಗಳನ್ನು ಕೇಳಲಾಗಿದೆ.

ಸರ್ಕಾರ ನರಸಿಂಹರಾಯರು 1991ರ ನವೆಂಬರ್ 4 ರಂದು ಬೆಳಿಗ್ಗೆ 9 ಗಂಟೆಗೆ ತಮ್ಮ ನಿವಾಸದಿಂದ ಹೊರ ಹೋದರು ಮತ್ತು ಮಧ್ಯಾಹ್ನ 1.15 ರ ನಂತರವೇ ನಿವಾಸಕ್ಕೆ ಬಂದರು ಎಂದು ಹೇಳಿತ್ತು.

ಈ ಒಂದು ಕೋಟಿ ವ್ಯವಹಾರದ ಬಗ್ಗೆ ಅದರ ಬಳಿ ಇರುವ ಎಲ್ಲ ದಾಖಲಾತಿಗಳನ್ನು ತನಗೆ ಒಪ್ಪಿಸುವಂತೆ ಸಿಬಿಐಗೆ ಸಂಸದೀಯ ಸಮಿತಿ ಆಜ್ಞಾಪಿಸಿ...



ಮಧ್ಯಪ್ರದೇಶದಲ್ಲಿ ವರ್ಗಾವರ್ಗಿ

ಆಡಳಿತ ಯಂತ್ರ: ಕೋಮುಮುಕ್ತಗೊಳಿಸಲು ಕ್ರಮ

-- ವಿಶ್ವ

ಭಾರತೀಯ ಜನತಾಪಕ್ಷ (ಬಿಜೆಪಿ) ಆಡಳಿತವಿದ್ದ ನಾಲ್ಕು ರಾಜ್ಯಗಳಲ್ಲಿ ಒಂದಾದ ಮಧ್ಯಪ್ರದೇಶದ ಆಡಳಿತ ಯಂತ್ರದಲ್ಲಿ ಬಿಜೆಪಿ ನಿಷ್ಠ ಅಧಿಕಾರಿಗಳ ಪ್ರಭಾವವನ್ನು ಕುಂದಿಸಲಿಕ್ಕಾಗಿ ಅಂಥ ಅಧಿಕಾರಿಗಳನ್ನು ವರ್ಗಾವಣೆ ಮಾಡುವ ವ್ಯಾಪಕ ಕಾರ್ಯಾಚರಣೆಗೆ ಅಲ್ಲಿನ ಸರಕಾರ ಮುಂದಾಗಿದೆ. ಆಡಳಿತ ಯಂತ್ರವನ್ನು ಕೋಮುವಾದಿ ಬಿಜೆಪಿ ಪ್ರಭಾವದಿಂದ ಮುಕ್ತಗೊಳಿಸುವುದು ಈ ಕ್ರಮದ ಗುರಿಯಾಗಿದೆ.

ಎಷ್ಟು ದೊಡ್ಡ ಪ್ರಮಾಣದಲ್ಲಿ ವರ್ಗಾವಣೆ ಮಾಡಲಾಗುತ್ತಿದೆಯೆಂದರೆ ರಾಜ್ಯದ ಸ್ಥಳೀಯ ಪತ್ರಿಕೆಗಳಲ್ಲಿ ಪ್ರತಿದಿನ ಎರಡರಿಂದ ಮೂರು ಪುಟಗಳಲ್ಲಿ ವರ್ಗಾವರ್ಗಿ ಪಟ್ಟಿಗಳೇ ತುಂಬಿರುತ್ತವೆ.

ರಾಜ್ಯದಲ್ಲಿ ಬಿಜೆಪಿ ಸರಕಾರದ ಅವಕೃಪೆಗೆ ಪಾತ್ರರಾಗಿದ್ದ ಅಧಿಕಾರಿಗಳ ಪಟ್ಟಿಯೊಂದನ್ನು ಸಿದ್ಧಗೊಳಿಸಲಾಗಿದೆ. ಸೂಕ್ತ ಸ್ಥಳಗಳಲ್ಲಿ ಅವರ ನೇಮಕ ಮಾಡಲಾಗುತ್ತಿದೆ. ಬಹುತೇಕವಾಗಿ ಪೊಲೀಸರು ಮತ್ತು ಬ್ಲಾಕ್ ಅಭಿವೃದ್ಧಿ ಅಧಿಕಾರಿಗಳು (ಬಿಡಿಒ) ಅಥವಾ ತಹಶಿಲ್ದಾರರು ಬಿಜೆಪಿಯ ಕೆಂಗಣ್ಣಿಗೆ ಗುರಿಯಾಗಿದ್ದರು.

ಬಿಜೆಪಿ ತನ್ನ 36 ತಿಂಗಳ ಅಧಿಕಾರಾವಧಿಯಲ್ಲಿ ಖರಗಾಂವ್ ಜಿಲ್ಲೆಯೊಂದರಲ್ಲೇ ಕಾನ್ಸ್‌ಟೇಬಲ್ ಸಹಿತ ಬಹುತೇಕ ಎಲ್ಲಾ 800 ಮಂದಿ ಪೊಲೀಸ್ ಸಿಬ್ಬಂದಿಗಳನ್ನು ವರ್ಗಾಯಿಸಿತ್ತು. ಉಜ್ಜೇನ್ ಜಿಲ್ಲೆಯಲ್ಲಿ 700 ಪೊಲೀಸರನ್ನು ವರ್ಗಾಯಿಸಲಾಗಿತ್ತು.

ಕಾಂಗ್ರೆ ದೃಷ್ಟಿಕೋನ

ಆಡಳಿತವನ್ನು ಕೋಮುವಾದಿಗಳ ಕಪಿಮುಷ್ಠಿಯಿಂದ ವಿಮುಕ್ತಗೊಳಿಸಬೇಕೆನ್ನುವುದು ಸರಿಯಾದ ಧೋರಣೆ. ಆದರೆ ರಾಷ್ಟ್ರಪತಿ ಆಡಳಿತವಿರುವ ಈ ರಾಜ್ಯದಲ್ಲಿ ಮುಂದೆ ನಡೆಯಲಿರುವ ಅಸೆಂಬ್ಲಿ ಚುನಾವಣೆಗಳಲ್ಲಿ ಗೆಲ್ಲುವುದೊಂದನ್ನೇ ಕಾಂಗ್ರೆಸ್(ಐ) ಗಮನದಲ್ಲಿಟ್ಟುಕೊಂಡಿರುವಂತೆ ಕಾಣುತ್ತಿದೆ. ಕಾಂಗ್ರೆ ನಾಯಕರ ಶಿಫಾರಸಿನ ಆಧಾರದಲ್ಲಿ ವರ್ಗಾವರ್ಗಿ ಮಾಡಲಾಗುತ್ತಿದೆ. ದೇಶದ ಹಿತಕ್ಕಿಂತ ಪಕ್ಷಹಿತವನ್ನು ತಲೆಯಲ್ಲಿಟ್ಟುಕೊಂಡು ಕೆಲಸಮಾಡಿದರೆ ಅದು ತಿರುಗುಬಾಣವಾದೀತೆಂಬುದನ್ನು ಕಾಂಗ್ರೆ ಅರಿತಿರಬೇಕು.

ಅಧ್ಯಾಪಕನ ಅನೈತಿಕ ವ್ಯವಹಾರ

ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲೇ ಒಬ್ಬ ಹುಡುಗಿ ಜತೆ ಅನೈತಿಕ ವ್ಯವಹಾರದಲ್ಲಿ ತೊಡಗಿದ್ದ ಅಧ್ಯಾಪಕನನ್ನು ಅಮಾನತು ಮಾಡಿದ ಪ್ರಕರಣವೊಂದು ಬಿಹಾರ ರಾಜಧಾನಿಯಿಂದ ವರದಿಯಾಗಿದೆ.

ಬಿ.ಎಸ್. ಕಾಲೇಜಿನ ರಾಮ್‌ಬಲಿ ಸಿಂಗ್ ಅಮಾನತುಗೊಂಡಿರುವ ಅಧ್ಯಾಪಕ. ವಿಶ್ವವಿದ್ಯಾನಿಲಯದ ಸೈದಾಪುರ ಹಾಸ್ಟೆಲಿನಲ್ಲಿ ಅಕೃತ್ಯದಲ್ಲಿ ತೊಡಗಿರುವಾಗಲೇ ಈತ ಸಿಕ್ಕಿಬಿದ್ದನು. ಈತ ರಾಜಕೀಯವಾಗಿ ಪ್ರಭಾವಿ ವ್ಯಕ್ತಿ ಎಂದು ಹೇಳಲಾಗಿದೆ.

ಪಾಟ್ನಾ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಅಧ್ಯಾಪಕನೊಬ್ಬನನ್ನು ಅಮಾನತುಮಾಡಿರುವುದು ಇದೇ ಮೊದಲ ಘಟನೆಯಾಗಿದೆ.

ಸ್ಟೇಟ್ ಬ್ಯಾಂಕ್ ಉಗ್ರಗಾಮಿಗಳ ಗುರಿ

ನಾಗಾಲ್ಯಾಂಡ್‌ನಲ್ಲಿ ಭೂಗತ ಗೆರಿಲ್ಲಾಗಳ ಹಾವಳಿ ಮುಂದುವರಿದಿದೆ. ನಾಗಾಲ್ಯಾಂಡ್ ರಾಷ್ಟ್ರೀಯ ಸಮಾಜವಾದಿ ಮಂಡಳಿ (ಎಸ್.ಎಸ್.ಸಿ.ಎಸ್)ಯ ಮುಯಿಯಾ ಬಣದ ಬೆದರಿಕೆಗೆ ಇತ್ತೀಚಿನ ಬಲಿಯಾದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್.ಬಿ.ಐ)

ರಾಜ್ಯದಲ್ಲಿ ಎಸ್.ಬಿ.ಐ. ಕಾರ್ಯ ಮುಂದುವರಿಸಬೇಕೆಂದಿದ್ದರೆ 10 ಲಕ್ಷ ರೂ ನೀಡಬೇಕೆಂದು ಈ ಬಣ ಬೇಡಿಕೆ ಮುಂದಿಟ್ಟಿತ್ತು. ಬೆದರಿಕೆಯಿಂದಾಗಿ ತನ್ನ ಸಿಬ್ಬಂದಿಗೆ ಆಪತ್ತು ಉಂಟಾಗಬಹುದೆಂದು ಅಂಜಿ ಈ ಬ್ಯಾಂಕ್ ನಾಗಾಲ್ಯಾಂಡನಲ್ಲಿ ತನ್ನ ವ್ಯವಹಾರವನ್ನೇ ಬಂದ್ ಮಾಡಿತು. ರಾಜ್ಯದಲ್ಲಿನ ಈ ಬ್ಯಾಂಕಿನ 43 ಶಾಖೆಗಳು ಮುಚ್ಚಿದ್ದರಿಂದ ರಾಜ್ಯದ ಆರ್ಥಿಕತೆಗೆ ಪಾರ್ಶ್ವವಾಯು ಬಡಿದಂತಾಯಿತು. ಯಾಕೆಂದರೆ ರಾಜ್ಯ ಸರಕಾರ ತನ್ನ ಹಣಕಾಸು ವ್ಯವಹಾರಗಳನ್ನೆಲ್ಲಾ ಹೆಚ್ಚಾಗಿ ಸ್ಟೇಟ್‌ಬ್ಯಾಂಕ್ ಮೂಲಕವೇ ನಡೆಸುತ್ತಿದೆ.

ಬ್ಯಾಂಕಿನ ಸಿಬ್ಬಂದಿಗೆ ರಕ್ಷಣೆ ಒದಗಿಸುವುದಾಗಿ ಮುಖ್ಯಮಂತ್ರಿ ಭರವಸೆಯನ್ನೇನೊ ಕೊಟ್ಟಿದ್ದಾರೆ. ಆದರೂ ಸಿಬ್ಬಂದಿಗಳಲ್ಲಿ ಅಧೈರ್ಯ ಮೂಡಿದೆ. ಒಂದಲ್ಲ ಒಂದು ನೆವ ಮಾಡಿ ರಾಜ್ಯವನ್ನು ಬಿಡತೊಡಗಿದ್ದಾರೆ.

ಕೊಲೆಗಾರ ಹೆಡ್‌ಕಾನ್ಸ್‌ಟೇಬಲ್‌ಗೆ ಕಠಿಣ ಶಿಕ್ಷೆ

1991 ರ ಡಿಸೆಂಬರ್ 9 ರಂದು ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್) ವ್ಯವಸ್ಥೆಗೊಳಿಸಿದ್ದ ಬಂದ್ ಸಮಯದಲ್ಲಿ ಎ.ಐ.ಎಸ್.ಎಫ್. ಕಾರ್ಯಕರ್ತ ಜಯಪ್ರಕಾಶ್‌ರನ್ನು ಗುಂಡಿಟ್ಟು ಕೊಂದು ಹಾಕಿದ ಆರೋಪಿ ಹೆಡ್‌ಕಾನ್ಸ್‌ಟೇಬಲ್ ಬಾಬುಕುಟ್ಟಿಗೆ ಆರುವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

ಮೂರನೇ ಅಡಿಷನಲ್ ನ್ಯಾಯಾಧೀಶ ಶಶಿಧರನ್ ನಂಬಿಯಾರ್ ಜುಲೈ 6 ರಂದು ಈ ಮಹತ್ವದ ತೀರ್ಪನ್ನು ನೀಡಿದರು.

ಎ.ಕೆ.ಜಿ. ಕೇಂದ್ರದ ಮೇಲೆ ನಡೆದ ಪೊಲೀಸ್ ಆಕ್ರಮಣವನ್ನು ಪ್ರತಿಭಟಿಸಿ ಎಲ್.ಡಿ.ಎಫ್ ಬಂದ್‌ಗೆ ಕರೆ ನೀಡಿತ್ತು. ಚಳುವಳಿ ನಿರತರು ಹಾಗೂ ಪೊಲೀಸರ ಮಧ್ಯೆ ಮಾತಿನ ಚಕಮಕಿ ನಡೆದಾಗ ಬಾಬು ಕುಟ್ಟಿ ತನ್ನ ಸಹೋದ್ಯೋಗಿಯೊಬ್ಬನ ರೈಫಲ್‌ನಿಂದ ಜಯಪ್ರಕಾಶ್ ಮೇಲೆ ಎರಡು ಬಾರಿ ಗುಂಡು ಹಾರಿಸಿ ಕೊಂದು ಹಾಕಿದ್ದ.

ಮದುವೆಗೆ ಹೆಚ್ಚು ಖರ್ಚು ಮಾಡುವಿರಾ? ಜೋಕೆ!

ಅಂದಾದುಂದಿ ವೆಚ್ಚದ ಮದುವೆಗಳ ಮೇಲೆ ನಿಯಂತ್ರಣ ಹೇರಲು ಒರಿಸ್ಸಾ ಸರ್ಕಾರ ಹೆಜ್ಜೆಯಿಟ್ಟಿದೆ. ಇನ್ನು ಮುಂದೆ ಮದುವೆಗಳಿಗೆ ಹೆಚ್ಚು ಖರ್ಚು ಮಾಡಿದವರು ಮಧುಚಂದ್ರಕ್ಕೆ ಬದಲು ಜೈಲಿಗೆ ಕಳಿಸಲಾಗುತ್ತದೆ. ಈ ಸಂಬಂಧದಲ್ಲಿ ಶಾಸನ ಸಭೆಯಲ್ಲಿ ಒಂದು ಮಸೂದೆಯನ್ನು ಮಂಡಿಸಲಾಗಿದೆ.

ಈ ಮಸೂದೆ ಅಂಗೀಕಾರವಾಗಿ ಕಾನೂನಾಗಿ ರೂಪುಗೊಂಡಾಗ ಮದುವೆಗಾಗಿ ಸಿಕ್ಕಾಪಟ್ಟೆ ಖರ್ಚುಮಾಡುವ ಪ್ರವೃತ್ತಿಗೆ ತೆರೆಬೀಳಲಿದೆ ಎಂದು ಆಶಿಸಲಾಗಿದೆ. ಮದುವೆ ವೆಚ್ಚ 25 ಸಾವಿರ ರೂಪಾಯಿಗಳ ಮಿತಿಯನ್ನು ಹೇರಲಾಗಿದೆ. ಅದಕ್ಕಿಂತ ಹೆಚ್ಚು ಖರ್ಚು ಮಾಡುವುದು ಕಾನೂನು ಬಾಹಿರವಾಗಲಿದೆ.

ಈ ಕಾನೂನನ್ನು ಉಲ್ಲಂಘಿಸಲಿದವರಿಗೆ ಆರು ತಿಂಗಳವರೆಗೆ ಜೈಲು ಶಿಕ್ಷೆ ಹಾಗೂ 5000 ರೂ. ಗಳ ದಂಡವನ್ನು ವಿಧಿಸಲಾಗುವುದು.

ಮಸೂದೆ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ ಬಿಜು ಪಟ್ನಾಯಕ್ ತಮ್ಮ ಸಚಿವ ಸಹೋದ್ಯೋಗಿಗಳು ಹಾಗೂ ಗೆಳೆಯರು ಮದುವೆಗಳಿಗೆ ಅದ್ದೂರಿ ವೆಚ್ಚ ಮಾಡುತ್ತಿರುವುದನ್ನು ಟೀಕಿಸಿದರು. ತಮ್ಮ ಮಗಳಾದ ಗೀತಾ ಮೆಹ್ತಾಳ ಮದುವೆಗೆ ತಾವು ಕೇವಲ 10 ರಿಂದ 15 ಸಾವಿರ ರೂ ಖರ್ಚುಮಾಡಿದ್ದಾಗಿ ಹೇಳಿದರು.

ರಾಜ್ಯ ಬಡ-ಮಧ್ಯಮವರ್ಗದ ಜನರಿಗೆ ಈ ಕಾನೂನು (ಕಟ್ಟುನಿಟ್ಟಾಗಿ ಜಾರಿಗೊಂಡರೆ) ಸಹಾಯಕವಾಗಲಿದೆ.

ಕಾಂಗ್ರೆಸ್(ಐ)ಗೆ ತಿರುಗುಬಾಣವಾದ ಪ್ರಸ್ತಾಪ

ಕಾಂಗ್ರೆಸ್-ಟಿಯುಜೆಎಸ್. ಕೂಟ ದೌರ್ಜನ್ಯ ತನಿಖೆಗೆ ಸಮಿತಿ

ತ್ರಿಪುರಾದಲ್ಲಿ ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಅಧಿಕಾರದಲ್ಲಿದ್ದಾಗ ರಾಜಕೀಯ ಪ್ರತಿಸ್ಪರ್ಧಿಗಳು ಹಾಗೂ ಮುಗ್ಧ ಜನರ ಮೇಲೆ ನಡೆದ ದೌರ್ಜನ್ಯ, ಕೊಲೆ, ಅತ್ಯಾಚಾರ ಮೊದಲಾದ ಪ್ರಕರಣಗಳ ಬಗ್ಗೆ ತನಿಖೆ ನಡೆಸಲಿಕ್ಕಾಗಿ ಸರ್ವ ಪಕ್ಷ ತನಿಖಾ ಸಮಿತಿಯೊಂದನ್ನು ರಾಜ್ಯ ವಿಧಾನಸಭೆ ರಚಿಸಲಿದೆ. ಈ ಸಂಬಂಧದಲ್ಲಿ ಅನಧಿಕೃತ ತಿದ್ದುಪಡಿ ಮಸೂದೆಯೊಂದನ್ನು ಜುಲೈ ... ರಂದು ಅಸೆಂಬ್ಲಿ ಅಂಗೀಕರಿಸಿತು.

ಮೂಲತಃ ಕಾಂಗ್ರೆಸ್(ಐ) ಶಾಸಕ ಅಮಲ್ ಮಲ್ಲಿಕ್ ಒಂದು ಖಾಸಗಿ ಸದಸ್ಯರ ಮಸೂದೆಯನ್ನು ಮಂಡಿಸಿದ್ದರು. ರಾಜ್ಯದಲ್ಲಿ ಎಡರಂಗ ಸರಕಾರ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದ ಮೇಲೆ ಪ್ರತಿಪಕ್ಷಗಳ ಬೆಂಬಲಿಗರ ಮೇಲೆ ನಡೆದಿದೆಯೆನ್ನಲಾದ ದೌರ್ಜನ್ಯಗಳ ತನಿಖೆಗೆ ಸಮಿತಿಯೊಂದನ್ನು ರಚಿಸಬೇಕೆಂಬುದು ಮಲ್ಲಿಕ್ ಪ್ರಸ್ತಾಪದ ಸೂಚನೆಯಾಗಿತ್ತು.

ಸಿಪಿಐ(ಎಂ) ಶಾಸಕ ಭುದೇವ್ ಭಟ್ಟಾಚಾರ್ಜಿ ಇದಕ್ಕೆ ಒಂದು ತಿದ್ದುಪಡಿ ಸೂಚಿಸಿ ಕಾಂಗ್ರೆ-ಟಿಯುಜೆಎಸ್ ಆಡಳಿತ ಕಾಲದಲ್ಲಿ ಪ್ರತಿಪಕ್ಷಗಳ ಕಾರ್ಯಕರ್ತರು ಹಾಗೂ ಸಾಮಾನ್ಯ ಜನರ ಮೇಲೆ ನಡೆದ ದೌರ್ಜನ್ಯ ದಬ್ಬಾಳಿಕೆಗಳ ತನಿಖೆ ನಡೆಸಲು ಸರ್ವಪಕ್ಷ ಸಮಿತಿಯೊಂದನ್ನು ರಚಿಸಬೇಕೆಂಬ ಸಲಹೆಯನ್ನು ಮುಂದಿಟ್ಟರು. ಈ ತಿದ್ದುಪಡಿ ಪ್ರಸ್ತಾಪ ಧ್ವನಿಮತದೊಂದಿಗೆ ಅಂಗೀಕಾರವಾಯಿತು.

ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ ಧಶರಥ್ ದೇವ್, ಎಡರಂಗ ಸರಕಾರ ಜನರ ಸರಕಾರವಾಗಿದೆ ಎಂದು ಹೇಳಿದರು. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಲು ಈ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು ಪೊಲೀಸರಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ ಎಂದರು. ಉಗ್ರಗಾಮಿಗಳ ಸಮಸ್ಯೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಎರಡೂ ಒಂದೇ ಅಲ್ಲ ಎಂದು ದೇವ್ ಪ್ರತಿಪಾದಿಸಿದರು.

ಉಗ್ರಗಾಮಿ ಸಮಸ್ಯೆ ಹಿಂದಿನ ಆಡಳಿತದ 'ಕೊಡುಗೆ'ಯಾಗಿದೆ. ಅದಕ್ಕೆ ರಾಜಕೀಯ ಪರಿಹಾರ ಬೇಕಾಗಿದೆ. ಈ ಸಂಬಂಧದಲ್ಲಿ ಶಾಂತಿ ಸೂತ್ರವನ್ನು ಸರಕಾರ ಮುಂದಿಡುತ್ತಿದೆ. ಇದನ್ನು ಈಗಿನ ಸರಕಾರದ ದೌರ್ಬಲ್ಯವೆಂದು ಪರಿಗಣಿಸಬಾರದು ಬದಲಿಗೆ ಹೊಸ ಚಿಂತನೆಗೆ ಸರಕಾರ ನೀಡುತ್ತಿರುವ ರಾಜಕೀಯ ಅವಕಾಶವೆಂದು ಭಾವಿಸಬೇಕೆಂದು ದೇವ್ ಹೇಳಿದರು.

ಕೇರಳ ಡಿಜಿಪಿ ಭ್ರಷ್ಟಾಚಾರ ಸಾಬೀತು

ಶಿಕ್ಷಿಸುವಿರಾ ಕರುಣಾಕರನ್, ನಿಮ್ಮ ಗೆಳೆಯನೇನು?

ಕೇರಳ ಪೊಲೀಸ್ ಮಹಾ ನಿರ್ದೇಶಕ (ಡಿಜಿಪಿ) ಜಯರಾಮ ಪಡಿಕ್ಕಲ್ ಭ್ರಷ್ಟರಾಗಿದ್ದಾರೆ- ಇದು ಪ್ರತಿಪಕ್ಷದ ಆರೋಪವೇನೋ ಹೌದು. ಆದರೆ ಅದು ನಿಜವೆಂಬ ತೀರ್ಪು ಮಾಡಿದವರು ಅವರಲ್ಲ. ಹಾಗಾದರೆ ಇನ್ನಾರದ್ದು? ಅವರ ವಿರುದ್ಧ ಆರೋಪಗಳ ಬಗ್ಗೆ ತನಿಖೆ ನಡೆಸಲು ನೇಮಿಸಲಾಗಿದ್ದ ತಂಡವೊಂದು ಈ ಅಂಶವನ್ನು ಸ್ಪಷ್ಟಪಡಿಸಿದೆ.

1983 ರಿಂದ 1991 ರ ಅವಧಿಯಲ್ಲಿ ಈ ಅಧಿಕಾರಿ 20 ಲಕ್ಷ ರೂಗಳಷ್ಟು ಮೌಲ್ಯದ ಆಸ್ತಿ ಪಾಸ್ತಿ ಸಂಪಾದಿಸಿದ್ದಾರೆಂದು ತನಿಖಾ ತಂಡದ ವರದಿ ತಿಳಿಸಿದೆ.

ಪಡಿಕ್ಕಲ್ ತನ್ನ ಅತ್ತೆ ಹೆಸರಿನಲ್ಲಿ 18 ಲಕ್ಷ ರೂ. ಆಸ್ತಿ ಮಾಡಿದ್ದಾರೆ. ಅವರೇ ಸ್ವತಃ 13 ಲಕ್ಷ ರೂ ವೆಚ್ಚದಲ್ಲಿ ಭವ್ಯ ಬಂಗಲೆಯೊಂದನ್ನು ತಿರುವನಂತಪುರದಲ್ಲಿ ಕಟ್ಟಿಸಿದ್ದಾರೆ. ಪಡಿಕ್ಕಲ್ ತಿರುವನಂತಪುರದಲ್ಲಿ ಒಂದು ಬೃಹತ್ ವಾಣಿಜ್ಯ ಸಂಕೀರ್ಣದ ಮಾಲೀಕರು. ಈ ಮೂರಂತಸ್ತಿನ ಕಟ್ಟಡದ ಮೌಲ್ಯ 30 ಲಕ್ಷ ರೂ ಎಂದು ಅಂದಾಜು ಮಾಡಲಾಗಿದೆ. ಮಕ್ಕಳ ಹೆಸರಿನಲ್ಲಿ ಎರಡು ಸಂಸ್ಥೆಗಳನ್ನೂ ಹೊಂದಿದ್ದಾರೆ. ಹೀಗೆ ಹಲವಾರು ರೀತಿಯಲ್ಲಿ ಅಧಿಕೃತ ಆದಾಯ ಮೂಲಗಳಿಗಿಂತ ಹೆಚ್ಚಿನ ಆಸ್ತಿಪಾಸ್ತಿಗಳನ್ನು ಹೊಂದಿದ್ದು ಪ್ರತಿಪಕ್ಷಗಳು ಮಾಡಿರುವ ಆರೋಪ ಸಾಬೀತಾಗಿದೆ.

ಪಡಿಕ್ಕಲ್ ವಿರುದ್ಧ ಕ್ರಮ ಕೈ ತೆಗೆದುಕೊಳ್ಳುವಂತೆ ವಿಜಿಲೆನ್ಸ್ ಇಲಾಖೆಯ ತನಿಖಾ ತಂಡ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ. ಭ್ರಷ್ಟಾಚಾರ ನಡೆಸಿ ಅಪಾರ ಸಂಪತ್ತನ್ನು ಕೂಡಿ ಹಾಕಿದ್ದಕ್ಕಾಗಿ ಒಬ್ಬ ಹಿರಿಯ ಐಪಿಎಸ್ ಅಧಿಕಾರಿ ವಿರುದ್ಧ ಕ್ರಮಕೈಗೊಳ್ಳಲು ಶಿಫಾರಸು ಮಾಡಿರುವುದು ಕೇರಳದ ಇತಿಹಾಸದಲ್ಲಿ ಇದೇ ಮೊದಲ ಸಲವಾಗಿದೆ.

ಆದರೆ ಈ ಭ್ರಷ್ಟ ಅಧಿಕಾರಿ ವಿರುದ್ಧ ಕ್ರಮಕೈಗೊಳ್ಳಲು ಮುಖ್ಯಮಂತ್ರಿ ಕೆ. ಕರುಣಾಕರನ್ ಮುಂದಾಗುವರೆ? ಕರುಣಾಕರನ್ -ಪಡಿಕ್ಕಲ್ 'ಮೈತ್ರಿಯನ್ನು' ನೋಡಿದರೆ ಈ ಸಾಧ್ಯತೆ ಕಡಿಮೆಯೆಂದೇ ಕಾಣುತ್ತದೆ. ಅವರಿಬ್ಬರೂ ಗಳಸ್ಯ- ಕಂಠಸ್ಯ ಮಿತ್ರರು. ಭ್ರಷ್ಟ... ದ ಆರೋಪದ ಕೊಚ್ಚೆಯಲ್ಲಿ ಮುಳುಗಿಹೋಗುತ್ತಿರುವ ಪ್ರಧಾನಿ ನರಸಿಂಹರಾವ್‌ರನ್ನು ಉಳಿಸಲಿಕ್ಕಾಗಿ ಹಗಲೂ ರಾತ್ರಿ ನಿದ್ರಾಹಾರ ಬಿಟ್ಟು ಚಡಪಡಿಸುತ್ತಿರುವ ಕರುಣಾಕರನ್ ತನ್ನ ಗೆಳೆಯನನ್ನು ರಕ್ಷಿಸಲಾರರು ಎನ್ನುವುದಕ್ಕೆ ಏನು ಖಾತರಿ? ಆಪ್ಟರ್ ಆಲ್ ಪಡಿಕ್ಕಲ್ ಮಾಡಿರುವುದು ಸಣ್ಣ ತಪ್ಪು ಎಂದು ಸರ್ಟಿಫಿಕೆಟ್ ನೀಡಿದರೂ ನೀಡಿಯಾರು.

ಸಿಪಿಐ(ಎಂ) ಮುಖವಾಣಿ 'ದೇಶಭಿಮಾನಿ' ತನಿಖಾ ತಂಡದ ಪೂರ್ಣ ವಿವರಗಳನ್ನು ಪ್ರಕಟಿಸಿದೆ. ತಂಡದ ವರದಿ ಸಹಜವಾಗಿಯೇ ಪೊಲೀಸ್ ಮತ್ತು ಆಡಳಿತವಲಯಗಳಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡಿದೆ.

ತಪ್ಪಿತಸ್ಥ ಅಧಿಕಾರಿಯನ್ನು ಶಿಕ್ಷೆಗೆ ಒಳಪಡಿಸುವ ಪ್ರಶ್ನೆ ಆಳುವ ಕಾಂಗ್ರೆಸ್(ಐ) ಗೆ ಒಂದು ರಾಜಕೀಯ ಅಗ್ನಿ ಪರೀಕ್ಷೆ ಆಗಲಿದೆ.

ಕರಾಳ ಅಧ್ಯಾಯದ ವಿವರಣೆ

ಸಿಪಿಐ(ಎಂ) ಸದಸ್ಯರಾದ ಅಮಿತಾವ್ ದತ್ತ ಮತ್ತು ಎಸ್.ಎಸ್.ಚೌಧರಿ ಹಿಂದಿನ ಐದು ವರ್ಷಗಳ ಕಾಲ ರಾಜ್ಯ ಅನುಭವಿಸಿದ ಕರಾಳ ಅಧ್ಯಾಯವನ್ನು ಎಳೆ ಎಳೆಯಾಗಿ ವಿವರಿಸಿದರು.

ಬೀರ್ ಚಂದ್ರಮಾನುನಲ್ಲಿ ನಡೆದ ಘೋರ ಸಾಮೂಹಿಕ ಹತ್ಯಾಕಾಂಡವನ್ನು ನೆನಪಿಸಿದ ಚೌಧರಿ, ಪೊಲೀಸ್ ಇತ್ತೀಚಿನ ವರದಿ ಪ್ರಕಾರ ಕಳೆದ ಐದು ವರ್ಷಗಳಲ್ಲಿ 1221 ಜನರ ಕ್ರೂರ ಹತ್ಯೆ ನಡೆದಿದೆ ಎಂದು ಹೇಳಿ... ಅವರಲ್ಲಿ 350 ಮಂದಿ ಸಿಪಿಐ(ಎಂ) ಮತ್ತು ವಿವಿಧ ಸಾಮೂಹಿಕ ಸಂಘಟನೆಗಳಿಗೆ ಸೇರಿದವರಾಗಿದ್ದಾರೆ. ...ಂಗ್ರೆ-ಟಿಯುಜೆಎಸ್ ಮೈತ್ರಿ ಕೂಟದ ಆಡಳಿತಾವಧಿಯಲ್ಲಿ ರಾಜಕೀಯ ಸೇಡಿಗಾಗಿಯೇ 518 ಯುವತಿಯರ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಲಾಗಿತ್ತು. ಆ ದುರಾಡಳಿತದ ಹೇಯ ಮುಖವನ್ನು ಬಿಚ್ಚಿಡಲು ಈ ...ಂಶವೊಂದೇ ಸಾಕು.

...ಇಷ್ಟೆಲ್ಲ ಆದರೂ, ಈಗಷ್ಟೇ ಜನಬೆಂಬಲಗಳಿಸಿ ಅಧಿಕಾರಕ್ಕೆ ಬಂದಿರುವ ಸರಕಾರದ ಮೇಲೆಯೇ ಗೂಬೆ ...ಿಸಲು ಕಾಂಗ್ರೆ ನಡೆಸಿದ ಯತ್ನ ಹಾಸ್ಯಾಸ್ಪದವಾಗಿದೆ. ದುಷ್ಕರ್ಮಿಯೊಬ್ಬ ಒಂದು ಕೊಲೆ ನಡೆಸಿ ಸತ್ತವನನ್ನು ...ಬಹಾಕಿ ಆತ ಆತ್ಮಹತ್ಯೆ ಮಾಡಿಕೊಂಡಿದ್ದು ತನಿಖೆ ನಡೆಸಬೇಕೆಂದು ಪೊಲೀಸರಿಗೆ ಮನವಿ ಮಾಡಿಕೊಂಡ ...ಗಿದೆ ಈ ಪ್ರ... ಪ್ರಜಾಸತ್ತೆಯ ಕೊಲೆಗಡುಕರನ್ನು ತ್ರಿಪುರಾದ ಜನರು ಕ್ಷಮಿಸಲಾರರು. ತನಿಖಾ ಸಮಿತಿ ...ಮತ್ತು ...ಜ್ಞಯಾಗಿದೆ.

ತ್ರಿಪುರಾ ಸರಕಾರದ ಮಾದರಿ ಕ್ರಮ

ಸಚಿವರು ಮತ್ತು ಶಾಸಕರ ವೇತನ ಹಾಗೂ ಭತ್ಯೆಗಳನ್ನು ಕಡಿತಗೊಳಿಸುವ ಮೂಲಕ ತ್ರಿಪುರಾದ ಎಡರಂಗ ಸರಕಾರ ಇಡೀ ದೇಶಕ್ಕೆ ಒಂದು ಮಾದರಿಯನ್ನು ಹಾಕಿಕೊಟ್ಟಿದೆ. ಈ ಸಂಬಂಧದ ಎರಡು ಮಸೂದೆಗಳನ್ನು ರಾಜ್ಯ ವಿಧಾನಸಭೆ ಜುಲೈ 9 ರಂದು ಅಂಗೀಕರಿಸಿತು. ಸರಕಾರಿ ವೆಚ್ಚವನ್ನು ಕಡಿತಗೊಳಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ವೇತನ ಮತ್ತಿತರ ಸೌಲಭ್ಯಗಳನ್ನು ಕಡಿತ ಮಾಡುವ ಕುರಿತ ಮಸೂದೆಗಳ ಮೇಲೆ ನಡೆದ ಚರ್ಚೆಯಲ್ಲಿ ಕಾಂಗ್ರೆ ಮತ್ತು ಟಿಯುಜೆಎಸ್. ಶಾಸಕರು ಪಾಲ್ಗೊಳ್ಳಲಿಲ್ಲ. ಮತದಾನದಲ್ಲೂ ಭಾಗವಹಿಸಲಿಲ್ಲ. ಇದು ತೀರಾ ನಾಚಿಕೆಗೇಡಿನ ವಿಷಯವಾಗಿದೆ. ಶಾಸನ ಸಭೆಯ ಅಂಗೀಕಾರ ಪಡೆದ ಮಸೂದೆಗಳು ಈ ವರ್ಷದ ಜುಲೈ ಒಂದರಿಂದಲೇ ಅನ್ವಯವಾಗುವಂತೆ ಜಾರಿಗೆ ಬರಲಿವೆ.

ವೇತನ - ಪಿಂಚಣಿ ಎಷ್ಟೆಷ್ಟು

ಹೊಸ ಕಾನೂನಿನ ಪ್ರಕಾರ ತ್ರಿಪುರಾ ಮುಖ್ಯಮಂತ್ರಿಯವರ ತಿಂಗಳ ಸಂಬಳವನ್ನು 3,300 ರೂ. ನಿಂದ 2,800 ಕ್ಕೆ ಇಳಿಸಲಾಗಿದೆ. ಶಾಸಕರ ವೇತನವನ್ನು 1,500 ರಿಂದ 1,400 ಕ್ಕೆ ಇಳಿಸಲಾಗಿದೆ. ಶಾಸಕರಿಗೆ ಇನ್ನು ಮುಂದೆ 1,000 ರೂ. ನಿವೃತ್ತಿ ವೇತನ ಸಿಗಲಿದೆ. (ಇದುಮೊದಲು 2,500 ರೂ ಆಗಿತ್ತು.) ಕುಟುಂಬ ಪಿಂಚಣಿ ಪ್ರಮಾಣ 1,200 ರೂ ನಿಂದ 600 ಕ್ಕೆ ಇಳಿದಿದೆ. ಮಾಜಿ ಶಾಸಕರ ಕುಟುಂಬಗಳಿಗೆ ನೀಡಲಾಗುತ್ತಿದ್ದ ವೈದ್ಯಕೀಯ ಭತ್ಯ ಸೌಲಭ್ಯವನ್ನು ರದ್ದು ಮಾಡಲಾಗಿದೆ.

• ...ಕಿಸ್ತಾನದ ಅಧ್ಯಕ್ಷ ಹಾಗೂ ಪ್ರಧಾನಿ ರಾಜಿನಾಮೆ ನೀಡಿದ ...ರದಿ. ಸರ್ವ ವಿರೋಧ ಪಕ್ಷಗಳ ಸ... ಳನ ಕರೆಕೊ...ದ್ದ 'ಇಸ್ಲಾಮಾಬಾದ್ ಚಲೋ'ದಿಂದ ಉಂಟಾದ ಆಸ್ಫೋ...ಕ ಪರಿಸ್ಥಿತಿ ನಿಭಾಯಿಸಲು ಸೈನ್ಯದ ಮುಖಸ್ಥ ಜನರಲ್ ...ಹೀದ್ ಅವರ ಸಲಹೆ ಮೇರೆಗೆ ಈ ರಾಜಿನಾಮೆ ಎನ್ನಲಾ...ದೆ.

• ಕ್ರಯೋಜೆನಿಕ್ ರಾಕೆಟ್ ತಂತ್ರಜ್ಞಾನದ ಬಗ್ಗೆ ಭಾರತ-ರಶ್ಯಾ ಒಪ್ಪಂದ ರದ್ದು ಮಾಡಲು ಅಮೇರಿಕದ ಒತ್ತಡಕ್ಕೆ ರಶ್ಯಾ ಮಣಿದಿದೆ.

• ಸಿಕಿಪಿನಿನಲ್ಲಿ ಮಧ್ಯಂತರ ಚುನಾವಣೆಗಳು ನಡೆಯಲಿದ್ದು ನಾಲ್ವತ್ತು ವರ್ಷಗಳ ಏಕಪಕ್ಷೀಯ ಸರಕಾರದ ನಂತರ ಬದಲಾವಣೆಯ ತೀವ್ರ ಸಾಧ್ಯತೆಗಳಿವೆ. ಆಳುವ ಲಿಬರಲ್ ಪಕ್ಷ ಒಡೆದಿದ್ದು, ಚುನಾವಣಾ ಸುಧಾರಣೆಗಳು, ರಾಜಕೀಯ ಭ್ರಷ್ಟಾಚಾರ ಚುನಾವಣಾ ವಿಷಯಗಳಾಗಿವೆ. ಆಳುವ ಪಕ್ಷದಿಂದ ಹೊರಬಿದ್ದು ಹೊಸ ಪಕ್ಷದ ನಾಯಕತ್ವದಲ್ಲಿ ಸಮ್ಮಿಶ್ರ ಸರಕಾರದ ಸಾಧ್ಯತೆಗಳಿವೆ.

ಪಾಕ್ ಅಧ್ಯಕ್ಷ, ಪ್ರಧಾನಿ ರಾಜಿನಾಮೆ - ಸೈನ್ಯದ ಕಾಣದ ಕೈ

- ಶರತ್ ಚಂದ್ರ

ಪಾಕಿಸ್ತಾನದ ರಾಜಕೀಯದಲ್ಲಿ ತೀವ್ರ ಬದಲಾ...ಣೆಗಳಾಗುತ್ತಿದ್ದರೂ, ಎಲ್ಲಾ ಬೆಳವಣಿಗೆಗಳಲ್ಲೂ ...ನ್ಯದ ಕಾಣದ ಕೈ ಇದ್ದೇ ಇರುತ್ತದೆ. ಭಾರತ ...ಭಜನೆಯಾಗಿ ಪಾಕಿಸ್ತಾನ ರಚನೆ ಆದಂದಿನಿಂ...ಲೂ ಎರಡು-ಮೂರು ವರ್ಷಗಳಿಂದ ಹೆಚ್ಚಿನ ...ವಧಿ ಯಾವುದೇ ಪ್ರಜಾಸತ್ತಾತ್ಮಕವಾಗಿ ಚುನಾಯಿತ ...ರ್ಕಾರ ಇದ್ದದ್ದಿಲ್ಲ. ರಾಜಕೀಯ ಅಧಿಕಾರದಲ್ಲಿ ಜನ...ಗೆ ಅಲ್ಪಸ್ವಲ್ಪ ಹೇಳು ಕೇಳುವ ಹಕ್ಕು ಬಂದಾಗಲೆಲ್ಲ, ...ರಿ ಭೂಮಾಲಕ ಹಾಗೂ ಬೂರ್ಜ್ವಾ ಆಳುವ ...ರ್ಗದ ಪರವಾಗಿ ಸೈನ್ಯ ಮಧ್ಯಪ್ರವೇಶ ಮಾಡಿದೆ.

ಆಳುವ ವರ್ಗಗಳ ಹಿತಾಸಕ್ತಿ ಕಾಪಾಡಲು ...ರ- ಅಧ್ಯಕ್ಷ, ಪ್ರಧಾನಿಗಳ ನಡುವೆ ಒಮ್ಮತವಿಲ್ಲ...ಗಲೆಲ್ಲ ಸೈನ್ಯ ತನ್ನ ತಾಕತ್ತು ಪ್ರದರ್ಶನ ಮಾಡಿದೆ. ...ಮಾನ್ಯವಾಗಿ ಅಧ್ಯಕ್ಷ ಮಾಜಿ ಸೈನ್ಯ ಮುಖಸ್ಥ ಆಗಿ...ತ್ತಿದ್ದರಿಂದ ಅಥವಾ ಅದರ ಆಯ್ಕೆಯ ವ್ಯಕ್ತಿ ಆಗಿ...ತ್ತಿದ್ದರಿಂದ ಸಾಮಾನ್ಯವಾಗಿ ವಿವಾದ ಪ್ರಧಾನಿಗಿಲ್ಲ ...ವರಿಬ್ಬರಿಗೂ ಬರುವುದು. ಈಗಲೂ ಹಾಗೇನೇ ...ನ್ಯ ಮುಖಸ್ಥ ಅಧ್ಯಕ್ಷರ ನಾಮಕರಣ ಮಾಡಿದ ... ಅಧ್ಯಕ್ಷ-ಪ್ರಧಾನಿ ವಿವಾದದಲ್ಲಿ ಸೈನ್ಯ ಮಧ್ಯಪ್ರ...ಶಿಸಿದೆ.

...ರೋಧ ಪಕ್ಷಗಳ ಕೂಟ ಬೆನಜಿರ್ ಭುಟ್ಟೋ ...ಯಕತ್ವದಲ್ಲಿ ಪ್ರಸ್ತುತ ಸರ್ಕಾರದ ರಾಜಿನಾಮೆ. ...ರುಚುನಾವಣೆಗೆ ತೀವ್ರ ಒತ್ತಡ ಹೇರುತ್ತಿತ್ತು. 'ಇಸ್ಲಾ...ಬಾದ್ ಚಲೋ' ಕಾರ್ಯಕ್ರಮಕ್ಕೆ ಜನಬೆಂಬಲ ...ರಕಹತ್ತಿತ್ತು. ಆಳುವ ಪಕ್ಷ, ಸೈನ್ಯ ಅಧ್ಯಕ್ಷರ ನಡು...ವೆ 'ಅರಮನೆ ರಾಜಕೀಯ' ದಿಂದ ಜನ ಬೇಸತ್ತ...ದ ಲಕ್ಷಣಗಳಿದ್ದವು. ಇದರಿಂದ ಬೆದರಿದ ಆಳುವ ...ಟ ಈ ನಿರ್ಧಾರಕ್ಕೆ ಬಂದಿದೆ. ಈ ಒಪ್ಪಂದ ...ನ್ನು ಬೆನಜಿರ್ ಭುಟ್ಟೋ ನಾಯಕತ್ವದ ವಿರೋ...ಧಪಕ್ಷಗಳಿಗೂ ತಿಳಿಸಲಾಗಿದ್ದು, ಇದರಿಂದಾಗಿ 'ಇಸ್ಲಾ...ಮಾಬಾದ್ ಚಲೋ' ಕಾರ್ಯಕ್ರಮವನ್ನು ಮುಂದಕ್ಕೆ ...ಹಾಕಲಾಗಿತ್ತು. ಅಧ್ಯಕ್ಷ, ಹಾಗೂ ಪ್ರಧಾನಿಗಳ ರಾಜಿ...ನಾಮೆ, ಸರ್ವ ಪಕ್ಷೀಯ ಅಥವಾ ತಟಸ್ಥ ಸರ್ಕಾರದ ...ಉಸ್ತುವಾರಣೆಯಲ್ಲಿ ಮರುಚುನಾವಣೆ ವಿರೋಧಪ...ಕ್ಷದ ಬೇಡಿಕೆಗಳಾಗಿದ್ದವು. ಅದನ್ನು ಈಡೇರಿಸಿದಂ...ತಾಗಿದೆ. ಈಗಿನ ಸಂವಿಧಾನದ ಪ್ರಕಾರ ಸೆನೆಟ್‌ನ ...ರ...ಗಾಮಿ ಅಧ್ಯಕ್ಷರಾಗುತ್ತಾರೆ.

ಕ್ರಯೋಜೆನಿಕ್ ರಾಕೆಟ್

ತಂತ್ರಜ್ಞಾನ ಒಪ್ಪಂದ ರದ್ದು?

ವಾಶಿಂಗ್‌ಟನ್‌ನಲ್ಲಿ ಇತ್ತೀಚೆಗೆ ನಡೆದ ಅಮೇರಿಕ-ರಷ್ಯಾ ಮಾತುಕತೆಗಳಲ್ಲಿ ರಶ್ಯಾ ಅಮೇರಿಕನ್ ಒತ್ತಡಕ್ಕೆ ಮಣಿದಿದೆ. ಭಾರತದ ಅಂತರಿಕ್ಷ ಕಾರ್ಯಕ್ರಮದ ಜಿ.ಎಸ್.ಎಲ್.ವಿ. ಉಪಗ್ರಹ ಉಡಾವಣೆಗೆ ಅಗತ್ಯವಾದ ಎರಡು ಕ್ರಯೋಜೆನಿಕ್ ರಾಕೆಟ್ ಹಾಗೂ ಸಂಬಂಧಿಸಿದ ತಂತ್ರಜ್ಞಾನ ಮಾರಾಟದ ಬಗ್ಗೆ 1991 ರಲ್ಲಿ ಆಗಿದ್ದ ಭಾರತ-ರಶ್ಯಾ ಒಪ್ಪಂದ ಇದರಿಂದ ರದ್ದಾಗುವ ಸಾಧ್ಯತೆ ಇದೆ. ಈ ತಂತ್ರಜ್ಞಾನಕ್ಕೆ ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ಒಪ್ಪಂದದ ಉಲ್ಲಂಘನೆ ಎಂಬ ವಾದ ಹೂಡಿ ಅಮೇರಿಕ ಭಾರತ-ರಶ್ಯಾ ಈ ಒತ್ತಡಕ್ಕೆ ಪ್ರತಿರೋಧ ಒಡ್ಡಿತ್ತು. ಏಕೆಂದರೆ ಅಂತರಿಕ್ಷ ತಂತ್ರಜ್ಞಾನಕ್ಕೆ ಬಹಳ ಅವಕಾಶಗಳ ಸಾಧ್ಯತೆ ಇದ್ದು, 36 ಕೋಟಿ ಡಾಲರುಗಳ ಈ ಒಪ್ಪಂದ ರದ್ದು ಮಾಡುವುದು ರಶ್ಯನ್ ದೃಷ್ಟಿಯಿಂದ ಉತ್ತಮ ನಿರ್ಧಾರವಲ್ಲ. ಆದರೆ ಅಮೇರಿಕ ರಶ್ಯಾಕ್ಕೆ ನೀಡಲಿರುವ 3 ಶತಕೋಟಿ ಡಾಲರುಗಳ ಸಹಾಯಧನಕ್ಕೆ ಇದನ್ನು ಶರತ್ತಾಗಿ ಒಡ್ಡಿ, ಒತ್ತಡ ಹೇರಿತ್ತು. ಅಲ್ಲದೆ ಅಂತರಿಕ್ಷ ತಂತ್ರಜ್ಞಾನ ಮಾರುಕಟ್ಟೆಯಲ್ಲಿ ಇರುವ ಅವಕಾಶಗಳನ್ನು ರಶ್ಯಾದೊಂದಿಗೆ ಹಂಚಿಕೊಳ್ಳುವ ಆಮಿಷ ತೋರಿತ್ತು.

1991 ರಲ್ಲಿ ಆದ ಭಾರತ ರಶ್ಯಾ ಒಪ್ಪಂದದಲ್ಲಿ ಎರಡು ಅಂಶಗಳಿವೆ ಎರಡು ಕ್ರಯೋಜೆನಿಕ್ ಇಂಜಿನ್‌ಗಳ ಮಾರಾಟ: ಅದರ ತಂತ್ರಜ್ಞಾನ ವರ್ಗಾವಣೆ ತಂತ್ರಜ್ಞಾನ ವರ್ಗಾವಣೆ ಒಪ್ಪಂದದ ಮುಖ್ಯ ಅಂಶ ಇದು ಆಗಲೇ ಆರಂಭವಾಗಿದ್ದು ಶೇಕಡಾ 50 ರಷ್ಟು ನಕ್ಷೆ, ವಿವರಗಳ ವರ್ಗಾವಣೆ ಈಗಾಗಲೇ ಆಗಿದೆ. ಅದಕ್ಕೆ ತಕ್ಕ ಹಣದ ಪಾವತಿಯೂ ಆಗಿದೆ. ಈ ಹಂತದಲ್ಲಿ ಒಪ್ಪಂದ ರದ್ದತಿ ರಷ್ಯಾಕ್ಕೆ ಭಾರಿ ಮುಖಭಂಗ. ರಶ್ಯಾದ ರಾಷ್ಟ್ರೀಯ ಸ್ವಾಭಿಮಾನಕ್ಕೆ ಭಾರೀ ಏಟು ರಶ್ಯಾದಲ್ಲಿ ಆಂತರಿಕವಾಗಿಯೂ ಈ ಒಪ್ಪಂದ ರದ್ದತಿ ತೀವ್ರ ಟೀಕೆಗೆ ಗುರಿಯಾಗಲಿದೆ. ಇದು ಮುಕ್ತ ಪೈಪೋಟಿ ಆಧಾರಿತ ಆರ್ಥಿಕ ಜಾರಿಗೂ ವ್ಯಾಪಾರದ ಜಾಗತೀಕರಣ ಸುಳ್ಳಿನ ಕಂತೆ ಈಗಿನ ಅಸಮಾನ ವಿಶ್ವದಲ್ಲಿ ಏಕಮಾತ್ರ ಸೂಪರ್ ಪವರ್ ಮಾತೇ ವೇದವಾಕ್ಯವಾಗಿರುವಾಗ ಜಾಗತೀಕರಣ ಉದಾರೀಕರಣ ಅಂದರೆ ಸಾಮ್ರಾಜ್ಯಶಾಹಿಗೆ ಅಡಿಯಾಳಾಗುವುದು ಎಂಬುದು ಎಲ್ಲರಿಗೂ ಮನದಟ್ಟು ಮಾಡುತ್ತದೆ.

ನಿಕರಾಗುವ - ಗೆದ್ದವರು ಸೋಲುತ್ತಿದ್ದಾರೆ!

1990 ರಲ್ಲಿ ನಿಕರಾಗುವ ಚುನಾವಣೆಗಳು ನಡೆದಾಗ ಸಮಾಜವಾದಕ್ಕೆ ಎಡಪ್ರಗತಿಪರ ಶಕ್ತಿಗಳಿಗೆ ಜಾಗತಿಕ ಮಟ್ಟದಲ್ಲಿ ಹಿನ್ನಡೆ ಇನ್ನೂ ಆಗಿರಲಿಲ್ಲ. ನಿಕರಾಗುವ ಚುನಾವಣೆಗಳಲ್ಲಿ ಜಾಗತಿಕ ಗಮನ ಸೆಳೆದ ಎಡ-ಪ್ರಗತಿಪರ ಶಕ್ತಿ ಸ್ಯಾಂಡಿನಿಸ್ತಾ ಪಕ್ಷ ಸೋತದ್ದು ಈ ಹಿನ್ನಡೆಯ ಆರಂಭದ ಒಂದು ಅಂಶವಾಗಿತ್ತು. ಇದು ಸಾಧ್ಯವಾದದ್ದು ಯೆನಕೇನ ಪ್ರಕಾರೇಣ ಸಾಮ್ರಾಜ್ಯಶಾಹಿ-ವಿರೋಧಿ ಸ್ಯಾಂಡಿನಿಸ್ತಾವನ್ನು ಮಣ್ಣು ಮುಕ್ಕಿಸಬೇಕೆಂಬ ಆಗಿನ ಅಮೇರಿಕ ಅಧ್ಯಕ್ಷ ರೇಗನ್ ಛಲ. ಇದಕ್ಕಾಗಿ ಎಲ್ಲಾ ರೀತಿಯ ತಂತ್ರ ಬಳಸಲಾಗಿತ್ತು. 14 ಪಕ್ಷಗಳ ವಿಚಿತ್ರ ಕೂಟ (ಯು.ಎನ್.ಒ) ರಚನೆಯಾಯಿತು. ಕೆಲವು ವಿರೋಧಿ ಎಡಪಕ್ಷಗಳು ಸೇರಿದಂತೆ ಬಲಪಂಥೀಯ ಪಕ್ಷಗಳವರೆಗೆ ಎಲ್ಲಾ ರೀತಿಯ ಪಕ್ಷಗಳು ಇದ್ದವು ಈ ವಿರೋಧಿ ಕೂಟಕ್ಕೆ ಅಮೇರಿಕನ್ ಹಣದ ಹೊಳೆ ಹರಿಯಿತು. ಅಮೇರಿಕ ಬೆಂಬಲಿತ ಭರಾಟೆ ಪ್ರಚಾರ ನಡೆಯಿತು. ವಿರೋಧಿ ಕೂಟ ಗೆದ್ದರೆ (ಅಂದರೆ ಸ್ಯಾಂಡಿನಿಸ್ತಾ ಸೋತರೆ) ಅಮೇರಿಕನ್ ಸಹಾಯಧನದಿಂದ ಸ್ಥಿರತೆ, ಶಾಂತಿ ಹಾಗೂ ಅಭಿವೃದ್ಧಿ ಸಾಧಿಸಬಹುದೆಂಬ ಭ್ರಮೆ ಕೆಲವು ಜನವಿಭಾಗಗಳಲ್ಲಿ ವ್ಯವಸ್ಥಿತವಾಗಿ ಹರಡಲಾಯಿತು.

ಆದರೆ ಗೆದ್ದ 14 ಪಕ್ಷಗಳ ಯುಎನ್‌ಓ ಕೂಟ ದಿನೇ ದಿನೇ ಬಿಕ್ಕಟ್ಟು ಎದುರಿಸುತ್ತಿತ್ತು. ಈಗ ಅದು ಅಧಿಕೃತವಾಗಿ ಒಡೆದಿದೆ. ಈಗ ತೀರಾ ಬಲಪಂಥೀಯ ಪಕ್ಷಗಳ ಒಕ್ಕೂಟ- ಒಂದು -ಎಪಿಓ- ಅಸ್ತಿತ್ವಕ್ಕೆ ಬಂದಿದೆ. ಹಳೆಯ ಯುಎನ್‌ಓ ಕೂಟದ ಮಧ್ಯಪಂಥೀಯ ಪಕ್ಷಗಳು ಸ್ಯಾಂಡಿನಿಸ್ತಾ ಜತೆ ಸಹಕರಿಸಲಾರಂಭಿಸಿವೆ. ಬಲಪಂಥೀಯ ಒಕ್ಕೂಟ ಅಮೇರಿಕನ್ ಆರ್ಥಿಕ, ಮಿಲಿಟರಿ, ರಾಜಕೀಯ ಬೆಂಬಲದಿಂದ ಚಮೊರೋ ಸರ್ಕಾರ ಉರುಳಿಸುವ ಸನ್ನಾಹ ನಡೆಸಿವೆ. ಕುಖ್ಯಾತ ಬಲಪಂಥೀಯ ಫ್ಯಾಸಿಸ್ಟ್ ಗ್ಯಾಂಗ್ ಕಾಂಟ್ರಾಗಳು ರಿಕಾಂಟ್ರಾ ಎಂಬ ಹೆಸರಿನಲ್ಲಿ ಪುನಃ ತಲೆಎತ್ತಿವೆ. ಹತ್ಯೆ, ಅಪಹರಣ, ಕೃಷಿ ಉತ್ಪನ್ನಗಳ ಲೂಟಿ ಆರಂಭಿಸಿವೆ. ಇದನ್ನು ಅಮೆರಿಕನ್ ಬಲಪಂಥೀಯರು 'ಸ್ವಾತಂತ್ರ್ಯ ಹೋರಾಟ' ಎಂದು ಹೊಗಳಲಾರಂಭಿಸಿದ್ದಾರೆ.

ನಿಕರಾಗುವ ಕೆಲವು ಜನವಿಭಾಗಗಳು ಹಾಗೂ ಅಧ್ಯಕ್ಷ ಚಮೊರೋರ 14 ಪಕ್ಷ ಕೂಟ ನಿರೀಕ್ಷಿಸಿದ ಧನಸಹಾಯ ಅಮೇರಿಕದಿಂದ ಬರಲಿಲ್ಲ. ನಿಕರಾಗುವ ಬೆಳವಣಿಗೆ ಅವಶ್ಯಕತೆಗಳ ಬಗ್ಗೆ ಅಮೆರಿಕದ ಚುನಾವಣೆ ನಂತರ ತಲೆಕೆಡಿಸಿಕೊಳ್ಳಲಿಲ್ಲ. ಬದಲಾಗಿ ಐ.ಎಂ.ಎಫ್ -ವಿಶ್ವಬ್ಯಾಂಕ್ ಹೇರಿದ ನೀತಿಗಳಿಂದ ಜನರ ಜೀವನ ಇನ್ನಷ್ಟು ದುರ್ಭರವಾಗುತ್ತಾ ಹೋಯಿತು. ಖಾಸಗೀಕರಣ ನಿರುದ್ಯೋಗ ಹೆಚ್ಚಿಸುತ್ತಿದೆ. ಆಹಾರ ಸಬ್ಸಿಡಿ ಕಡಿತ, ಬೆಲೆಗಳ ಮೇಲೆ ನಿಯಂತ್ರಣ ಅಭಾವ- ಬಡವರ ಜೀವನವನ್ನು ದುರ್ಭರಗೊಳಿಸಿದೆ. ಸ್ಯಾಂಡಿನಿಸ್ತಾವ ಪಕ್ಷ ದುಡಿಯುವ ಜನವಿಭಾಗಗಳ ದನಿಯಾಗಿ ಈ ಬಗ್ಗೆ ಜವಾಬ್ದಾರಿಯುತ ಪ್ರಬಲ ವಿರೋಧಪಕ್ಷದ ಪಾತ್ರವಹಿಸಿ ತನ್ನ ಬಲ ಉಳಿಸಿಕೊಂಡಿದೆ. ಬೆಳೆಸಿಕೊಳ್ಳುತ್ತಿದೆ. 1996 ರಲ್ಲಿ ನಡೆಯುವ ಚುನಾವಣೆಗಳಲ್ಲಿ ಬಹುಮತಗಳಿಸುವ ಸಾಧ್ಯತೆಗಳು ಪ್ರಬಲವಾಗಿವೆ. ಇದರಿಂದ ಗಾಬರಿಗೊಂಡಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಬಲಪಂಥೀಯ ಪಕ್ಷಗಳ ಕೂಟ ಎಪಿಓ ಮೂಲಕ ಭಯೋತ್ಪಾದನೆ ಆರಂಭಿಸಿವೆ. ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸುವ ಸನ್ನಾಹ ನಡೆಸುತ್ತಿವೆ. ಆದರೆ ಸ್ಯಾಂಡಿನಿಸ್ತಾವ ಸಶಸ್ತ್ರ ಪಡೆಗಳಿರುವ ಹಿನ್ನೆಲೆಯಲ್ಲಿ ಅದು ಸುಲಭಸಾಧ್ಯವಲ್ಲ. ಅದರಲ್ಲೂ ಮಧ್ಯಪಂಥೀಯ ಪಕ್ಷಗಳು ಸ್ಯಾಂಡಿನಿಸ್ತಾ ಪರವಾಲುತ್ತಿರುವಾಗ ಇನ್ನಷ್ಟು ಕಷ್ಟಸಾಧ್ಯ. 1990 ರಲ್ಲಿ ಗೆದ್ದವರು ಈಗ ಸೋಲುತ್ತಿದ್ದಾರೆಯೇ? ಕಾಲವೇ ಹೇಳಬಲ್ಲದು. ಆದರೆ ನಿಕರಾಗುವ ಪುನಃ ಆರ್ಥಿಕವಾಗಿ, ರಾಜಕೀಯವಾಗಿ, ಮಿಲಿಟರಿಯಾಗಿ- ರಣರಂಗವಾಗಿದೆ. ಸ್ಯಾಂಡಿನಿಸ್ತಾ ಈ ಹೋರಾಟಕ್ಕೆ ಸನ್ನದ್ಧವಾಗಿದೆ.

ಉಕ್ರೇನ್ ಗಣಿಕಾರರ ರಾಜಕೀಯ ಮುಷ್ಕರ

ದೊನಬಾಸ್ ಮಾಜಿ ಸೋವಿಯೆತ್ ಗಣರಾಜ್ಯ ಉಕ್ರೇನ್‌ನ ವಿಶ್ವವಿಖ್ಯಾತ ಗಣಿಗಾರಿಕೆ ಕೇಂದ್ರ. ದೊನಬಾಸ್‌ನ ಗಣಿಗಾರರು ಹಾಗೂ ಉಕ್ರೇನ್‌ನ ಇತರ ಕೈಗಾರಿಕಾ ಕೇಂದ್ರಗಳ ಕಾರ್ಮಿಕರು ರಾಜಕೀಯ ಮುಷ್ಕರ ಹೂಡುತ್ತಿರುವುದು ಸಾಮ್ರಾಜ್ಯಶಾಹಿಗಳಿಗೆ ಸುದ್ದಿಯೆ ಅಲ್ಲದಿರಬಹುದು. ಅಥವಾ ಹೇಳಲಾಗದ ಕಹಿಸುದ್ದಿಯೇ? ಏಕೆಂದರೆ ಅವರ ಪ್ರಮುಖ ಬೇಡಿಕೆಗಳಲ್ಲೊಂದು ಅಧ್ಯಕ್ಷ ಮಹಾಶಯ, ರಶ್ಯಾದ ಯೆಲ್ಟ್‌ಸಿನ್ ಬೈಲೋರಶ್ಯಾದ ಅಧ್ಯಕ್ಷ ಶುಶ್ ಕೆವಿಚ್ ಜತೆ ಸೇರಿ ಮಹಾನ್ ಸೋವಿಯೆಟ್ ಒಕ್ಕೂಟದ ವಿಘಟನೆಗೆ ಕಾರಣವಾದ ಪಿತೂರಿ ಹೂಡಿದ್ದು.

ಗಣಿಕಾರರ ಹಾಗೂ ಇತರ ಕಾರ್ಮಿಕರ ಮುಷ್ಕರದ ಜತೆ ಭಾರೀ ರ್‍ಯಾಲಿಗಳು, ಪ್ರತಿಭಟನಾ ಪ್ರದರ್ಶನಗಳು ನಡೆಯುತ್ತಿವೆ. ಈ ಒತ್ತಡಕ್ಕೆ ಉಕ್ರೇನ್‌ನ ಸುಪ್ರಿಂ ಸೋವಿಯೆಟ್ ಈಗಾಗಲೇ ಮಣಿದಿದೆ. ಸೆಪ್ಟೆಂಬರ್ 26 ರಂದು ಅಧ್ಯಕ್ಷರ ರಾಜಿನಾಮೆ ಹಾಗೂ ಸುಪ್ರಿಂ ಸೋವಿಯೆಟ್‌ಗೆ ಮರುಚುನಾವಣೆ ಬಗ್ಗೆ ಜನಮತಸಂಗ್ರಹ ನಡೆಸಲು ಒಪ್ಪಿಕೊಂಡಿದೆ. ಕಳೆದ ಬಾರಿ ಚುನಾವಣೆ ನಡೆದಾಗ ಉಕ್ರೇನ್ ರಾಷ್ಟ್ರೀಯತೆಯ ಉದ್ವೇಗವನ್ನು ಎಬ್ಬಿಸಿ ಚುನಾವಣೆ ಗೆದ್ದ ಅಧ್ಯಕ್ಷ ಕ್ರಚಕೋವ್ ಹಾಗೂ ಆತನ ಸಹಚರರು ಮರುಚುನಾವಣೆ ತಪ್ಪಿಸಲು ಭಗೀರಥ ಪ್ರಯತ್ನ ನಡೆಸುತ್ತಿದರು.

ಇಂತಹ ಭಾರಿ ರಾಜಕೀಯ ಮುಷ್ಕರ ದೊನಬಾಸ್ ಗಣಿಗಾರರು ನಡೆಸಿದ್ದು ಆಕಸ್ಮಿಕವೇನಲ್ಲ. ಅತ್ಯಂತ ಅಪಾಯಕಾರಿ ಗಣಿಗಳಲ್ಲಿ ವಿಜ್ಞಾನ, ತಂತ್ರಜ್ಞಾನ, ಆಧುನಿಕ ಬೆಳವಣಿಗೆಗಳನ್ನು ಬಳಸಿದ ಹಲವಾರು ಸುರಕ್ಷಿತ ಕ್ರಮಗಳನ್ನು ಸಮಾಜವಾದದಡಿಯಲ್ಲಿ ಗಣಿಗಾರರು ಕಂಡಿದ್ದರು. ಸಮಾಜವಾದಿ ವ್ಯವಸ್ಥೆ ಕುಸಿದು ಬಿದ್ದಂತೆ ಸುರಕ್ಷತಾ ವ್ಯವಸ್ಥೆ ಕುಸಿದು ಬಿದ್ದಿದೆ. ಇದಕ್ಕೆ ಕಾರಣವಾದ ಹಲವಾರು ವಿಜ್ಞಾನ, ತಂತ್ರಜ್ಞಾನ ಸಂಸ್ಥೆಗಳು ಮುಚ್ಚಿವೆ. ಕಾರ್ಮಿಕರಿಗೆ ಈಗ ಅರ್ಥವಾಗುತ್ತಿದೆ- ಸಮಾಜವಾದದ ಜತೆ ಅವರು ಏನು ಕಳೆದುಕೊಂಡಿದ್ದಾರೆ ಎಂದು.

ಭೂಮಿ ಹೋರಾಟ ಕಂಡ ಯಶಸ್ಸು

ಗಂಗಾವತಿ: ಜನರ ಸಮಸ್ಯೆಗಳನ್ನು ...ರ್ಕಾರ ಹಾಗೂ ಸ್ಥಳೀಯ ಶಾಸಕರು ಕಿವಿಗೆ ...ಹಾಕಿಕೊಳ್ಳದಿರುವುದನ್ನು ಪ್ರತಿಭಟಿಸಿ ಜುಲೈ ...1993 ರಂದು ಗಂಗಾವತಿ ತಾಲ್ಲೂಕು ಕೃಷಿ ...ಕೂಲಿಕಾರರ ಸಂಘದ ನೇತೃತ್ವದಲ್ಲಿ ಪಂಜಿನ ...ಮೆರವಣಿಗೆ ಕಾರ್ಯಕ್ರಮ ನಡೆಸಲಾಯಿತು. ...ಜಯಪೂರದಿಂದ ಸಂಜೆ 7.30ಕ್ಕೆ ಮೆರವ...ಣಿಗೆ ಪ್ರಾರಂಭಗೊಂಡಿತು. ಈ ಕಾರ್ಯಕ್ರ...ಮದಲ್ಲಿ ಗಾಳೆಮ್ಮಗುಡಿಕ್ಯಾಂಪ್, ಸಿಂಗನಾಳ, ...ಸಂಗಮೇಶ್ವರ ಕ್ಯಾಂಪ್, ಕೊರಮ್ಮಕ್ಯಾಂಪ್, ...ಹೇನೂರು, ಬಂಡೆಬಸಪ್ಪಕ್ಯಾಂಪ್‌ಗಳ ...ಮಂದಿ ಹಾಗೂ ಮಹಿಳೆಯರು ಅತಿ...ಉತ್ಸಾಹದಿಂದ ಪಾಲ್ಗೊಂಡಿದ್ದರು. ನಗ...ರದ ಪ್ರಮುಖ ಬೀದಿಗಳಲ್ಲಿ ಕೂಡಾ ಸಚಿವ ...ರಂಗದೇವರಾಯುಲು ಇವರ ವಿರುದ್ಧ ...ಘೋಷಣೆಗಳನ್ನು ಕೂಗಲಾಯಿತು. ಸಚಿ...ವ ಕಾರ್ಖಾನೆ... ವಿರೋಧಿಯಾಗಿ ಭೂಮಾ...ಲೀಕರ ಜೊತೆಗೆ ಶಾಮೀಲಾಗಿ ಅನ್ಯಾಯ...ವೆಸಗಿದ್ದನ್ನು ನಗರದ ಜನತೆಗೆ ಮನವರಿಕೆ ...ಮಾಡಿಕೊಟ್ಟು 3 ದಿನಗಳಿಂದಲೂ ಅಮರಣ ...ಉಪವಾಸ ಸತ್ಯಾಗ್ರಹವನ್ನು ನಡೆಸಲಾಗು...

ಈ ಕಾರ್ಯಕ್ರಮದಲ್ಲಿ ಡಿ.ವೈ.ಎಫ್.ಐ., ...ಎಸ್.ಎಫ್.ಐ., ಸಿ.ಐ.ಟಿ.ಯು ...ಮುಂತಾದ ಸಂಘಟನೆಗಳ ಮುಖಂ...ಡರು, ಕಾರ್ಯಕರ್ತರು ಭಾಗವಹಿಸಿದ್ದರು. ...ರೈತ ಸಂಘದ ಉಪಾಧ್ಯಕ್ಷರುಗಳಾದ ...ಕೆ. ದೇಸಾಯಿ, ವಕೀಲರು ರಾಮ...ಕುಲಕರ್ಣಿ ಲಿಂಗಸೂಗೂರು, ಕೃಷ್ಣಾ ...ಸಿಂಧನೂರು ಭಾಗವಹಿಸಿದ್ದರು.

ಪಂಜಿನ ಮೆರವಣಿಗೆಯನ್ನು ನಗರದ ಜನತೆ ಬಹಳ ಉತ್ಸುಕರಾಗಿ ಮಾಳಿಗೆಯ ಮೇಲೆ ಹತ್ತಿ ವೀಕ್ಷಿಸಿದರು. ಸಂಚಾರಕ್ಕೆ ಅಡ್ಡಿಯುಂಟಾಗಿತ್ತು. ಇಡೀ ಜನತೆ ಹೋರಾಟಕ್ಕೆ ಬಹಳ ಹತ್ತಿರದಿಂದ ಸ್ಪಂದಿಸಿದರು. ಅಲ್ಲದೇ ನಗರದ ಜನತೆ ಬಹಳ ಸಹಕಾರ ಕೊಟ್ಟಿದ್ದರು.

ಜುಲೈ 26,1993 ರಿಂದ ವಿವಿಧ ರೀತಿಯ ಹೋರಾಟದ ಫಲವಾಗಿ ಕೃಷಿ ಕೂಲಿಕಾರ ಸಂಘಟನೆಯ ಈ ಕೆಳಗಿನ ಬೇಡಿಕೆಗಳು ಈ ಕೆಳಗಿನಂತೆ ಈಡೇರಿರುತ್ತವೆ.

ಸರ್ವೆನಂ. 19:1,2, ಹಾಗೂ 20 ಸರಕಾರಿ ನಾಲಾ ಜಮೀನು ಸ್ವಾಧೀನ. ಸ.ನಂ. 196 1-19 ಹಣವಾಳ ಭೂ ಮಾಲೀಕರಿಂದ ಬಿಡಿಸಿ ಮಂಜೂರಿದಾರರಿಗೆ ಸ್ವಾಧೀನ. ಗಾಳೆಮ್ಮಗುಡಿ ಕ್ಯಾಂಪಿನ ಜನರು ವಾಸಿಸುವ ಗ್ರಾಮಕ್ಕೆ ಬೀದಿ ದೀಪ ಸೌಲಭ್ಯ, ಸಂಗಮೇಶ್ವರ ಕ್ಯಾಂಪಿನ ಜನರು ವಾಸಿಸುವ ಜಾಗವನ್ನು ಲೇ ಔಟ್ ಮಾಡಿ ಪ್ಲಾಟ್ ಕಬ್ಜಾ ಕೊಡುವುದು. ಕಲ್ಲು ಒಡೆಯುವ ಕಾರ್ಮಿಕರಿಗೆ ಗುಡ್ಡವನ್ನು ಪುಕ್ಕಟ್ಟೆಯಾಗಿ ವಿತರಿಸಿದ್ದು, ಉಳೇನೂರು ಸಿಂಗನಾಳ ಗ್ರಾಮಗಳಿಗೆ ವಿದ್ಯುತ್ ಪೂರೈಕೆ.

ಸಂಘಟಿತ ಹೋರಾಟ ಕೈಕೊಂಡಾಗ ನಮ್ಮ ಬೇಡಿಕೆ ಈಡೇರಲು ಸಾಧ್ಯ ಎಂಬ ವಿಶ್ವಾಸವನ್ನು ಈ ಚಳುವಳಿ ಮೂಡಿಸಿದೆ. ಅಧಿಕಾರಿಗಳು ಕೆಲಸ ನಿರ್ವಹಿಸದೇ ಕಾದರೆ ಜನರು ಹೋರಾಟದ ಮಾರ್ಗ ಅನುಸರಿಸಬೇಕು ಎಂದು ಗಂಗಾವತಿಯ ಈ ಜನರು ತೋರಿಸಿಕೊಟ್ಟಿದ್ದಾರೆ. ಉಳಿದ ಸಮಸ್ಯೆಗಳನ್ನು ಜುಲೈ 16,93 ರ ಒಳಗೆ ಬಗೆಹರಿಸುತ್ತೇವೆ ಎಂದು ಮಾನ್ಯ ತಹಸೀಲ್ದಾರ ಹಾಗೂ ಎ.ಎಸ್.ಪಿ. ಭರವಸೆ ಕೊಟ್ಟಿದ್ದರಿಂದ ಹೋರಾಟವನ್ನು ಹಿಂತೆಗೆದುಕೊಳ್ಳಲಾಗಿದೆ.

ಉಪವಾಸ ಸತ್ಯಾಗ್ರಹ ಹೋರಾಟದಲ್ಲಿ ಪಾಲ್ಗೊಂಡಿದ್ದ ಐದು ಜನ ಸಂಗಾತಿಗಳು ನಾಲ್ಕನೆ ದಿನದಲ್ಲಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆಗೆ ಒಳಪಡಿಸಲಾಗಿದೆ. ಈ ಹೋರಾಟದಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ನಗರದ ನಾಗರಿಕರಿಗೆ ಕೃಷಿ ಕೂಲಿಕಾರ ಸಂಘಟನೆ ಕೃತಜ್ಞತೆ ಅರ್ಪಿಸಿದೆ.

ನಾಗರಿಕ ಸೌಲಭ್ಯ ಆಗ್ರಹಿಸಿ ಧರಣಿ

ಬೆಂಗಳೂರು : ಶ್ರೀನಿವಾಸನಗರ, ವಿನಾಯಕನಗರ, ಕಾವೇರಿನಗರ, ವಿವೇಕಾನಂದನಗರ ಬಡಾವಣೆಗಳು ಹಲವಾರು ವರ್ಷಗಳಿಂದ ರೆವಿನ್ಯೂ ನಿವೇಶನಗಳಾಗಿದ್ದು ಈ ವರೆವಿಗೂ (ಇದು ಬಿಡಿಎ ವ್ಯಾಪ್ತಿಗೆ ಒಳಪಟ್ಟಿರುತ್ತದೆ.) ನಾಗರಿಕ ಸೌಲಭ್ಯಗಳಿಂದ ವಂಚಿತವಾಗಿದೆ. ಕನಿಷ್ಠ ಸೌಲಭ್ಯಗಳಾದ ಒಳಚರಂಡಿ ವ್ಯವಸ್ಥೆ , ಬೀದಿ ದೀಪಗಳ ಹಾಗೂ ರಸ್ತೆ ವ್ಯವಸ್ಥೆಗಳನ್ನು ಮಾಡಿಕೊಡುವುದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿಷ್ಕ್ರಿಯವಾಗಿದೆ.

ಮೇಲ್ಕಂಡ ಬಡಾವಣೆಗಳಲ್ಲಿ ಅಗತ್ಯ ಸೌಲಭ್ಯಗಳಿಗೆ ಒತ್ತಾಯಿಸಿ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಶ್ರೀನಗರ ಪ್ರದೇಶ ಸಮಿತಿಯ ನೇತೃತ್ವದಲ್ಲಿ ಜುಲೈ 17,1993 ರಂದು ಬನಶಂಕರಿ 2 ನೇ ಘಟ್ಟದಲ್ಲಿ ಬಿಡಿಎ ಕಚೇರಿ ಮುಂದೆ ಸುಮಾರು 60ಜನ ನಾಗರಿಕರು ಧರಣಿ ನಡೆಸಿ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಸಲ್ಲಿಸಲಾಯಿತು.

ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕೆ.ಎಸ್. ವಿಮಲರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮತ್ತೊಬ್ಬ ಜಿಲ್ಲಾ ಸಮಿತಿ ಮುಖಂಡರಾದ ಸುರೇಂದ್ರರಾವ್ ಹಾಗೂ ಶ್ರೀನಗರ ಪ್ರದೇಶ ಸಮಿತಿ ಸಂಚಾಲಕರಾದ ಬಿ.ಎನ್. ರಘು ಸ್ಥಳೀಯ ಬಡಾವಣೆಯ ಕುಂದು ಕೊರತೆಗಳ ಬಗ್ಗೆ ವಿವರಣೆ ನೀಡಿದರು.

ಈ ಹಿನ್ನೆಲೆಯಲ್ಲಿ ಬಿಡಿಎ ಅಧಿಕಾರಿಗಳು ಇನ್ನು ಒಂದು ವಾರದ ಒಳಗಾಗಿ ಸ್ಥಳೀಯ ಸಮಸ್ಯೆಗಳನ್ನು ಖುದ್ದಾಗಿ ಪರಿಶೀಲಿಸಲು ಒಪ್ಪಿ ಸಮಸ್ಯೆಗಳನ್ನು ಬಗೆಹರಿಸಲು ಆಶ್ವಾಸನೆಯನ್ನು ನೀಡಿರುತ್ತಾರೆ.

ನಾಗರಿಕ ಸೌಲಭ್ಯಗಳಿಗೆ ಹೋರಾಡಲು ನಿರ್ಧಾರ

ಉಡುಪಿ : ಉಡುಪಿ ತಾಲೂಕು ತೆಂಕನಿಡಿಯೂರು ಗ್ರಾಮದ ಯುವಜನರ ಸಭೆಯು ಉಡುಪಿ ತಾಲೂಕಿನ "ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್" (ಡಿ.ವೈ.ಎಫ್.ಐ) ಸಮಿತಿಯ ನೇತೃತ್ವದಲ್ಲಿ ಜುಲೈ 11,1993 ರಂದು ನಡೆಯಿತು.

ಮುಖ್ಯ ಅತಿಥಿಯಾಗಿ ಎ.ಎಸ್. ಆಚಾರ್ ಭಾಗವಹಿಸಿದ್ದರು.

ಡಿ.ವೈ.ಎಫ್.ಐ ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಪಿ. ವಿಶ್ವನಾಥ್ ಮಾತನಾಡುತ್ತಾ ನಮ್ಮ ಕಾರ್ಯಕರ್ತರು ಜನರ ಮಧ್ಯದಲ್ಲಿ ಪ್ರೀತಿ ವಿಶ್ವಾಸ ಗಳಿಸಿ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬೇಕು ಎಂದರು.

ಡಿ.ವೈ.ಎಫ್.ಐ ತಾಲೂಕು ಸಮಿತಿ ಕೋಶಾಧಿಕಾರಿ ರಮೇಶ್ ಮೆಂಡನ್ ಶುಭ ಕೋರಿದರು. ಹಿರಿಯ ಸಾಮಾಜಿಕ ಕಾರ್ಯಕರ್ತ ಗುರುರಾಜ ಶೆಟ್ಟಿಗಾರ್‌ರವರು ಸಭೆಯಲ್ಲಿ ಶುಭ ಕೋರಿ ಮಾತನಾಡಿ ಯುವಜನರಿಗೆ ಸ್ಫೂರ್ತಿ ತುಂಬಿದರು.

ಈ ಪ್ರದೇಶದ ಜನರ ಅಗತ್ಯದ ಬೇಡಿಕೆಗಳಾದ ಸರಕಾರಿ ಆಸ್ಪತ್ರೆ, ಅಂಚೆಕಚೇರಿ, ಶವಸಂಸ್ಕಾರಕ್ಕೆ ರುದ್ರಭೂಮಿ, ವ್ಯಾಯಾಮ ಶಾಲೆ ಇವುಗಳನ್ನು ಕಾರ್ಯಗತಗೊಳಿಸಲು ಸರಕಾರವನ್ನು ಒತ್ತಾಯಿಸಲು ತೀರ್ಮಾನಿಸಲಾಯಿತು.

ಹೊಸ ಸಮಿತಿ : ಡಿ.ವೈ.ಎಫ್.ಐ ನ 13 ಮಂದಿ ಸದಸ್ಯರ ಹೊಸ ಘಟಕವನ್ನು ಈ ಪ್ರದೇಶದಲ್ಲಿ ರಚಿಸಲಾಯಿತು. ಅಧ್ಯಕ್ಷರಾಗಿ ಮಧು ಪೂಜಾರಿ, ಕಾರ್ಯದರ್ಶಿಯಾಗಿ ಶ್ರೀ ಉಮೇಶ್ ಕುಂದರ್, ಕೋಶಾಧಿಕಾರಿಯಾಗಿ ಸದಾಶಿವ ಆಚಾರಿ, ಸಮಿತಿ ಸದಸ್ಯರುಗಳಾಗಿ ಮಧು ಆಚಾರಿ, ಸುಂದರ ಪೂಜಾರಿ ಜಗದೀಶ್ ಆಚಾರಿ, ರಾಜ ಆಚಾರಿ, ಕೃಷ್ಣ ಆಚಾರಿ, ಅರುಣ ಆಚಾರಿ, ನಿಲಾಧರ, ಸುಧಾಕರ ಆಚಾರ್ಯ, ವಿಷ್ಣು ಆಚಾರ್ ಇ... ರುಗಳನ್ನು ಸರ್ವಾನುಮತದಿಂದ ಆರಿಸಲಾಯಿತು.

ಈ ಸಭೆಯ ಅಧ್ಯಕ್ಷತೆಯನ್ನು ರಾಜು ಆಚಾರಿ ವಹಿಸಿದ್ದರು. ಉಮೇಶ್ ಕುಂದರ್ ಸ್ವಾಗತಿಸಿ ಧನ್ಯವಾದ ಸಲ್ಲಿಸಿದರು.

KRNM/BGS-405 MAG(2) PRB DECR 319-78/79

"ನವಭಾರತ ನಿರ್ಮಾಣವನ್ನು ತಡೆಯಲು ಬಿಡುವುದಿಲ್ಲ"

ಸ್ವಾತಂತ್ರ್ಯ ದಿನದ ಪ್ರತಿಜ್ಞೆಯಾಗಲಿ

- ರಾಷ್ಟ್ರೀಯ ಏಕತಾ ಆಂದೋಲನ

"ರಾಷ್ಟ್ರೀಯ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವವರೆಲ್ಲಾ ಮುಂದೆ ಬಂದು ಹೇಳಿ- ಯಾವುದೇ ಜಾತಿ, ಮತ, ಪಂಥಗಳ ಭೇದವಿಲ್ಲದ ನಾ... ಭಾರತೀಯರು ಯಾವುದೇ ಕೋಮುವಾದಿ, ಧಾರ್ಮಿಕ ಭಾವೋದ್ವೇಗ ಸ್ವಾತಂತ್ರ ಹೋರಾಟದ ಅಮೂಲ್ಯ ಪರಂಪರೆಯನ್ನು ನಾಶಮಾಡಲು, ಎಲ್ಲಾ ನಾಗರಿಕರಿಗೆ ನ್ಯಾಯ ಮತ್ತು ಸಮಾನತೆ ನೀಡಬಲ್ಲ ಒಂದು ನವಭಾರತದತ್ತ ನಮ್ಮ ಮುನ್ನಡೆಯನ್ನು ತಡೆಯಲು ಬಿಡುವುದಿಲ್ಲ. ಇದು ಆಗಸ್ಟ್ 15,1993 ರ ದಿನದ ನಮ್ಮ ಪ್ರತಿಜ್ಞೆಯಾಗಲಿ" ಎಂದು "ರಾಷ್ಟ್ರೀಯ ಐಕ್ಯತಾ ಆಂದೋಲನ" ದೇಶಬಾಂಧವರಿಗೆ ಕಳಕಳಿಯ ಮನವಿ ಮಾಡಿಕೊಂಡಿದೆ.

ಆಗಸ್ಟ್ 9 ರಿಂದ 15 ರ ವರೆಗೆ 'ರಾಷ್ಟ್ರೀಯ ಐಕ್ಯತಾ ವಾರಾಚರಣೆ' ನಡೆಸಲು ಕರೆ ನೀಡಿರುವ 'ಆಂದೋಲನ' ಈಗಿನ ಸನ್ನಿವೇಶದಲ್ಲಿ ವಾರಾಚರಣೆಯ ಮಹತ್ವನ್ನು ತಿಳಿಸುವ ಒಂದು ಮನವಿಯನ್ನು ಎಲ್ಲಾ ಭಾರತೀಯ ಭಾಷೆಗಳಲ್ಲಿ ಪ್ರಕಟಪಡಿಸಿದೆ.

"ಈಗ ಜನಗಳ ಮುಂದಿರುವ ಆಯ್ಕೆ ಸುಸ್ಪಷ್ಟ. ಒಂದು ಸ್ವತಂತ್ರ ದೇಶದ ಜನಗಳಾಗಿ ನಾವು ಒಗ್ಗಟ್ಟಾಗಿ ಎಲ್ಲಾ ರೀತಿಯ ಕೋಮುವಾದಿಗಳ ಆಟಗಳನ್ನು ವಿಫಲಗೊಳಿಸಿ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಿಕೊಳ್ಳಬೇಕು. ಇಲ್ಲವೇ ಮುಂಬೈ, ಅಹಮದಾಬಾದ್, ಸೂರತ್, ಭೂಪಾಲ್ ಜಯಪುರ ಮತ್ತು ಹಲವಡೆ ಪಟ್ಟಣಗಳಲ್ಲಿ, ನಗರಗಳಲ್ಲಿ ಕ...ಬಂದ ಅಮಾನುಷ ಕೃತ್ಯಗಳನ್ನು, ರಕ್ತದೋಕುಳಿಯನ್ನು ಎದುರಿಸಬೇಕು" ಎಂದು ಎಚ್ಚರಿಸಿರುವ ಮನವಿ 'ಮುಗ್ದರನ್ನು ಚಚ್ಚಿ ಹಾಕಿದ್ದನ್ನು, ವಿಧವೆಯರ, ಅಂಗಊನವಾಗಿಬಿಟ್ಟ ಮಕ್ಕಳ ಆರ್ತನಾದವನ್ನು ಕಂಡಿದ್ದೇವೆ, ಈ ರಾಕ್ಷಸೀ ಕೃತ್ಯ ಮುಂದುವರಿದರೆ ಕೋಮುವಾದದ ಕೈಯಲ್ಲಿ ಆಧುನಿಕ ಭಾರತದ ವಿನಾಶವನ್ನು ಕಾಣಬಹುದಷ್ಟೆ' ಎಂದು ಹೇಳುತ್ತಾ 'ಇದನ್ನು ನಿಲ್ಲಿಸಬೇಕು. ಶ್ರಮಪಟ್ಟು ಸಾಧಿಸಿದ ದೇಶದ ಸ್ವಾತಂತ್ರ್ಯವನ್ನು ಸ್ವತಂತ್ರ ಭಾರತದ ಐಕ್ಯತೆ ಯನ್ನು ಉಳಿಸಲೇಬೇಕು ಎಂದಿದೆ."

'ಐಕ್ಯ ಜಾತ್ಯಾತೀತ ಸಮರವದು'

ಸಾಮ್ರಾಜ್ಯಶಾಹಿಯ ವಿರುದ್ಧ ಸ್ವಾತಂತ್ರ್ಯ ಹೋರಾಟ ಎಲ್ಲಾ ಭಾರತೀಯರ ಒಂದು ಮಹಾನ್ ಜಾತ್ಯಾತೀತ ಐಕ್ಯ ಸಮರವಾಗಿತ್ತು. ಭಗತ ಸಿಂಗ್, ಅಷ್ಫಾಖುಲ್ಲಾ, ಚಂದ್ರಶೇಖರ್ ಆಝಾದ್‌ರಂತಹ ಹುತಾತ್ಮ ತಮ್ಮನ್ನು ತಾಯ್ನಾಡಿಗರ್ಪಿಸಿಕೊಂಡು ಹೋರಾಡುವವರು ಎಂದೇ ಕಂಡುಕೊಂಡಿದ್ದರೇ ಹೊರತು ಯಾವುದೇ ಸಂಕುಚಿತ ಧರ್ಮದ, ಸಂಥದ, ಕೋಮಿನ ಪ್ರತಿನಿಧಿಗಳೆಂದು ಕಂಡಿರಲಿಲ್ಲ. ಸ್ವಾತಂತ್ರ್ಯ ಹೋರಾಟದ ಈ ಸಂದೇಶ, ನಮ್ಮೆಲ್ಲರ ಈ ಜಾತ್ಯಾತೀತ ಪರಂಪರೆಗೆ ಈಗ ಕೋಮುವಾದದ ಕರಾಳ, ವಿಚ್ಛಿದ್ರಕಾರಿ ಶಕ್ತಿಗಳಿಂದ ಬೆದರಿಕೆ ಬಂದಿದೆ ಎಂದಿರುವ 'ರಾಷ್ಟ್ರೀಯ ಐಕ್ಯತಾ ಆಂದೋಲನದ' ಮನವಿ ಈ ಕೋಮುವಾದಿ ಪಕ್ಷ-ಸಂಘಟನೆಗಳು ಆರ್.ಎಸ್.ಎಸ್. ನಿರ್ದೇಶನದಲ್ಲಿ ಕೆಲಸ ಮಾಡುತ್ತಿದ್ದು ಆರ್.ಎಸ್.ಎಸ್.ಗೆ ಈ ಜಾತ್ಯಾತೀತ ಪರಂಪರೆಯಿಲ್ಲದಿರುವುದೇ ಇದಕ್ಕೆ ಕಾರಣ ಎಂದಿದೆ. ಏಕೆಂದರೆ ಅದು ಬ್ರಿಟೀಶ್ ವಿರೋಧಿಗಿಂತ ಹೆಚ್ಚಾಗಿ ಮುಸ್ಲಿಂ-ವಿರೋಧಿ ಆಗಿತ್ತು. ಅದು ದ್ವೇಷದ ಎಂತಹ ವಾತಾವರಣ ನಿರ್ಮಿಸಿತ್ತೆಂದರೆ ಆ ವಾತಾವರಣದಲ್ಲಿ ಗಾಂಧೀಜಿಯ ಕೊಲೆಯಾಯಿತು, ಸ್ವಾತಂತ್ರ್ಯ ಹೋರಾಟದ ಪರಂಪರೆಯಲ್ಲಿ ಬೆಳೆದವರು ಮುಂದೆ ಸ್ವತಂತ್ರ್ಯ ಭಾರತದಲ್ಲಿ ವಿವಿಧ ಜಾತ್ಯಾತೀತ ರಾಜಕೀಯ ಪಕ್ಷಗಳನ್ನು ಕಟ್ಟಿಕೊಂಡರೆ, ಈ ಪರಂಪರೆಯಿಲ್ಲದವರು ಜನಸಂಘ, ಈಗ ಬಿಜೆಪಿಯಂತಹ ಕೋಮುವಾದಿ ವೇದಿಕೆಗಳನ್ನು ರಚಿಸಿಕೊಂಡರು ಎಂದು ಮನವಿ ನೆನಪಿಸಿದೆ. ಇವರು ಆಝಾದ್ ಹಿಂದ್‌ಅಥವಾ 'ಸ್ವತಂತ್ರ ಭಾರತ'ಎಂದೆನ್ನುವ ಬದಲು 'ಹಿಂದೂ ರಾಷ್ಟ್ರ' ಎಂದೆನ್ನುತ್ತಿದ್ದಾರೆ. ಈ ರೀತಿ ಒಂದು ಮತೀಯ ಪ್ರಭುತ್ವವನ್ನು ಹೇರುವುದೆಂದರೆ ಭಾರತದ ವಿಘಟನೆ ಖಂಡಿತ ಎಂದೇ ಅರ್ಥ ಎಂದು 'ರಾಷ್ಟ್ರೀಯ ಐಕ್ಯತಾ ಆಂದೋಲನ' ಹೇಳಿದೆ. ಭಾರತದ ವಿವಿಧತೆಯನ್ನು ಒಪ್ಪಿಕೊಂಡು ಎಲ್ಲಾ ಮತ- ಧರ್ಮಗಳ ಬಗ್ಗೆ ಸಹಿಷ್ಣುತೆ ತೋರಿದರೆ ಮಾತ್ರವೇ ಭಾರತ ಒಂದಾಗಿರಲು, ಸ್ವತಂತ್ರವಾಗಿರಲು ಸಾಧ್ಯ. ಭಾರತ ಜಾತ್ಯಾತೀತವಾಗಿರಬೇಕಾದರೆ ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸಬೇಕು ಎಂದು ಅದು ಹೇಳಿದೆ.

"ಇತ್ತೀಚಿನ ದಿನಗಳಲ್ಲಿ ಭಾರತದ ವಿಭಜನೆಯ ದಿನಗಳ ಭಯಾನಕ ಘಟನೆಗಳ ಪುನರಾವರ್ತನೆಯಾಗಿದೆ. ಕೋಮುವಿಷ ವ್ಯಾಪಿಸಿದುದರ ದುಷ್ಟ ಪರಿಣಾಮವಿದು. ಬಹುಸಂಖ್ಯಾಕ ಕೋಮುವಾದದ ಆಕ್ರಮಣ ಹೆಚ್ಚಿದಂತೆ ಅಲ್ಪಸಂಖ್ಯಾತ ಮೂಲಭೂತವಾದಕ್ಕೂ ಕುಮ್ಮಕ್ಕು ದೊರೆಯುತ್ತದೆ. ಡಿಸೆಂಬರ್ 6 ರ ನಂತರ ಮುಂಬೈಯ ರಕ್ತದೋಕುಳಿ, ಬಾಂಬ್ ಸ್ಫೋಟಗಳು ಒಂದು ಎಚ್ಚರಿಕೆ ನೀಡಿವೆ- ಕೋಮು ಮತಾಂಧರ ಮಾತು ನಡೆಯುವಂತಾದರೆ ಈ ದೇಶಕ್ಕೆ ಉಳಿಗಾಲವಿಲ್ಲ" ಎಂದಿದೆ 'ರಾಷ್ಟ್ರೀಯ ಐಕ್ಯತಾ ವಾರಾಚರಣೆ' ಗೆ ಕರೆನೀಡಿರುವ ಈ ಮನವಿ.

ಆರ್ಥಿಕ ಸಮಾನತೆಗಾಗಿ, ಸಾಮಾಜಿಕ ನ್ಯಾಯಕ್ಕಾಗಿ ದುಡಿಯುವ ಜನಗಳ ಹೋರಾಟ ಕೋಮುವಾದೀ ಶಕ್ತಿಗಳಿಗೆ ಅವರ ವಿಚ್ಛಿದ್ರಕಾರಿ ಘೋಷಣೆಗಳಿಗೆ ಎಷ್ಟು ಯಶಸ್ವಿಯಾಗಿ ಪ್ರತ್ಯುತ್ತರ ನೀಡಿ ಮೂಲೆಗೊತ್ತಲು ಸಾಧ್ಯ ಎಂಬುದರ ಮೇಲೆ ಅವಲಂಭಿಸಿದೆ. ಖಾಸಗೀಕರಣ, ಶಿಕ್ಷಣದ ವ್ಯಾಪಾರೀಕರಣ ವಿದ್ಯಾರ್ಥಿಗಳಿಗೆ ಶಿಕ್ಷಣಾವಕಾಶಗಳನ್ನು ವಂಚಿಸಿದೆ, ಯುವಕರಿಗೆ ಉದ್ಯೋಗಾವಕಾಶಗಳನ್ನು ವಂಚಿಸಿದೆ. ಉತ್ತಮ ಭವಿಷ್ಯವಿಲ್ಲದಂತೆ ಮಾಡಿದೆ. ಕೋಮುಶಕ್ತಿಗಳು ಜಾತ್ಯಾತೀತ ವೈಜ್ಞಾನಿಕ ಶಿಕ್ಷಣ ದೊರೆಯದಂತೆ ಮಾಡಲು ಪ್ರಯತ್ನಿಸಿವೆ. ಯುವಜನರ, ಜನಸಾಮಾನ್ಯರ, ಕ್ರೋಧವನ್ನು ತಮ್ಮ ಸ್ವಾರ್ಥ ಸಾಧನೆಗೆ ಬಳಸಲು ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಭಾರತದ ಜನರೆದುರು ಇರುವ ಆಯ್ಕೆ ಸ್ಪಷ್ಟ ಎನ್ನುತ್ತಾ ಈ 'ವಾರಾಚರಣೆ'ಯನ್ನು ಯಶಸ್ವಿಗೊಳಿಸಲು 'ರಾಷ್ಟ್ರೀಯ ಐಕ್ಯತಾ ಆಂದೋಲನ' ಕರೆ ನೀಡಿದೆ.

ಬರಗಾಲದ ದವಡೆಯಲ್ಲಿ ಸಿಲುಕಿದ ರಾಜ್ಯ

ಪುಟ 3ರಿಂದ

ರೂಪಾಯಿ ಖರ್ಚು ಮಾಡಲಾಗುತ್ತಿದೆ. ಆ ಹಣವನ್ನು ನೀರಾವರಿ ಯೋಜನೆಗಳಿಗಾಗಿ, ಕೆರೆ, ಬಾವಿ ತೋಡಲು, ಪ್ರಾಥಮಿಕ ಶಾಲೆ ಕಟ್ಟಡಗಳಿಗಾಗಿ ವ್ಯಯಮಾಡಬೇಕು. ಉದ್ಯೋಗ ಹಾರೈಸುವ ಜನರನ್ನು ಆ ಕೆಲಸಗಳಲ್ಲಿ ತೊಡಗಿಸಬೇಕು. ಕ್ಷುಲ್ಲಕ, ತಾತ್ಕಾರ್ತಿಕ ಕೆಲಸಗಳಿಗಾಗಿ ಆ ಹಣ ಖರ್ಚು ಮಾಡಬಾರದು.

ಈ ವರ್ಷ ಮಳೆಯ ಅಭಾವದಿಂದಾಗಿ ಆಹಾರ ಧಾನ್ಯದ ಕೆಲಸದ ಮೇವಿನ ಕೊರತೆ ಮಾತ್ರವಲ್ಲ ನೀರಿನ ಕೊರತೆಯೂ ಆಗಿರುವುದರಿಂದ ಸರಕಾರ ಕೂಡಲೇ ಎಲ್ಲಾ ರಾಜಕೀಯ ಪಕ್ಷಗಳ, ರೈತ, ಕೃಷಿಕೂಲಿಗಾರರ ಸಂಘಟನೆಗಳ ರಾಜ್ಯ ಮಟ್ಟದ ಸಭೆ ಕರೆದು ಎಲ್ಲರ ಜೊತೆ ಸಮಾಲೋಚನೆ ನಡೆಸಿ ಜಿಲ್ಲಾ ಮಟ್ಟದ ಕಮಿಟಿಗಳನ್ನು ನೇಮಿಸಿ ಪರಿಹಾರ ಕಾರ್ಯಗಳನ್ನು ಶಿಸ್ತುಬದ್ಧವಾಗಿ, ಯಾವುದೇ ತರದ ದುರುಪಯೋಗವಾಗದಂತೆ ನೋಡಿಕೊಂಡು ನಡೆಸುವ ವ್ಯವಸ್ಥೆ ಮಾಡಬೇಕಾಗಿದೆ.

ಹಿಂದಿನಂತೆ ಬರೇ ಅಧಿಕಾರಿಗಳನ್ನು, ನೌಕರರ ಮೇಲೆ ಮಾತ್ರ ನಂಬಿ ಕೆಲಸ ಮಾಡಿದರೆ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವುದರಲ್ಲಿ ಸಂಶಯವಿಲ್ಲ. ಹಣದುಪಯೋಗವಾಗುತ್ತದೆ. ಕೆಲಸ ಕಾರ್ಯಗಳು ಆಗದೆ ಹಾಹಾಕಾರ ಉಂಟಾಗಿ ಪರಿಸ್ಥಿತಿ ಕೈಮೀರಿ ಹೋಗುವ ಸಂಭವಿದೆ.

ಆಂತರಿಕ ಜಗಳದಲ್ಲಿ ತೊಡಗಿರುವ... ಅಧಿಕಾರಕ್ಕಾಗಿ ಕಚ್ಚಾಡುತ್ತಿರುವ ಕಾಂಗ್ರೆಸ್ಸಿಗಾಗಲೀ, ಕಾಂಗ್ರೆಸ್ ಸರಕಾರಕ್ಕಾಗಲೀ ಮಳೆಯ ಅಭಾವದಲ್ಲಿ ಉಂಟಾಗಿರುವ ಗಂಭೀರ ಪರಿಸ್ಥಿತಿಯ ಬಿಸಿ ತಟ್ಟಿದಂತೆ ಕಂಡು ಬರುವುದಿಲ್ಲ. ಈ ಗಂಭೀರ ಪರಿಸ್ಥಿತಿಯನ್ನು ಅರಿತು, ಸಕಾಲದಲ್ಲಿ ಸಮರ್ಪಕ ಪರಿಹಾರೋಪಾಯಗಳನ್ನು ಕೈಗೊಳ್ಳಲು ಸರಕಾರ ಮುಂದಾಗದಿದ್ದರೆ ಜನತೆ ಕಾಂಗ್ರೆಸ್ಸನ್ನೇ ನುಂಗಿಬಿಡಬಹುದೆಂಬುದನ್ನು ಆಳುವ ಪಕ್ಷದ ಮುಖಂಡರು ಅರಿತುಕೊಳ್ಳುವುದು ಅಗತ್ಯ.

ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ವಿರೋಧ ಪಕ್ಷಗಳ ಜವಾಬ್ದಾರಿ ಹೆಚ್ಚಾಗಿದೆ. ಎರಡೂ ಕಮ್ಯುನಿಸ್ಟ್ ಪಕ್ಷಗಳೂ, ಈಗ ವಿಲೀನಗೊಂಡ ಜನತಾದಳವೂ, ಅವುಗಳ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳು ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಒದಗಿಸುವಂತೆ ಸರಕಾರದ ಮೇಲೆ ಒತ್ತಾಯ ತರಲು ಸಂಘಟಿತ ಐಕ್ಯ ಚಳುವಳಿ ನಡೆಸಿ, ಸರಕಾರ ಕೈಗೊಳ್ಳುವ ಪರಿಹಾರ ಕಾರ್ಯಗಳ... ಲ್ಲದರ ಮೂಲಕ ಜನರಿಗೆ ಪರಿಹಾರ ಸ... ಯಾಗಿ ಲಭ್ಯವಾಗುವಂತೆ ನೋಡಿಕೊಳ್ಳಬೇಕಾಗಿದೆ. ಈ ಜವಾಬ್ದಾರಿ ಹೊರಲು ಮುಂದಾಗೋಣ.

ಗ್ರಾಹಕ ಬೆಲೆ ಸೂಚ್ಯಂಕ - ಓದುಗರ ಗಮನಕ್ಕೆ

ಕಳೆದ ವಾರ ಹಾಗೂ ಎರಡು ತಿಂಗಳ ಹಿಂದೆ ಈ ಪುಟದಲ್ಲಿ ಪ್ರಕಟವಾದ "ಗ್ರಾಹಕ ಬೆಲೆ ಸೂಚ್ಯಂಕ"ದಲ್ಲಿ 'ಕೇಂದ್ರ ಸರಣಿ'ಯಲ್ಲಿ ಹುಬ್ಬಳ್ಳಿ-ಧಾರವಾಡ, ಬೆಳಗಾಂ ಮತ್ತು ಮಡಿಕೇರಿಗಳ ಸೂಚ್ಯಂಕವನ್ನು 1960 ರ ಬೆಲೆಗಳಲ್ಲಿ ಪರಿವರ್ತಿಸಿ ನೀಡಿರುವುದು ಸರಿಯಲ್ಲ, ಏಕೆಂದರೆ 1960ರ ಸರಣಿ ಈ ಕೇಂದ್ರಗಳಿಗೆ ಇರಲಿಲ್ಲ ಎಂದು ಸಿಐಟಿಯು ರಾಜ್ಯಸಮಿತಿ 'ಐಕ್ಯರಂಗ'ದ ಗಮನಕ್ಕೆ ತಂದಿದ್ದಾರೆ. ಇದನ್ನು ನಮ್ಮ ಓದುಗರು ಗಮನಿಸಬೇಕಾಗಿ ಕೋರುತ್ತೇವೆ. ಈ ತಪ್ಪಿಗಾಗಿ ಕ್ಷಮೆ ಕೋರುತ್ತೇವೆ.

ಕಾವೇರಿ ನೀರಿನ ವಿವಾದ ....

ಪುಟ 1ರಿಂದ

ಉಗಳನ್ನು ಎದುರಿಸಲು ತಮ್ಮ ಸಂಪುಟ ಹಾಗೂ ಶಾಸಕಾಂಗ ಪಕ್ಷಗಳಲ್ಲಿ ತಮಗೆ ಬೆಳೆಯುತ್ತಿರುವ ವಿರೋಧವನ್ನು ಎದುರಿಸಲು ಹೆಣಗುತ್ತಿರುವ ವೀರಪ್ಪ ಮೊಯಿಲಿಯವರನ್ನು ಉಪಯೋಗಿಸಿಕೊಂಡಿದೆ ಎಂಬ ಅಭಿಪ್ರಾಯ ಮೂಡಿದೆ.

ಕಾವೇರಿ ಆಯೋಗದ ಮಧ್ಯಂತರ ತೀರ್ಪು ಪ್ರತಿ ತಿಂಗಳೂ ಇಷ್ಟು ಎಂದು ನಿಖರವಾಗಿ ನಿಗದಿ ಮಾಡಿ ಒಟ್ಟಾರೆ ಇದೇ ವರ್ಷದಲ್ಲಿ 205 ಟಿಎಂಸಿ ನೀರು ಬಿಡಬೇಕು ಎಂದು ವಿಧಿಸಿತ್ತು. ಇದು ಕರ್ನಾಟಕದ ಹಿತಗಳಿಗೆ ಮಾರಕ ಹಾಗೂ ನೀರೇ ಬರದಿದ್ದರೆ ಬಿಡುವುದು ಹೇಗೆ ಆದ್ದರಿಂದ ಜಾರಿ ಮಾಡಲಸಾಧ್ಯ ಎಂಬುದು ಕರ್ನಾಟಕದ ಜನತೆಯವಾದದ ಪರಿಣಾಮವಾಗಿ ಆಯೋಗ ನೀರಿಲ್ಲದಿರುವ ವರ್ಷಗಳಲ್ಲಿ ಎರಡೂ ರಾಜ್ಯಗಳೂ ಕಷ್ಟವನ್ನು ಹಂಚಿಕೊಳ್ಳಬೇಕು ಎಂದು ಹೇಳಿತ್ತು.

ಆದರೆ ಈಗ ಮಳೆ ಬಾರದ ಕಷ್ಟ ಬಂದಿರುವ ಈ ವರ್ಷ ಮಧ್ಯಂತರ ತೀರ್ಪನ್ನು ಜಾರಿಗೊಳಿಸುವುದು ಹೇಗೆ? ಕರ್ನಾಟಕದ ಹಿತವನ್ನು ರಕ್ಷಿಸುವುದು ಹೇಗೆ? ಅದಕ್ಕೆ ಕೇಂದ್ರ ...ಕಾರ ನೇಮಿಸುವ ಜಾರಿ ಸಮಿತಿ, ಉಸ್ತುವಾರಿ ಸಮಿತಿ ಇವು ಉತ್ತರವೇ? ಇವುಗಳಿಗೆ ...ಂದಿನ ದಿನಗಳಲ್ಲಿ ಉತ್ತರ ಹುಡುಕಬೇಕಾ...ದೆ.

ಜುಲೈ 23ರಂದು ಸಂಜೆ 6.30ರಿಂದ 10.15ರವರೆಗೆ ನಡೆದ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳು ಮೇಲಿನ ಸಮಿತಿ ಸಭೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳು ಸ್ಪಷ್ಟವಾಗಿ "ನಾನು ಯಾವುದೇ ತರದ ಮೊನಿಟರಿಂಗ್ ಸಮಿತಿ ರಚನೆಗೆ ಶುಕ್ಲಾರವರು ಹೇಳಿದ ಹಾಗೆ, ನನ್ನ ಸರಕಾರದ ಪರವಾನಿಗಿ ಕೊಡಲಿಲ್ಲ" ಎಂದು ಸ್ಪಷ್ಟವಾಗಿ ಹೇಳಿದರು. ಮಾತ್ರವಲ್ಲ, ಈ ಬಗ್ಗೆ ತಾನು ಕೇಂದ್ರ ಸರಕಾರದೊಡನೆ ಮಾಡಿದ ಪತ್ರ ವ್ಯವಹಾರಗಳ ಕುರಿತು ಮಾಹಿತಿ ನೀಡಿ ಎಲ್ಲರನ್ನು ಈ ಕುರಿತಾದ ಊಹಾಪೋಹಗಳ ಹಿನ್ನೆಲೆಯಲ್ಲಿ ವಿಷಯವನ್ನು ಸ್ಪಷ್ಟಪಡಿಸಿದರು. ಈ ಸಭೆ "ಕೇಂದ್ರ ಸರಕಾರವು ತಮಿಳುನಾಡಿನ ಮುಖ್ಯಮಂತ್ರಿಯವರ ದಿಢೀರ್ ರಾಜಕೀಯ ಉಪವಾಸದ ಕ್ರಮಕ್ಕೆ ಒಪ್ಪಿ ಏನಾದರೂ ಆಶ್ವಾಸನೆ ನೀಡಿದ್ದರೆ, ಅದಕ್ಕೆ ಕರ್ನಾಟಕದ ಸರಕಾರ ಮತ್ತು ಕರ್ನಾಟಕದ ಜನತೆಯ ಯಾವ ಸಹಕಾರವಿಲ್ಲ" ಎಂಬುದನ್ನು ಸ್ಪಷ್ಟಪಡಿಸಿತು. ಕೊನೆಗೆ, ಈ ಸಮಸ್ಯೆಯ ಪರಿಹಾರಕ್ಕೆ ಈ ವಿವಾದದಲ್ಲಿ ಕೂಡಲೇ ಪ್ರಧಾನಿಯವರು ಸ್ವತಃ ಮಧ್ಯಪ್ರವೇಶಿಸಿ ಸಂಧಾನ ನಡೆಸಿ ಇತ್ಯರ್ಥ ಮಾಡುವುದೊಂದೇ ಹಾದಿ ಎಂದು ಈ ಸಭೆಯ ಹೇಳಿಕೆ ಸ್ಪಷ್ಟಪಡಿಸಿತು.

ಕರ್ನಾಟಕದ ಹಿತಗಳಿಗೆ ಮಾರಕವಾಗದಂತಹ ಹಾಗೂ ಅಂಧಾಭಿಮಾನಕ್ಕೆ ಅನಾಹುತಗಳಿಗೆ ಎಡೆಕೊಡದಂತಹ ದಾರಿಯಲ್ಲಿ ಸಾಗೋಣ.

ನರ್ಮದಾ ಯೋಜನೆ - ಸಿ.ಪಿ.ಐ(ಎಂ) ಒತ್ತಾಯ

ನರ್ಮದಾ ಕಣಿವೆಯಲ್ಲಿ ಸರ್ದಾರ್ ಸರೋವರ್ ಯೋಜನೆಯಿಂದ ಮುಳುಗಡೆಯಾಗುವ ಹಳ್ಳಿಗಳ ಜನಗಳ ಮರುವಸತಿ ಕ್ರಮಗಳನ್ನು ಪೂರ್ಣವಾಗಿ ಜಾರಿಗೊಳಿಸದೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬಾರದು ಎಂದು ಸಿಪಿಐ(ಎಂ) ಪ್ರಧಾನಮಂತ್ರಿಗಳನ್ನು ಆಗ್ರಹಪಡಿಸಿದೆ. ಲೋಕಸಭೆಯಲ್ಲಿ ಸಿಪಿಐ(ಎಂ) ನ ಮುಖ್ಯ ಸಚೇತಕ ಕಾಂ. ಸೈಫುದ್ದೀನ್ ಚೌಧುರಿ ಈ ಬಗ್ಗೆ ಪ್ರಧಾನಿಗಳಿಗೆ ಒಂದು ಪತ್ರ ಬರೆದು ಒಂದು ಸಮಗ್ರ ಮರುವಸತಿ ಕ್ರಮವನ್ನು ರೂಪಿಸಿ ಮುಳುಗಡೆ ಎದುರಿಸುವ ಹಳ್ಳಿಗಳ ಜನರ ಸಮಸ್ಯೆಗಳನ್ನು ಪರಿಹರಿಸದಿರುವಂತಹ ಸ್ಥಿತಿ ಮೂಲಭೂತ ಮಾನವೀಯ ಭಾವನೆಗಳಿಗೇ ವಿರುದ್ಧವಾದದ್ದು ಎಂದಿದ್ದಾರೆ.

ಸರ್ದಾರ್ ಸರೋವರ್ ಯೋಜನೆಯ ಜಾರಿಯ ಪರಿಣಾಮವಾಗಿ ನರ್ಮದಾ ಕಣಿವೆಯಲ್ಲಿ ಒಂದು ಗಂಭೀರ ಸನ್ನಿವೇಶ ಸೃಷ್ಟಿಯಾಗಿದೆ ಎಂದಿರುವ ಸೈಫುದ್ದೀನ್ ಚೌಧುರಿ " ನಾವು ಸಿಪಿಐ(ಎಂ) -ದೊಡ್ಡ ಅಣೆಕಟ್ಟುಗಳನ್ನು ಕಣ್ಣು ಮುಚ್ಚಿ ವಿರೋಧಿಸುವವರಲ್ಲ. ಆದರೆ ಇಂತಹ ಬೃಹತ್ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ಸಂಬಂಧಪಟ್ಟ ಸಾಮಾಜಿಕ ಆತಂಕಗಳಿಗೆ ಕಿವಿಗೊಡುವುದು ಅಷ್ಟೇ ಮಹತ್ವದ ಅಂಶ ಎಂಬ ಅಭಿಪ್ರಾಯ ನಮ್ಮದು. ಮುಖ್ಯವಾಗಿ,ಈ ಯೋಜನೆಯಿಂದ ತೊಂದರೆಗೊಳಗಾಗುವ ಜನಗಳ ಮರುವಸತಿಯ ಪ್ರಶ್ನೆ ಅತ್ಯಂತ ಆದ್ಯತೆಯ ಪ್ರಶ್ನೆ. ಸಾಮಾನ್ಯವಾಗಿ ಇಂತಹ ಸ್ಥಾನಪಲ್ಲಟದ ಬಹುಪಾಲು ಹೊರೆ ಅತ್ಯಂತ ಬಡ ಜನವಿಭಾಗಗಳ, ಬುಡಕಟ್ಟು ವಿಭಾಗದ ಜನಗಳೇ ಹೊರಬೇಕಾಗಿ ಬರುತ್ತದೆ.ಎಂಬ ನಮ್ಮ ಇದುವರೆಗಿನ ಅನುಭವದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಇನ್ನಷ್ಟು ಮಹತ್ವಪೂರ್ಣವಾಗುತ್ತದೆ" ಎಂದಿದ್ದಾರೆ.

ಕೇಂದ್ರ ಸರ್ಕಾರ ಮತ್ತು 'ನರ್ಮದಾ ಬಚಾವೋ ಆಂದೋಲನ'ದ ನಡುವೆ ಮಾತುಕತೆಗಳ ನಂತರ ಈ ವಿವಾದಾಸ್ಪದ ಸಂಗತಿಗಳ ಬಗ್ಗೆ ಪರಿಶೀಲಿಸಲು ವಿಜ್ಞಾನ ಹಾಗೂ ತಜ್ಞ ನಾಗರಿಕರ ಒಂದು ಸ್ವತಂತ್ರ ತಂಡವನ್ನು ರಚಿಸಲು ನಿರ್ಧರಿಸಲಾಗಿದೆಯೆಂದು ತಿಳಿದು ಬಂದಿದೆ. ಈ ತಂಡದ ಕಾರ್ಯವ್ಯಾಪ್ತಿಯಲ್ಲಿ ಮರುವಸತಿಯ ಪ್ರಶ್ನೆಯನ್ನು ಒಂದು ಅತೀ ಮುಖ್ಯ ಪ್ರಶ್ನೆಯಾಗಿ ಸೇರಿಸಬೇಕು. ಈ ತಂಡ ತಕ್ಷಣ ತನ್ನ ಕೆಲಸ ಆರಂಭಿಸಬೇಕು ಎಂದು ಕಾಂ. ಸೈಫುದ್ದೀನ್ ಚೌಧುರಿ ತಮ್ಮ ಪತ್ರದಲ್ಲಿ ಆಗ್ರಹಪಡಿಸಿದ್ದಾರೆ -ಮುಳುಗಡೆಯಾಗುವ ಹಳ್ಳಿಗಳ ಜನರ ಮರುವಸತಿಯ ಪ್ರಶ್ನೆ ಈಗಲೂ ಮುಖ್ಯ ಪ್ರಶ್ನೆಯಾಗದೆ ಬದಿಗೆ ತಳ್ಳಲ್ಪಟ್ಟಿರುವುದರಿಂದ ಉಂಟಾಗಿರುವ ಸನ್ನಿವೇಶವನ್ನು ಸರಿಪಡಿಸಲು ಪ್ರಧಾನ ಮಂತ್ರಿಗಳು ತಮ್ಮ ಪ್ರಭಾವವನ್ನು ಬೀರಬೇಕೆಂದು ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ.

ಚುನಾವಣಾ ಕಮಿಶನರ್ ಸ್ವೇಚ್ಚಾಚಾರ

-ಪೊಲಿಟ್‌ಬ್ಯೂರೋ ಖಂಡನೆ

ಮುಖ್ಯ ಚುನಾವಣಾ ಕಮಿಶನರ್ ಅವರು ತಮ್ಮ ಸ್ವೇಚ್ಛಾಚಾರದ ವರ್ತನೆಯಿಂದ ಪಶ್ಚಿಮಬಂಗಾಳ ರಾಜ್ಯದ ಆರು ರಾಜ್ಯಸಭಾ ಸ್ಥಾನಗಳಿಗೆ ಪ್ರಾತಿನಿಧ್ಯ ವಿಲ್ಲದಂತೆ ಮಾಡುತ್ತಿದ್ದಾರೆ; ಇದು ಮುಂಬರುವ ಸಂಸತ್ತಿನಲ್ಲಿ ಅಧಿವೇಶನದ ಹಿನ್ನೆಲೆಯಲ್ಲಿ ಅತ್ಯಂತ ಅನ್ಯಾಯದ ವರ್ತನೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ಈ ಆರು ಸ್ಥಾನಗಳ ಚುನಾವಣೆಗಳಿಗೆ ನೋಟಿಫಿಕೇಶನ್ ನೀಡುವಲ್ಲಿ ಚುನಾವಣಾ ಆಯೋಗ ಮಾಡುತ್ತಿರುವ ವಿಳಂಬ ಅಸಮರ್ಥನೀಯ. ಪಶ್ಚಿಮ ಬಂಗಾಳ ರಾಜ್ಯಕ್ಕೆ ಮುಖ್ಯ ಚುನಾವಣಾ ಅಧಿಕಾರಿಯ ನೇಮಕವನ್ನು ಶೇಷನ್‌ರವರು ವಿಳಂಬ ಮಾಡುತ್ತಾ ಬಂದರು. ರಾಜ್ಯಸರಕಾರದ ಹೈಕೋರ್ಟ್ ಕಟ್ಟೆ ಹತ್ತಿ ಆ ಸಮಸ್ಯೆಗೆ ಪರಿಹಾರ ಪಡೆಯುವವರೆಗೂ ವಿಳಂಬ ಮಾಡಿದರು. ಈಗ ಮುಖ್ಯ ಚುನಾವಣಾ ಅಧಿಕಾರಿಯ ನೇಮಕವಾಗಿ ಎರಡು ವಾರಗಳಾದರೂ ನೋಟಿಫೀಕೇಶನ್ ಹೊರಡಿಸಿಲ್ಲ ಎಂದು ಜುಲೈ 15 ರಂದು ಪಿ.ಬಿ. ನೀಡಿದ ಹೇಳಿಕೆಯೊಂದರಲ್ಲಿ ಆಪಾದಿಸಿದೆ. ಇದಕ್ಕೆ ಚುನಾವಣಾ ಆಯೋಗ ನೀಡಿರುವ ಕಾರಣ ಬುಡವಿಲ್ಲದ್ದು, ರಾಜ್ಯ ಸರಕಾರ ಆಗಲೇ ಅಗತ್ಯ ವಿವರಗಳನ್ನು ಆಯೋಗಕ್ಕೆ ಕಳಿಸಿದ್ದು ರಾಷ್ಟ್ರಪತಿಗಳ ವಿದೇಶ ಪ್ರಯಾಣದ ಮೊದಲೇ ನೋಟಿಫೀಕೇಶನ್ ಜಾರಿಮಾಡುವುದು ಸಾಧ್ಯವಿತ್ತು ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ಮುಖ್ಯ ಚುನಾವಣಾ ಕಮಿಶನರ್ ಈ ರೀತಿ ಮನಬಂದಂತೆ ವರ್ತಿಸಿ ಈ ಬಗ್ಗೆ ಇರುವ ಎಲ್ಲಾ ನೀತಿ- ನಿಯಮಾವಳಿ, ಸಂಪ್ರಾದಾಯಗಳನ್ನು ಮೀರುತ್ತಿದ್ದಾರೆ. ಇದನ್ನು ಎಲ್ಲಾ ಸಾರ್ವಜನಿಕರು ಪ್ರತಿಭಟಿಸಬೇಕು, ಪಶ್ಚಿಮಬಂಗಾಳದಿಂದ ರಾಜ್ಯಸಭೆಗೆ ಚುನಾವಣೆಗಳ ಸೂಚನೆಯನ್ನು ತಕ್ಷಣ ಜಾರಿ ಮಾಡಬೇಕೆಂದು ಒತ್ತಾಯಿಸಬೇಕು ಎಂದು ಕರೆ ನೀಡಿದೆ.